ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಮಂಗಳವೇಡೆ ಶ್ರೀನಿವಾಸರಾಯರು

ಶ್ರೀಮತಿ ಕವಿತಾ ಕುಲಕರ್ಣಿ

ಕನ್ನಡ ಪುಸ್ತಕ ಪ್ರಾಧಿಕಾರ

# ಮಂಗಳ ವೇಡೆ
# ಶ್ರೀನಿವಾಸರಾಯರು

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು
ಡಾ. ಸಿದ್ಧಲಿಂಗಯ್ಯ

ಸಂಪಾದಕರು
ಡಾ. ಕರೀಗೌಡ ಬೀಚನಹಳ್ಳಿ

# ಮಂಗಳ ವೇಡೆ ಶ್ರೀನಿವಾಸರಾಯರು

ಕವಿತಾ ಕುಲಕರ್ಣಿ
(ಹೈದರಾಬಾದ್)

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು-೫೬೦ ೦೦೨

**MANGALA VEDE SHRINIVASRAYARU** A Monograph on Shrinivasrayaru in Kannada Written by Kavitha Kulkarni Published By ***B.H Mallikarjun,*** Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ – ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012
Pages : xvi + 39
Copies : 1000
Price : ₹ 40.00

ಮೊದಲ ಮುದ್ರಣ : ೨೦೧೨
ಪುಟಗಳು : xvi + ೩೯
ಪ್ರತಿಗಳು : ೧೦೦೦
ಬೆಲೆ : ₹ ೪೦.೦೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
**ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.**
ಆಡಳಿತಾಧಿಕಾರಿಗಳು
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:
**ಮೆ|| ಪ್ರಿಂಟ್ ಪಾರ್ಕ್**
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು
ಡಾ. ಸಿದ್ಧಲಿಂಗಯ್ಯ

ಸಂಪಾದಕರು
ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ ಮಂಡಳಿ
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಶ್ರೀ ಹೊರೆಯಾಲ ದೊರೆಸ್ವಾಮಿ
ಪ್ರೊ. ಸುಕನ್ಯಾ ಮಾರುತಿ
ಡಾ. ಎಚ್. ಟಿ. ಪೋತೆ
ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ
ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ,

ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯ ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ–ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು

ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರು ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ, ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚೆಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ

ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

**ಡಾ. ಕರೀಗೌಡ ಬೀಚನಹಳ್ಳಿ**
ಸಂಪಾದಕ

# ಪರಿವಿಡಿ


| | |
|---|---|
| ನಖಶಿಖಾಂತ ಕನ್ನಡಿಗ ಮಂಗಳವೇಢೆ | 1 |
| ಧಾರವಾಡದ ಮುಕ್ತ ವಾತಾವರಣ | 3 |
| 'ಕನ್ನಡ ನವಜೀವನ' ಉದಯ | 6 |
| ಕನ್ನಡಮಯ ಬೆಳಗಾವಿ ಕಾಂಗ್ರೆಸ್ | 8 |
| ಏಕೀಕರಣ ಸಭೆಯ ಕಾರ್ಯದರ್ಶಿ | 10 |
| ಕರ್ನಾಟಕ ವಣಿಕ ಸಂಘ | 12 |
| 'ಕನ್ನಡಿಗ' ಕ್ಕೆ ದಂಡ | 14 |
| ಗುಪ್ತ ತಯಾರಿ – ಯಶಸ್ವೀ ಸಮ್ಮೇಳನ | 15 |
| 'ಕನ್ನಡಿಗ'ವು 'ಸಂಯುಕ್ತ ಕರ್ನಾಟಕ'ದಲ್ಲಿ ಐಕ್ಯ | 17 |
| ಬಂಧನ | 19 |
| 'ಕರ್ನಾಟಕ ಏಕೀಕರಣ' ಪುಸ್ತಕ | 21 |
| ರಾಜಧಾನಿಯಲ್ಲಿ ಕನ್ನಡದ ದುಸ್ಥಿತಿ | 24 |
| "ಸರ್ವತ್ರ ಕನ್ನಡ ಬರಲಿ" | 26 |
| ರಾಜಾಜಿ ಬರಹಕ್ಕೆ ತೀವ್ರ ಪ್ರತಿಕ್ರಿಯೆ | 28 |
| 'ನಾಮಕರಣ'ದ ನಂತರ | 30 |
| 'ಕನ್ನಡಕ್ಕಾಗಿ ಛಲ' | 33 |
| ಖಾದೀ ಪ್ರೇಮ | 35 |
| ಸ್ವಾತಂತ್ರ್ಯ ಚಳವಳಿಯ ಕಷ್ಟಗಳು | 38 |

–: ಶ್ರೀ :–

# ನಖಶಿಖಾಂತ ಕನ್ನಡಿಗ ಮಂಗಳವೇಢೆ

'ನಖಶಿಖಾಂತ ಕನ್ನಡಿಗ'ನೆಂದು ತಾವೇ ಹೇಳಿಕೊಂಡಿರುವ ಬಲು ಅಪರೂಪದ ಧೀಮಂತ ವ್ಯಕ್ತಿ ಮಂಗಳವೇಢೆ ಶ್ರೀನಿವಾಸರಾಯರು. ಇವರೇ ನಮ್ಮ ಒಲವಿನ ಅಜ್ಜ. ಅವರ ಮೊಮ್ಮಕ್ಕಳಾದ ನಾವು ಇವರನ್ನು 'ಬಾಬಾ' ಎಂದು ಕರೆಯುತ್ತಿದ್ದೆವು. ಅವರು ನಮ್ಮನ್ನಗಲಿದ್ದರೂ ಸಹ ನಮ್ಮ ನಡೆ – ನುಡಿಗಳಲ್ಲಿ ಹಾಸುಹೊಕ್ಕಾಗಿ ಆವರಿಸಿ ಇಂದಿಗೂ ಪ್ರತಿ ಹೆಜ್ಜೆ ಅವರೇ ಇಡಿಸುತ್ತಿದ್ದಾರೆಂಬುವಷ್ಟು ಪ್ರಭಾವ ಬೀರಿರುವುದು ಉತ್ಪ್ರೇಕ್ಷೆಯ ಮಾತಲ್ಲ! ಯಾವುದೇ ಕೆಲಸವನ್ನು ಮಾಡಿದಾಗಲೂ 'ನಮಗೆ ಬಾಬಾ ಹೀಗೆ ಹೇಳಿಕೊಟ್ಟಿದ್ದರೆಂದು' ಬಹಳ ಗೌರವದಿಂದ ಸ್ಮರಿಸುತ್ತೇವೆ. ನಾಡು – ನುಡಿಗಾಗಿ ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟ ದೇಶಭಕ್ತ ಹಾಗೂ ದಾರ್ಶನಿಕರಾದ ಅವರ ಜೀವನದ ಧ್ಯೇಯವನ್ನು, ಆದರ್ಶವನ್ನು ಆರಾಧಿಸುತ್ತಾ ಅವರ ಆಪ್ತರಾದ ಕನ್ನಡಿಗರು ಬರೆದಿರುವಂಥ ಮಂಗಳವೇಢೆ ಶ್ರೀನಿವಾಸರಾಯರ 'ಜನ್ಮ ಶತಮಾನೋತ್ಸವ ಸ್ಮರಣೆ'ಯಲ್ಲಿನ ಲೇಖನಗಳನ್ನೋದಿದಾಗ ಶ್ರೀನಿವಾಸರಾಯರ ಅಮೋಘವಾದ ವ್ಯಕ್ತಿತ್ವದ ಪರಿಚಯ ಮೂಡಿಬಂದು, ನಮ್ಮ ಬಾಬಾ ಇಷ್ಟು ದೊಡ್ಡ ವ್ಯಕ್ತಿ ಎಂಬ ಸತ್ಯ ಅವರೊಡನೆಯೇ ಇರುತ್ತಿದ್ದ ಅವರ ಮೊಮ್ಮಗಳಾದ ನನಗೆ ಗೊತ್ತೇ ಇರಲಿಲ್ಲವೆಂಬ ಸಣ್ಣತನ ನನ್ನನ್ನಾವರಿಸಿ ಖಿನ್ನಳಾಗುತ್ತೇನೆ.

ಇಂಥ ಮಹನೀಯರು ಕನ್ನಡ ಋಷಿಗಳಗೇ ಮಹರ್ಷಿ ಎನಿಸಿರುವ ಮಂಗಳವೇಢೆ ಶ್ರೀನಿವಾಸರಾಯರು ಜನಿಸಿದ್ದು ಕ್ರಿ.ಶ. ೧೮೯೫ರಲ್ಲಿ ಇವರನ್ನು ಅತಿಹತ್ತಿರದಿಂದ ಅರ್ಥಮಾಡಿಕೊಂಡು ಅವರ ಜೀವನ ಸಾಧನೆಯನ್ನು ಚಿತ್ರಿಸಿರುವ ಕನ್ನಡಿಗರಲ್ಲಿ ಒಬ್ಬರಾದ ಶ್ರೀ ಆದ್ಯರಾಮಚಾರ್ಯರು ಮಂಗಳವೇಢೆ ಶ್ರೀನಿವಾಸರಾಯರು ಜನಿಸಿದ ಪುಣ್ಯಭೂಮಿ ಗದಗನ್ನು ಬಹಳ ಭಕ್ತಿ ಭಾವದಿಂದ ಕೊಂಡಾಡಿದ್ದಾರೆ. ಕೋಳಿವಾಡ ಗ್ರಾಮದ ನಾರಾಯಣಪ್ಪನು ಗದುಗಿನ ವೀರನಾರಾಯಣನ ಪ್ರೇರಣೆಯಿಂದ ರಚಿಸಿದ 'ಗದುಗಿನ ಭಾರತ' ಕನ್ನಡದ ಮಹಾಕಾವ್ಯವಾಗಿ ಪ್ರಸಿದ್ಧವಾದರೆ, ಈ ಮಹಾಕಾವ್ಯದ ಮುಂದೆ ಬೆಳಗಿದ ನಂದಾದೀಪದಂತೆ ಹುಯಿಲಗೋಳ ನಾರಾಯಣರಾಯರಿಂದ ರಚಿತವಾದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ನಾಡಗೀತೆ ಬೆಳಗಿತೆಂದೂ ಇಂತಹ ಪುಣ್ಯಭೂಮಿಯಲ್ಲಿ ಜನ್ಮತಾಳಿ ಅಣುಅಣುವಿನಲ್ಲೂ ಕನ್ನಡವನ್ನೇ ಉಸಿರಾಡಿದ ಮಹರ್ಷಿ ಮಂಗಳವೇಢೆ ಶ್ರೀನಿವಾಸರಾಯರಿಗೆ ಜನ್ಮವಿತ್ತ ಮಹತಾಯಿಯೂ ಗದುಗಿನ ನೆಲದವರೇ ಆಗಿದ್ದು ಶ್ರೀನಿವಾಸರಾಯರ ಉತ್ಕಟವಾದ ಕನ್ನಡ ಪ್ರೇಮಕ್ಕೆ, ಜೀವನ ವಿಕಾಸಕ್ಕೆ ಗದುಗಿನ ನೆಲದ ಮಹಿಮೆಯೇ ಕಾರಣೀಭೂತವಾಗಿರಬೇಕೆಂದಿದ್ದಾರೆ. ಇಷ್ಟೇ ಅಲ್ಲದೇ ಶ್ರೀಮಧ್ವಾಚಾರ್ಯರ

ಗ್ರಂಥಗಳಿಗೆ ಟೀಕೆ ಬರೆದಂತಹ ದೇಶಪಾಂಡೆ ಮನೆತನದ ಶ್ರೀ ಜಯತೀರ್ಥರು (ಶ್ರೀಮದ್ ಟೀಕಾರಾಯರು) ಮಂಗಳವೇಢೆ ಗ್ರಾಮದವರಾಗಿದ್ದು ಶ್ರೀನಿವಾಸರಾಯರ ಪೂರ್ವಜರು ಸಹ ಇದೇ ಮಂಗಳವೇಢೆ ಗ್ರಾಮದವರೇ ಆಗಿರುವುದು ಪೂರ್ವಜನ್ಮದ ಸುಕೃತದ ಫಲವೆನ್ನಬಹುದು.

ಶ್ರೀನಿವಾಸರಾಯರ ತಂದೆ ಶ್ರೀ ರಾಜೇರಾಯರು ವಂಶ ಪರಂಪರಾನುಸಾರ ಬ್ರಿಟೀಷರಿಗೆ ಸೇವೆ ಸಲ್ಲಿಸುತ್ತ ಸವಣೂರಿನ ನವಾಬನ ದಿವಾನರಾಗಿ ಅತ್ಯಂತ ದಕ್ಷತೆಯಿಂದ ಸಂಸ್ಥಾನವನ್ನು ಆಳಿದ ಮಹನೀಯರು. ಕ್ರಿ.ಶ. ೧೯೦೩ ರಿಂದ ೧೯೧೨ ರ ವರೆಗೆ ಚಿಕ್ಕವಯಸ್ಸಿನ ನವಾಬರ ಸಂರಕ್ಷಣಾದಾರರಾಗಿದ್ದು ಶಿಕ್ಷಣ ಮುಗಿಸಿ ನವಾಬರು ಸವಣೂರಿಗೆ ಬಂದ ಮೇಲೆ ಅತ್ಯಂತ ವೈಭವದಿಂದ ಸಿಂಹಾಸನದ ಮೇಲೆ ಕುಳ್ಳಿರಿಸುವ ಜವಾಬ್ದಾರಿಯನ್ನು ನೆರವೇರಿಸಿದವರು ಮತ್ತು ರಾಜೇರಾಯರು ತಮ್ಮ ಆಡಳಿತ ಕಾಲದಲ್ಲಿ ಶಾಲೆ, ಭಾವಿ, ಧರ್ಮಶಾಲೆಗಳಂಥ ಸೌಕರ್ಯಗಳನ್ನೊದಗಿಸಿದ ಬಲಾಢ್ಯ ದಿವಾನರಾಗಿದ್ದರು.

ಶ್ರೀನಿವಾಸರಾಯರ ಪ್ರಾಥಮಿಕ ವಿದ್ಯಾಭ್ಯಾಸ ಸವಣೂರಿನಲ್ಲಿ ಆರಂಭವಾಯಿತು. ಆಂಗ್ಲರ ಅಧಿಪತ್ಯ ಆರಂಭವಾದ ಅಂದಿನ ದಿನಗಳಲ್ಲಿ ಮುಂಬೈ ಅಧಿಪತ್ಯದಲ್ಲಿದ್ದ ಪ್ರದೇಶಗಳಲ್ಲಿ ಮರಾಠೀ ಮೇಲಧಿಕಾರಿಗಳ ಉಸ್ತುವಾರಿಯಿಂದಾಗಿ ಕನ್ನಡದ ನೆಲವಾದರೂ ಮರಾಠೀ ಪ್ರಭಾವವೇ ಹೆಚ್ಚಾಗಿತ್ತು. ಕ್ರಿ.ಶ. 1906 ರಲ್ಲಿ ವಂಗಭಂಗದಂಥ ಸ್ವದೇಶೀ ಚಳುವಳಿಯಿಂದಾಗಿ ಇಡೀ ಭಾರತ ದೇಶ ಸ್ವದೇಶಾಭಿಮಾನದಿಂದ ಎಚ್ಚೆತ್ತುಕೊಳ್ಳಲಾರಂಭಿಸಿದ ದಿನಗಳಲ್ಲಿ ಕನ್ನಡ ನಾಡಿನಲ್ಲೂ ಸಹ ಅದರ ಪ್ರಭಾವ ವ್ಯಾಪಿಸಿದ್ದು ಶ್ರೀ ಆಲೂರು ವೆಂಕಟರಾಯರು ಪ್ರಚಾರ ತಂಡದೊಂದಿಗೆ ಸವಣೂರಿಗೆ ಆಗಮಿಸಿದರು. ತರುಣರಾಗಿದ್ದ ಆಲೂರರು ಮತ್ತು ಅವರೊಂದಿಗೆ ಬಂದಿದ್ದ ತರುಣರೆಲ್ಲರೂ ಸ್ವದೇಶಾಭಿಮಾನದಿಂದ ಘೋಷಯಾತ್ರೆ ಮಾಡುತ್ತಾ ಬೀದಿ ಬೀದಿಗಳಲ್ಲಿ ಸುತ್ತಾಡುತ್ತಾ 'ಬೂಟು ಹ್ಯಾಟು ಫಿರಂಗೇರು ಬಂದಾರೋ, ಪರದೇಶೀ ಸಕ್ಕರಿ ಬಿಳೀಬಟ್ಟೆ ತಂದಾರೋ, ನಮ್ಮನ್ನೆಲ್ಲಾ ಹಾಳು ಮಾಡ್ಯಾರೋ ನೊಡಿರೋ' ಎಂದು ಒಕ್ಕೊರಲಿನಿಂದ ಹಾಡುತ್ತಾ ಶಿಸ್ತಿನ ಸಿಪಾಯಿಗಳಂತೆ ಹೊರಟಿದ್ದವರನ್ನು ಕಂಡ ಹನ್ನೊಂದು ವರ್ಷದವರಾಗಿದ್ದ ಶ್ರೀನಿವಾಸರಾಯರು ಈ ಲಾವಣಿ ಪದಕ್ಕೆ ಆಕರ್ಷಿತರಾಗಿದ್ದು ಮುಂದೆ ಅವರ ಜೀವನದ ಗತಿಯನ್ನೇ ಪರಿವರ್ತಿಸಬಲ್ಲ ಶಕ್ತಿ ದೊರೆತದ್ದು ಅಂದಿನ ಘಟನಾವಳಿಯ ಅದ್ಭುತ ಪ್ರಭಾವದಿಂದ! ಸ್ವದೇಶಾಭಿಮಾನದಿಂದ ಮೈಮರೆತ ಶ್ರೀನಿವಾಸರಾಯರು ತಾವೂ ಸಹ ಸ್ವಯಂಸೇವಕರ ತಂಡದೊಡನೆ ಜಯಜಯಕಾರ ಮಾಡುತ್ತಾ ಊರಲ್ಲಿ ಸುತ್ತಾಡಿ ಸಂಜೆ ಮನೆಗೆ ಬಂದಾಗ ತಂಡದ ನಾಯಕರಾಗಿದ್ದ ಆಲೂರು ವೆಂಕಟರಾಯರನ್ನು ತಮ್ಮ ಮನೆಯಲ್ಲಿ ಕಂಡು ಆಶ್ಚರ್ಯ ಚಕಿತರಾದರು. ಅಷ್ಟೇ ಅಲ್ಲ, ಆಲೂರರು ತಮ್ಮ ತಾಯಿಯ ಕಡೆಯಿಂದ ಬಂಧುಗಳೆಂದು ತಿಳಿದು ಮತ್ತಿಷ್ಟು ಆನಂದ ಪರವಶರಾದರು.

ಸವಣೂರು ಸಂಸ್ಥಾನದ ದಿವಾನರ ಮಗ ಸ್ವದೇಶೀ ಚಳುವಳಿಯ ಯುವಕರೊಂದಿಗೆ ಕೂಡಿಕೊಂಡು ಸವಣೂರಿನ ಬೀದಿಬೀದಿಗಳಲ್ಲಿ ಸುತ್ತಾಡಿದ ಸಂಗತಿ ಆ ದಿನದಲ್ಲಿ ಸಾಮಾನ್ಯ ಸಂಗತಿ ಆಗಿರಲಿಲ್ಲ. ಈ ವಿಷಯ ತಿಳಿದಾಗ ತಂದೆಯವರು ತಮಗೆ ಯಾವ ರೀತಿ ದಂಡಿಸುವರೋ ಎಂಬ ಅಳುಕು ಒಳಗೇ ಅಪರಾಧಿ ಭಾವವಾಗಿ ಕಾಡಿದರೂ ತೋರಗೊಡದೇ ಏನಿದ್ದರೂ ತಾಯಿಯ ರಕ್ಷಾಕವಚ ಇದ್ದೇಇರುತ್ತದೆಂಬ ಧೈರ್ಯದಿಂದ ಮನ ಹಗುರ ಮಾಡಿಕೊಂಡು ಅಂದಿನ ಉತ್ಸಾಹದ ಘಳಿಗೆಗಳ ಪುಳಕದಲ್ಲಿ ಮೈ ಮರೆತು ತೇಲಿದರು. ಈ ಸಂಗತಿ ತಿಳಿದ ನಂತರ ರಾಜೇರಾಯರು ಮಗನಿಗೆ ಸ್ವತಃ ದಿವಾನರಾದ ತಾವು ಬ್ರಿಟೀಷರ ಸೇವೆಯಲ್ಲಿರುವಾಗ ಮಗ ಬ್ರಿಟೀಷರ ವಿರುದ್ಧದ ಚಳುವಳಿಗಳಲ್ಲಿ ಪಾಲುಗೊಳ್ಳಬಾರದೆಂದು ಕಟ್ಟಾಜ್ಞೆ ವಿಧಿಸಿದರು.

ಮುಂದೊಮ್ಮೆ ಸವಣೂರಿನ ಶಾಲೆಯೊಂದರಲ್ಲಿ ವಿಶೇಷ ಅತಿಥಿಗಳನ್ನಾಗಿ ರಾಜೇರಾಯರನ್ನು ಆಹ್ವಾನಿಸಿರಲು ಶ್ರೀನಿವಾಸರಾಯರು ಸಹ ತಂದೆಯವರೊಡನೆ ಶಾಲೆಗೆ ಹೋಗಿದ್ದರು. ಶಾಲೆಯ ಶಿಕ್ಷಕ ವರ್ಗವೆಲ್ಲಾ ದಿವಾನರ ಆಗಮನವನ್ನು ವಿಶೇಷವಾದ ಗೌರವದಿಂದ ಸ್ವಾಗತಿಸಿ ಶಿಸ್ತಿನಿಂದ, ಆದರದಿಂದ ಶಾಲಾ ಮಕ್ಕಳ ಕಲಾ ಕೌಶಲ್ಯದ ಪ್ರದರ್ಶನ ಮಾಡಿದರು. ಮಕ್ಕಳಿಂದಲೇ ನಿರ್ಮಿತವಾದ ಮಣ್ಣಿನ ಪದಾರ್ಥಗಳನ್ನು ಕೈ ಬರಹದ ಚಿತ್ರಗಳನ್ನು ಅಲ್ಲಲ್ಲಿ ಕ್ರಮವಾಗಿ ಜೋಡಿಸಿದ್ದರು. ವಾಚನಾಲಯದಲ್ಲಿ ಶಾಲೆಗೆ ತರಿಸುತ್ತಿದ್ದ ವೃತ್ತ ಪತ್ರಿಕೆಗಳನ್ನೆಲ್ಲಾ ವ್ಯವಸ್ಥಿತವಾಗಿ ಜೋಡಿಸಲಾಗಿತ್ತು. ಉತ್ತರ ಕರ್ನಾಟಕವೆಲ್ಲಾ ಮರಾಠೀಮಯ ವಾತಾವರಣವಾಗಿದ್ದ ಅಂದಿನ ದಿನಗಳಲ್ಲಿ ಅನೇಕ ಮರಾಠೀ ಪತ್ರಿಕೆಗಳ ನಡುವೆ 'ಕರ್ನಾಟಕ ವೃತ್ತ' ಮತ್ತು 'ಧನಂಜಯ' ಎಂಬ ಎರಡು ಕನ್ನಡ ಪತ್ರಿಕೆಗಳು ಶ್ರೀನಿವಾಸರಾಯರ ಕಣ್ಣಿಗೆ ಬಿದ್ದವು. ಮಾತೃಭಾಷೆಯ ಪ್ರೇಮದ ಸೆಳೆತಕ್ಕೊಳಗಾಗಿ ಆ ಎರಡೂ ಪತ್ರಿಕೆಗಳನ್ನು ಇವರು ಆಮೂಲಾಗ್ರವಾಗಿ ಓದಿದರು. ಸಂಪಾದಕರ ಹೆಸರು ಮುದವೀಡು ಕೃಷ್ಣರಾಯರೆಂದು ಗಮನ ಹರಿಸಿ ಮನದಟ್ಟು ಮಾಡಿಕೊಂಡು ಆ ಮಹನೀಯರನ್ನು ಕಾಣುವ ಆವೇಶ ಹೊಂದಿದವರಾದರು. ಅವರ ಭಾಷೆಗೆ ಮಾರುಹೋದರು. ತಮ್ಮ ಮಾತೃಭಾಷೆಯಾದ 'ಕನ್ನಡ'ದ ಗೌರವವನ್ನು ರಕ್ಷಿಸಿಕೊಂಡು ಹೋಗಬೇಕಾದ್ದು ತಮ್ಮ ಆದ್ಯ ಕರ್ತವ್ಯವೆಂಬ ಧೃಡವಾದ ಭಾವನೆ ಅಂದಿನ ಎಳೆಮನದಲ್ಲಿ ಬೇರೂರಿದ್ದು ಜೀವನ ಪರ್ಯಂತ ಕನ್ನಡವೇ ಉಸಿರೆಂದು ದುಡಿದ ಕನ್ನಡ ಮಹರ್ಷಿ ಶ್ರೀನಿವಾಸರಾಯರು.

## ಧಾರವಾಡದ ಮುಕ್ತ ವಾತಾವರಣ

ಸವಣೂರು ಬಹು ಚಿಕ್ಕ ಸಂಸ್ಥಾನವಾದ್ದರಿಂದ ಕ್ರಿ.ಶ. 1912 ರಿಂದ ಶ್ರೀನಿವಾಸರಾಯರು ತಮ್ಮ ಪ್ರೌಢಶಾಲಾ ಶಿಕ್ಷಣಕ್ಕಾಗಿ ಧಾರವಾಡಕ್ಕೆ ಬಂದು ವಸತಿ ಗೃಹದಲ್ಲಿದ್ದುಕೊಂಡು ಅಲ್ಲಿನ ಮುಕ್ತ ವಾತಾವರಣದಲ್ಲಿ ಎಲ್ಲ ಸಾರ್ವಜನಿಕ

ಚಟುವಟಿಕೆಗಳಲ್ಲಿ ನಿರಾಳವಾಗಿ ಭಾಗವಹಿಸ ತೊಡಗಿದರು. ಸಮಗ್ರ ಕನ್ನಡ ನಾಡಿನಲ್ಲಿಯೇ ಹಿರಿಯದಾದ ಹೆಸರುವಾಸಿಯಾದ ಧಾರವಾಡದ ವಿದ್ಯಾವರ್ಧಕ ಸಂಘದ ಪ್ರತಿಯೊಂದು ಕಾರ್ಯಕ್ರಮಗಳಲ್ಲಿ ಆಸಕ್ತಿಯಿಂದ ಮುನ್ನಡೆದರು. ಧಾರವಾಡದ ಸಪ್ತರ್ಷಿಗಳೆನಿಸಿಕೊಂಡಂಥ ಕಡಪಾ ರಾಘವೇಂದ್ರರಾವ್, ಮುದವೀಡು ಕೃಷ್ಣರಾವ್ ಮುಂತಾದ ಪ್ರಮುಖರುಗಳ ಪ್ರಭಾವ ಇವರ ಮೇಲಾಯಿತು. ಎಲ್ಲದರಲ್ಲೂ ಆಲೂರರ ಪ್ರಭಾವ ಮಾತ್ರ ಆಳವಾಗಿದ್ದು ಅವರು ಸದಾ ಇವರಿಗೆ ಗುರುಗಳ ಸ್ಥಾನದಲ್ಲಿದ್ದರು. ನಂತರ ಕಾಲೇಜು ವ್ಯಾಸಂಗಕ್ಕಾಗಿ ಕ್ರಿ.ಶ. 1917ರಲ್ಲಿ ಕರ್ನಾಟಕ ಕಾಲೇಜು ಸೇರಿದ ಮೇಲೆ ತಮ್ಮ ಗೆಳೆಯರ ಬಳಗದಿಂದ 'ಕರ್ನಾಟಕ ವಿದ್ಯಾರ್ಥಿ ಬಂಧು ಮಂಡಲ' ವೆಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಈ ಚಟುವಟಿಕೆಯಿಂದಾಗಿ ಕನ್ನಡ ವಿಭಾಗದಿಂದ ಹೊರಬಂದ ಪತ್ರಿಕೆಯಲ್ಲಿ 'ಹಿಂದುಸ್ತಾನದಲ್ಲಿ ಕರ್ನಾಟಕದ ಸ್ಥಾನ' ಎಂಬ ಲೇಖನವನ್ನು ಬರೆದಿದ್ದರಿಂದ ಈ ಲೇಖನಕ್ಕೆ ಪ್ರಥಮ ಸ್ಥಾನ ದೊರೆತಿತು. ಮುಂದೆ ಆಲೂರರು ಸ್ಥಾಪಿಸಿದ 'ಕರ್ನಾಟಕ ಇತಿಹಾಸ ಸಂಶೋಧನ ಮಂಡಲ'ದ ಕಾರ್ಯದರ್ಶಿಗಳಾಗಿ ಸಹ ಸೇವೆ ಸಲ್ಲಿಸಿದರು.

'ಸಚಿತ್ರಭಾರತ'ವೆಂಬ ಶ್ರೀ ಮುತಾಲಿಕ ಬಿಂದುರಾಯರ ಮಾಸ ಪತ್ರಿಕೆಯಲ್ಲಿ ವಾಚಕರಿಗೆ ಕಾಣಿಸುವಂತೆ ಸಚಿತ್ರದೊಂದಿಗೆ ಪ್ರಕಟವಾಗುತ್ತಿದ್ದ ಮತ್ತು ಲೇಖಕರು ಬರೆದಂತೆಯೇ ಮುದ್ರಿತವಾಗುತ್ತಿದ್ದ ಈ ಸಚಿತ್ರ ಪತ್ರಿಕೆ ಶ್ರೀನಿವಾಸರಾಯರ ಕಣ್ಸೆಳೆಯಿತು. ಇಲ್ಲಿ ಪ್ರಕಟವಾಗುತ್ತಿದ್ದ ಕೆರೂರು ವಾಸುದೇವಾಚಾರ್ಯರ ಸ್ಫೂರ್ತಿದಾಯಕ ಬರಹಗಳಿಗೆ ಮಾರುಹೋಗಿದ್ದರಲ್ಲದೇ ಕೆರೂರರೇ ಆರಂಭಿಸಿದ 'ಶುಭೋದಯ' ದೈನಿಕವನ್ನು ಆಸಕ್ತಿಯಿಂದ ಓದಲಾರಂಭಿಸಿದರು. ಕೆರೂರು ವಾಸುದೇವಾಚಾರ್ಯರನ್ನು ಒಮ್ಮೆ ಭೇಟ್ಟಿಯಾಗುವ ಉತ್ಸುಕತೆ ಹೊಂದಿದವರಾಗಿ ಅವರನ್ನು ಭೇಟಿಯಾದಾಗ, ರಾಜೇರಾಯರು ಕೆರೂರರ ಬಾಲ್ಯ ಸ್ನೇಹಿತರೆಂದು ಅವರೇ ತಿಳಿಸಿ ಬಹಳ ಆತ್ಮಿಯತೆ ತೋರಿದರೆಂದೂ, ಅವರ ಸಂಪರ್ಕ ಮೂಡಿಬಂದ ಕಾರಣದಿಂದಲೇ ಪತ್ರಿಕೋದ್ಯಮದಲ್ಲಿ ಆಸಕ್ತಿ ಉಂಟಾಗಿ ಮುಂದೆ ತಾವು ಪತ್ರಿಕೋದ್ಯಮಿಯಾಗಲು ಬುನಾದಿಯಾಯಿತೆಂದು ಶ್ರೀನಿವಾಸರಾಯರು 'ನನ್ನ ಸ್ಮೃತಿಗಳು' ಎಂಬ ಲೇಖನದಲ್ಲಿ ತಿಳಿಸಿದ್ದಾರೆ.

ಶ್ರೀನಿವಾಸರಾಯರು ತಮ್ಮ ಮುಂದಿನ ವ್ಯಾಸಂಗಕ್ಕಾಗಿ ಸಾಂಗಲಿಯಲ್ಲಿರುವ ವಿಲ್ಲಿಂಗ್ಟನ್ ಕಾಲೇಜನ್ನು ಸೇರಿದರು. ಇಲ್ಲಿಯೂ ಸಹ ಇವರು ಕನ್ನಡಿಗರಾದ ವಿದ್ಯಾರ್ಥಿಗಳ ಗುಂಪೊಂದನ್ನು ಒಗ್ಗೂಡಿಸಿಕೊಂಡು ಕನ್ನಡ ಚಟುವಟಿಕೆಗಳಿಗಾಗಿ ಪ್ರೇರೇಪಿಸಿದರು. ನಾಗಪುರದಲ್ಲಿ ನಡೆಯಲಿರುವ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯ ಅಧಿವೇಶನದ (1920) ಕಾರ್ಯದಲ್ಲಿ ಸ್ವಯಂಸೇವಕರಾಗಿ ಸೇವೆ ಸಲ್ಲಿಸಲು ತಮ್ಮ ಸಂಗಡಿಗರನ್ನು ಕರೆದುಕೊಂಡು ಹೋದರು. ಅಧಿವೇಶನ ಮುಗಿಸಿಕೊಂಡು ಮರಳಿದ ನಂತರ ಸಾಂಗಲಿಯಲ್ಲಿ ಬಹಿಷ್ಕಾರ ಪ್ರಚಾರವನ್ನು ಬಲವಾಗಿ

ಮಾಡಿದರು. ಇದರಿಂದಾಗಿ ವಿಲ್ಲಿಂಗ್ಟನ್ ಕಾಲೇಜು ಮುಚ್ಚುವಂತಾಯಿತು. ಸಿಟ್ಟಿಗೆದ್ದ ಕಾಲೇಜು ಅಧಿಕಾರಿಗಳು ಶ್ರೀನಿವಾಸರಾಯರನ್ನು ಹಾಗೂ ಅವರ ಸಂಗಡಿಗರನ್ನು ಕಾಲೇಜು ಮತ್ತು ಹಾಸ್ಟೇಲಿನಿಂದ ಹೊರದೂಡಿದರು. ನಾಗಪೂರ ಅಧಿವೇಶನದಲ್ಲಿ ಭಾಗ ವಹಿಸಿದ್ದರಿಂದ ಕಾಲೇಜಿನಿಂದ ಹೊರಹಾಕಿರುವ ವಿಷಯ ಅವರ ತಂದೆ ರಾಜೇರಾಯರಿಗೆ ತಿಳಿದು ಬಹಳ ನೊಂದರಲ್ಲದೇ ಸಿಟ್ಟಿನಿಂದ ಒಂದು ಪತ್ರವನ್ನು ಬರೆದಿರುತ್ತಾರೆ – " ಈ ಹುಚ್ಚಾಟ ನಿಲ್ಲಿಸು. ಪುನಃ ಕಾಲೇಜು ಸೇರಿ ಬಿ.ಎ. ಮುಗಿಸು. ಏಳು ತಲೆಮಾರುಗಳು ನಿಷ್ಠೆಯಿಂದ ಬ್ರಿಟೀಷ ಸರಕಾರಕ್ಕೆ ನಮ್ಮ ಮನೆತನದವರು ಸೇವೆ ಸಲ್ಲಿಸುತ್ತಿದ್ದೇವೆ. ನೀನೂ ಪರಂಪರೆ ಮುಂದುವರೆಸು. ಈ ಹಿತವಚನವನ್ನು ಗಮನಿಸದಿದ್ದರೆ ಮುಂದೆ ಬಾಳಿನುದ್ದಕ್ಕೂ ಪಶ್ಚಾತ್ತಾಪ ಪಡಬೇಕಾದೀತು. ಈಗಾಗಲೇ ನಿನಗೆ ಮಾಮಲೇದಾರರ ಹುದ್ದೆ ಕೊಡಿಸಲು ಸಿದ್ಧತೆ ನಡೆಯುತ್ತಿದೆ" ಎಂದು ತಂದೆಯವರು ಪತ್ರ ಬರೆದರೆ, ಶ್ರೀನಿವಾಸರಾಯರ ಉತ್ತರ – "ಏಳು ತಲೆಮಾರುಗಳ ಪರಕೀಯ ರಾಜನಿಷ್ಠೆಯ ಹಾಗೂ ದಾಸ್ಯ ವೃತ್ತಿಯ ಪಾಪವನ್ನು ತೊಡೆದು ಹಾಕಲು ಈ ನನ್ನ ತ್ಯಾಗವೆಂದು ನೀವು ಭಾವಿಸಬೇಕು" ಎಂಬುದಾಗಿ ಬರೆದು ತಿಳಿಸಿ ತಾವು ಗಾಂಧೀಜಿಯವರ ಸಾಬರಮತಿ ಆಶ್ರಮಕ್ಕೆ ಸೇರುವುದಾಗಿ ತಿಳಿಸಿದ್ದರು.

ಅತ್ತ ತಂದೆ – ಇತ್ತ ಮಗ ಇಬ್ಬರದೂ ಅವರವರ ಸ್ಥಾನದಲ್ಲಿ ಸರಿಯಾದ ಪಾತ್ರವೇ. ಮಗನ ಮುಂದಿನ ಭವಿಷ್ಯತ್ತಿಗಾಗಿ ತಂದೆಯ ಕಳಕಳಿಯಾದರೆ, ಆಂಗ್ಲರ ಗುಲಾಮಗಿರಿಯನ್ನು ಧಿಕ್ಕರಿಸುವ ಬಿಸಿ ರಕ್ತದ ಕೆಚ್ಚೆದೆಯ ಸ್ವಾಭಿಮಾನದ ವ್ಯಕ್ತಿತ್ವದ ಶ್ರೀನಿವಾಸರಾಯರ ಒಕ್ಕಣೆ ಎಂಥವರನ್ನು ಅವರ ಮಹತ್ತರ ನಿಲುವಿಗೆ ತಲೆ ಬಾಗುವಂತೆ ಮಾಡುತ್ತದೆ. ಉತ್ತರ ಓದಿದ ತಂದೆ ರಾಜೇರಾಯರು ಮತ್ತೆ ಮಗನಿಗೆ ತಾಯಿ ಮಗನನ್ನು ನೋಡಲು ಹಂಬಲಿಸುತ್ತಿರುವಳೆಂದು ಒಮ್ಮೆ ಬಾಗಲಕೋಟೆಗೆ ಬರಬೇಕೆಂದು ಕರೆಯಲು, ತಾಯಿಯ ಕರುಳಿನ ಕರೆಗೆ ಓ ಗೊಟ್ಟು ಈ ವೇಳೆಗಾಗಲೇ ಶ್ರೀನಿವಾಸರಾಯರ ತಂದೆ ನಿವೃತ್ತರಾಗಿದ್ದು, ಬಾಗಲಕೋಟೆಯಲ್ಲೇ ನೆಲೆಸುತ್ತಿದ್ದುದ್ದರಿಂದ ಅಲ್ಲಿಗೆ ಬಂದರು. ನಾಗಪುರದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಾಗಿದ್ದ ಇವರ ಸಂಗಡಿಗರಲ್ಲಿ ಕೆಲವರು ಕಾಲೇಜಿನ ನಿಯಮಾವಳಿಗೆ ಬದ್ಧರಾಗಿರುವುದಾಗಿ ತಮ್ಮ ಒಪ್ಪಿಗೆ ಪತ್ರಗಳನ್ನು ಬರೆದು ಕೊಟ್ಟು ಪುನಃ ಕಾಲೇಜು ಸೇರಿ ವಿದ್ಯಾಭ್ಯಾಸ ಮುಂದುವರೆಸಿದರೆ, ರಾಷ್ಟ್ರಪ್ರೇಮಿಗಳಾದ ಕೆಲವರು ತಮ್ಮ ಸಂಕಲ್ಪಕ್ಕೆ ಕಟಿ ಬದ್ಧರಾಗಿ ಕಾಲೇಜು ಬಹಿಷ್ಕರಿಸಿ ತಮ್ಮದೇ ಆದ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬೇರೆ ಬೇರೆ ಕ್ಷೇತ್ರಗಳಲ್ಲಿ ಕಾರ್ಯವನ್ನಾರಂಭಿಸಿದರು. ರಾಷ್ಟ್ರಪ್ರೇಮವೇ ಧ್ಯೇಯವಾಗಿದ್ದ ಅಂದಿನ ದಿನಗಳಲ್ಲಿ ಬಾಗಲಕೋಟೆಯಲ್ಲಿ ಶಾಲೆಯನ್ನಾರಂಭಿಸಲಾಗಿದ್ದು ಅಲ್ಲಿ ಶಿಕ್ಷಕರಾಗಿ ಸೇವೆಸಲ್ಲಿಸಲು ಅನೇಕರು ಮುಂದಾದರು. ಆದರೆ ಶ್ರೀನಿವಾಸರಾಯರಿಗೆ ಮಾತ್ರ

ಲೋಕಕ್ಕೇ ಶಿಕ್ಷಣದ ಮಾಧ್ಯಮವೆನಿಸಿಕೊಳ್ಳುವ ಪತ್ರಿಕೋದ್ಯಮದ ವಿಚಾರಧಾರೆ ಮನದಲ್ಲಿ ಸುಳಿಯಲಾರಂಭಿಸಿತು. ಬಾಲಗಂಗಾಧರ ತಿಲಕರ 'ಕೇಸರಿ' ಪತ್ರಿಕೆ ಪರೋಕ್ಷವಾಗಿ ಪ್ರೇರೆಪಿಸಿತು. ತಮ್ಮ ತಂದೆಯವರೊಡನೆ ಈ ವಿಚಾರವಾಗಿ ಮನದಿಂಗಿತವನ್ನರುಹಲು, ಕಾಲೇಜು ತೋರೆದರೂ ಪತ್ರಿಕೊದ್ಯಮದಲ್ಲಿ ಆಸಕ್ತಿ ತೋರುತ್ತಿರುವ ತಮ್ಮ ಮಗ ತಮ್ಮ ಕಣ್ಣ ಮುಂದಿರುವಂತಾದರೆ ಸಾಕೆಂದು ಒಪ್ಪಿಗೆ ಇತ್ತರು.

## 'ಕನ್ನಡ ನವಜೀವನ' ಉದಯ

ಇದರಿಂದಾಗಿ ಸ್ವಾವಲಂಬಿಯಾಗಿ ಬಾಳುವ ಶ್ರೀನಿವಾಸರಾಯರು 'ವಿದ್ಯಾರಣ್ಯ ಮುದ್ರಾ ಮಂದಿರ' ಎಂಬ ಹೆಸರಿನಲ್ಲಿ ಮುದ್ರಣಾಲಯವನ್ನು ಆರಂಭಿಸಿದರು. ಕ್ರಿ.ಶ. 1921 ರಲ್ಲಿ 'ಕನ್ನಡ ನವಜೀವನ' ಪತ್ರಿಕೆಯನ್ನು ಹೊರಡಿಸಿದರು. ಅಂದಿನ 'ಯಂಗ್ ಇಂಡಿಯ' ಪತ್ರಿಕೆಯಲ್ಲಿ ಗಾಂಧೀಜಿಯವರು ಜನತೆಗಾಗಿ ನೀಡುತ್ತಿದ್ದ ವಿಚಾರ ಸರಣಿಗಳನ್ನು ಭಾಷಾಂತರಿಸಿ, ಅರ್ಥೈಸಿ 'ಕನ್ನಡ ನವಜೀವನ' ದಲ್ಲಿ ಪ್ರಕಟಿಸ ತೊಡಗಿದರು. ದಿನೇದಿನೇ ಈ ಪತ್ರಿಕೆಯ ಪ್ರಚಾರ ಬೆಳೆಯ ತೊಡಗಿತು. ಅದೇ ಸಮಯದಲ್ಲಿ ಅಮೇರಿಕದಿಂದ ಮರಳಿ ಬಂದಿದ್ದ ಹಿಂದುಸ್ತಾನಿ ಸೇವಾದಳ ಸ್ಥಾಪಿಸಿದ ಡಾ. ಹರ್ಡೀಕರ್‌ರವರು ತಮ್ಮ ಒಂದು ಭಾಷಣದಲ್ಲಿ ಭಾರತದಲ್ಲಿ ಆಂಗ್ಲಾಧಿಕಾರಿಗಳ ದಬ್ಬಾಳಿಕೆಯನ್ನು? ಅವರ ಅಸಹನೀಯ ವರ್ತನೆಗಳನ್ನೂ ಕಂಡು ಅಮೇರಿಕದಲ್ಲಿ ಇಂತಹ ವಾತಾವರಣ ಏರ್ಪಟ್ಟಿದ್ದರೆ ಅವರ ಪ್ರತಿಭಟನೆ ರಕ್ತ ಹೀರುವಂತಹದಾಗಿರುತ್ತಿತ್ತು. ಶಾಂತಿ ಪ್ರಿಯರಾದ ಭಾರತೀಯರು ಮಹಾತ್ಮ ಗಾಂಧೀಜಿಯವರ ಅಹಿಂಸಾ ವ್ರತವನ್ನು ಕಾಯಾ, ವಾಚಾ, ಮನಸಾ ಅನುಸರಿಸುವಂತಹವರಾಗಿದ್ದು ಈ ಸಂಕಲ್ಪ ಧೃಡವಾದ್ದೆಂದು ವಿವರಿಸದ್ದರು. 'ಕನ್ನಡ ನವಜೀವನ' ದಲ್ಲಿ ಈ ಭಾಷಣದ ವರದಿಯನ್ನು ಸವಿವರವಾಗಿ ಪ್ರಕಟಿಸಲ್ಪಟ್ಟಿದ್ದನ್ನು ನೋಡಿದ ವಿಜಾಪುರ ಜಿಲ್ಲಾಧಿಕಾರಿಗಳು ಭಯಭೀತರಾಗಿ ಬಾಲಗಕೋಟೆಯಿಂದ ರಾಜೇರಾಯರನ್ನು ಕರೆಸಿ ಈ ಪತ್ರಿಕೆಯಲ್ಲಿ ಮುದ್ರಿಸಲಾಗಿದ್ದ ಭಾಷಣದ ವೃತ್ತಾಂತವನ್ನು ಎತ್ತಿಹಿಡಿದು 'ಈ ರೀತಿ ಸರಕಾರದ ವಿರುದ್ಧವಾದ ಭಾಷಣಗಳನ್ನು ಮುದ್ರಿಸುತ್ತಾ ಹೋದರೆ ಮುಂದೆ ಆ ಪತ್ರಿಕೆ ಹೊರ ಬರದಂತೆ ನೋಡಿಕೊಳ್ಳುವುದರಲ್ಲಿ ನಿಮ್ಮ ಮಗನ ಕ್ಷೇಮವಡಗಿದೆ' ಎಂದು ಹೇಳಿ ಕಳಿಸಿದರು. ಮುಂದೆ ಗಾಂಧೀಜಿಯವರ ಬಂಧನವಾಗಿ 'ಯಂಗ್ ಇಂಡಿಯ' ನಿಂತು ಹೋಗಲು 'ಕನ್ನಡ ನವಜೀವನ' ಸಹ ನಿಂತು ಹೋಯಿತು.

ಈ ರೀತಿ ಪತ್ರಿಕೆ ನಿಂತುಹೋಗಲು ತಂದೆ ರಾಜೇರಾಯರು ಸಂತುಷ್ಟರಾಗಿ ಮನೆಯಲ್ಲಿ ಶ್ರೀ ಸತ್ಯನಾರಾಯಣ ವ್ರತವನ್ನು ಆಚರಿಸುವುದಾಗಿ ನಿರ್ಧರಿಸಿದರು. ತಮ್ಮ ಮಗ ಸಹ ಈ ವ್ರತವನ್ನು ಆಚರಿಸ ಬೇಕೆಂಬುದು ತಂದೆಯವರ

ಇಚ್ಛೆಯಾಗಿತ್ತು. ಆದರೆ, ವಿಷಾದದಲ್ಲಿದ್ದ ಶ್ರೀನಿವಾಸರಾಯರು ಸತ್ಯನಾರಾಯಣ ಪೂಜೆಯನ್ನು ನಿರಾಕರಿಸಿದರು. ಕ್ರಿ.ಶ. 1920 ರ ಆಸುಪಾಸಿನಲ್ಲಿ ಇವರ ಮದುವೆಯಾಗಿತ್ತೆಂದು ಹೇಳಬಹುದು. ಪತ್ನಿಯಾದ ಸೌ. ಲಕ್ಷ್ಮೀಬಾಯಿ ಬಹಳ ಮೃದು ಸ್ವಭಾವದವರು. ಶ್ರೀನಿವಾಸರಾಯರು ಸತ್ಯನಾರಾಯಣ ಪೂಜೆಯನ್ನು ನಿರಾಕರಿಸಲು ಅವರ ಪತ್ನಿ ಬಹಳ ನೊಂದು ಕೊರಗ ಹತ್ತಿದರು. ಆವೇಳೆಗೆ ಕಾವ್ಯಾನಂದರು ಶ್ರೀ ಸತ್ಯನಾರಾಯಣ ವ್ರತದ ಸಾರವಿರುವ ಜಗನ್ನಾಥವಿಠ್ಠಲನ ಅಂಕಿತವಿರುವ ಐದು ಅಧ್ಯಾಯದ ಹಾಡನ್ನು ಪ್ರತಿದಿನ ಹಾಡಲು ಸೌ. ಲಕ್ಷ್ಮೀಬಾಯಿಯವರಿಗೆ ಹೇಳಿದರು. ಪ್ರತಿ ಹುಣ್ಣಿಮೆ ಸಹ ಸತ್ಯನಾರಾಯಣ ಪ್ರಸಾದವನ್ನು ಮಾಡಿ ತುಪ್ಪದ ದೀಪ ಹಚ್ಚಿಟ್ಟು ಈ ಹಾಡು ಹೇಳಿ ಪ್ರಸಾದವನ್ನು ಅರ್ಪಿಸಬೇಕೆಂದು ಹೇಳಿಕೊಟ್ಟಿದ್ದರು. ಸಂಕ್ಷಿಪ್ತ ರೀತಿಯಲ್ಲಿ ಭಕ್ತಿಪೂರ್ವಕವಾಗಿ ಸತ್ಯನಾರಾಯಣ ಪೂಜೆಯನ್ನು ಇವರು ಮಾಡತೊಡಗಿದರು. ಇಂದಿಗೂ ಈ ಮನೆತನದಲ್ಲಿ ಇದೇ ಪರಿಪಾಠವಿದೆ.

ಕ್ರಿ.ಶ. 1920 ರ ನಾಗಪುರ ಕಾಂಗ್ರೆಸ್ಸಿನಲ್ಲಿ ಭಾಷಾನ್ವಯ ಪ್ರಾಂತಗಳೂ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ನಿರ್ಮಾಣವಾಗಿ ಹರಿದು ಹಂಚಿದ್ದ ಕರ್ನಾಟಕದ ವಿವಿಧ ಭಾಗಗಳು ಪ್ರಾಂತಿಕ ಸಮಿತಿಯಲ್ಲಿ ಸಮಾವೇಶವಾದದ್ದರಿಂದ ಅಖಿಲ ಕರ್ನಾಟಕದಲ್ಲಿ ನೂತನ ಸ್ಫೂರ್ತಿ ಹರಡಿತ್ತು. ಕರ್ನಾಟಕದ ಕುಲಪುರೋಹಿತರೆಂದು ಆಲೂರರನ್ನು ಶ್ರೀನಿವಾಸರಾಯರು ತಮ್ಮ ಬರಹದಲ್ಲಿ ಕರೆದಿದ್ದಾರೆ. 'ಕರ್ನಾಟಕಾಂತರ್ಗತ ಭಾರತ' ವೆಂಬ ಆಲೂರರ ಮಂತ್ರವನ್ನು ಕೆಲವರು 'ಭಾರತಾಂತರ್ಗತ ಕರ್ನಾಟಕ' ಎಂದು ವಾದಿಸಿ 'ಭಾರತಾಂತರ್ಗತ ಕರ್ನಾಟಕ'ವೇ ಸಹಜವೆಂದು ತಮ್ಮ ಲೇಖನಗಳನ್ನು ಬರೆದಿದ್ದಕ್ಕೆ ಆಲೂರರು ಅವರಿಗೆ 'ಭಾರತೀರಮಣ ಮುಖ್ಯಪ್ರಾಣಾಂತರ್ಗತ ಲಕ್ಷ್ಮೀನರಸಿಂಹ' ಎಂದೆನ್ನದೆ ಇನ್ನು ಮುಂದೆ 'ಲಕ್ಷ್ಮೀನರಸಿಂಹಾಂತರ್ಗತ ಭಾರತೀರಮಣ ಮುಖ್ಯಪ್ರಾಣನಿಗೆ ವಂದನೆ' ಎನ್ನಿರಿ ಎಂದು ಉದಾಹರಿಸಿ ಅಪಹಾಸ್ಯ ಮಾಡಲು ಆಲೂರರ 'ಕರ್ನಾಟಕಾಂತರ್ಗತ ಭಾರತ' ದ ಅರ್ಥವನ್ನು ಗ್ರಹಿಸಿದರು.

ಇಷ್ಟಕ್ಕೂ ಆಲೂರರು ಲೇಖಾಂಕಗಳನ್ನು ಬರೆದು ಜನತೆಗೆ ತಮ್ಮ ಮಂತ್ರದ ಅರ್ಥವನ್ನು ತಿಳಿಸಿದರು. ಭಾರತದ ಸೇವೆ ಎಂದರೇನು? ಭಾರತದ ಸೇವೆಗೆ ಟೊಂಕಕಟ್ಟಿ ನಿಲ್ಲುವುದೆಂದರೆ ಭಾರತದ ಅಂಗವಾದ ವಿವಿಧ ಪ್ರಾಂತದ ಜನರು ತಮ್ಮ ತಮ್ಮ ಪ್ರಾಂತದಲ್ಲಿ ಅರ್ಥಾತ್ ಆಂಧ್ರರು ಆಂಧ್ರದಲ್ಲಿಯೂ, ಮರಾಠಿಗರು ಮಹಾರಾಷ್ಟ್ರದಲ್ಲಿಯೂ, ಕನ್ನಡಿಗರು ಕರ್ನಾಟಕದಲ್ಲಿಯೂ, ರಾಷ್ಟ್ರೀಯ ಕಾಂಗ್ರೆಸ್ಸಿನ ಕಾರ್ಯಕಲಾಪಗಳನ್ನು ಆಸಕ್ತಿಯಿಂದ ಕೈಕೊಳ್ಳುವಂತೆ ಕರ್ನಾಟಕದಲ್ಲಿಯ ಸೇವೆಯ ಅರ್ಥವೆಂದರೆ, 'ಕರ್ನಾಟಕಾಂತರ್ಗತ ಭಾರತ ಸೇವೆ' ಎಂಬುದನ್ನು ಸ್ಪಷ್ಟವಾಗಿ ತಿಳಿಸಲು ಈ ಮಂತ್ರದ ಘೋಷಣೆಗೆ ಜನತೆ ಸೋತಿತು. ಕರ್ನಾಟಕದಲ್ಲೆಲ್ಲಾ ರಾಜಕೀಯತೇತರ ಚಳುವಳಿಗಳು

ಪ್ರಾರಂಭವಾದವು – ಕರ್ನಾಟಕ ವಣಿಕ್ ಸಂಘ, ಭಗಿನಿ ಮಂಡಲ, ವನಿತಾ ಸೇವಾ ಸಮಾಜ, ಹರಿಕಥಾ ಪರಿಷತ್ತು, ಪತ್ರಕರ್ತರ ಸಂಘ, ಅಮೇಚೂರು ರಂಗಭೂಮಿ ಸಂಘ, ಕರ್ನಾಟಕದ ಅನೇಕ ದೇಶೀಯ ಸಂಸ್ಥಾನಗಳಲ್ಲಿ ಪ್ರಜಾ ಮಂಡಲಗಳು, ಬಗೆಬಗೆಯ ವ್ಯಾಯಾಮಶಾಲೆಗಳು ಇತ್ಯಾದಿಗಳು ಉದಯವಾಗಿ ಎಲ್ಲ ಕ್ಷೇತ್ರಗಳಲ್ಲೂ ಕರ್ನಾಟಕಾನುಭವ ಮಿಂಚ ತೊಡಗಿತು. ಕರ್ನಾಟಕಾಂತರ್ಗತ ಭಾರತ ತತ್ವಕ್ಕೆ ಕಟ್ಟು ಬಿದ್ದು ಕರ್ನಾಟಕತ್ವದ ಜಾಗೃತಿಗಾಗಿ ಶ್ರೀನಿವಾಸರಾಯರು ಕಾರ್ಯೋನ್ಮುಖರಾಗಿ ಉತ್ಸಾಹದಿಂದ ಮುನ್ನುಗ್ಗಿದರು. ಮತ್ತು ಕನ್ನಡದ ಯುವಕರನ್ನು ಹುರಿದುಂಬಿಸುವ ಸಾಹಸ ಮಾಡಿದರು. ಅತೀ ಹುಮ್ಮಸ್ಸಿನಿಂದ ಕನ್ನಡ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಮುಂದುವರಿದ ಕನ್ನಡ ಯುವಕರಿಗೆ 'ನಖಶಿಖಾಂತ ಕನ್ನಡಿಗ' ರೆಂದು ಅಭಿದಾನ ದೊರೆಯಿತು. ಕಾಂಗ್ರೆಸ್ಸಿನ ಕೆಲ ಗಣ್ಯರು ಕಾಂಗ್ರೆಸ್ಸೇತರ ಚಟುವಟಿಕೆಯೆಂದು ಅನಾದರ ತೋರಿದರೂ ಮುಂದೆ ಭಾವನೆ ಗ್ರಹಿಸಿದವರಾದರು.

## ಕನ್ನಡಮಯ ಬೆಳಗಾವಿ ಕಾಂಗ್ರೆಸ್

ಕ್ರಿ.ಶ. 1924 ರಲ್ಲಿ ಬೆಳಗಾವಿಯಲ್ಲಿ ನಡೆಸಲಿರುವ ಅಖಿಲ ಭಾರತ ಕಾಂಗ್ರೆಸ್ಸಿನ ವಾರ್ಷಿಕ ಸಮ್ಮೇಳನ ನಡೆಸುವ ವಿಚಾರವನ್ನು ಕುರಿತು ಚರ್ಚೆಗೈಯ್ಯುವಾಗ ಆಕಸ್ಮಿಕವೆಂಬಂತೆ ಕನ್ನಡ ಭಾಷೆಯ ಬಗ್ಗೆ ಅನಾದರವನ್ನುಂಟು ಮಾಡುವಂತೆ ಮಾತಾಡಿದ ದೇಶಪಾಂಡೆ ಗಂಗಾಧರರಾಯರ ಮಾತನ್ನು ಸಭೆಯಲ್ಲಿದ್ದ ಶ್ರೀ ಪೋದ್ದಾರ ಸೀನಪ್ಪ ಹಾಗು ಅವರ ಇವರಂಥ ಸಂಗಡಿಗರು 'ನಾಚಿಗ್ಗೇಡು' ಎಂಬುದಾಗಿ ಖಂಡಿಸಲು, ತಮ್ಮ ಅಚಾತುರ್ಯದ ಅರಿವಾಗಿ ಯುವಕರ ಮನಸಿನ ಮೇಲಾಗುತ್ತಿದ್ದ ಪರಿಣಾಮವನ್ನರಿತು ಬೆಳಗಾವಿಯ ಭಾಗವೆಲ್ಲಾ ಎಂದೆಂದಿಗೂ ಕರ್ನಾಟಕಕ್ಕೆ ಸೇರಿದ ಭಾಗವೇ ಎಂಬುದನ್ನು ಸ್ಪಷ್ಟವಾಗಿ ಎತ್ತಿತೋರಿಸಲು ತಾವು ಈ ಅಧಿವೇಶನವನ್ನು ಬೆಳಗಾವಿಯಲ್ಲೇ ಕರೆಯುವುದಾಗಿ ನಿರ್ಧರಿಸಿರುವುದಾಗಿ ಸಾರಿದರು. ಆಗ ಮರಾಠೀ ಬದಲಿಗೆ ಎಲ್ಲಿ ನೋಡಿದರೂ ಕನ್ನಡ ಫಲಕಗಳೇ ಕಾಣುವಂತಾಗಬೇಕೆಂಬ ಪ್ರಚಾರ ಪ್ರಾರಂಭವಾಯಿತು. ಮಹಾತ್ಮಾ ಗಾಂಧೀಜಿ ಈ ಸಮ್ಮೇಳನದ ಅಧ್ಯಕ್ಷರಾದ ಅಪೂರ್ವ ಪ್ರಸಂಗ.

ಈ ಪ್ರಚಾರಕಾರ್ಯ ಆರಂಭವಾಗಲು ಶ್ರೀನಿವಾಸರಾಯರು ತಮ್ಮ ಸಂಗಡಿಗರೊಂದಿಗೆ ಉತ್ಸಾಹದಿಂದ ಮುಂದಾಳತ್ವ ವಹಿಸಿ ಈ ಅಧಿವೇಶನದಲ್ಲಿ ಕನ್ನಡ ವಾತಾವರಣ ವೇರ್ಪಡಿಸುವಲ್ಲಿ ಯಶಸ್ವಿಯಾದರು. ಸಮ್ಮೇಳನದ ಸ್ಥಳವನ್ನು 'ವಿಜಯನಗರ' ಎಂದು ಕರೆಯಲಾಗಿತ್ತು. ಕರ್ನಾಟಕದ ಅತೀ ವೈಭವದ ದ್ಯೋತಕವಾದ ವಿಜಯನಗರ ಸಾಮ್ರಾಜ್ಯದ ಅರಸರಿಗೆಲ್ಲಾ ಕುಲದೈವವಾಗಿದ್ದ ಹಂಪೆಯ ವಿರೂಪಾಕ್ಷ ದೇವಾಲಯದ ಗೋಪುರದಂತೆ ಅಧಿವೇಶನದ ಮಹಾದ್ವಾರವನ್ನು ಏರ್ಪಡಿಸಲಾಗಿತ್ತು. ನೀರು ಒದಗಿಸುವ

ಬಾವಿಗೆ ಪಂಪಾಸರೋವರವೆಂದು ಹೆಸರಿಟ್ಟಿದ್ದರು. ಮೈಸೂರು ಸಂಸ್ಥಾನದ ಖ್ಯಾತ ವೈಣಿಕ ವೀಣೆಶೇಷಣ್ಣನವರನ್ನು ಸನ್ಮಾನಿಸಲಾಯಿತು. ಮೈಸೂರಿನ ಖ್ಯಾತ ಪತ್ರಿಕೋದ್ಯಮಿ ಶ್ರೀ ತಿರುಮಲೇ ತಾತಾಚಾರ್ಯರು ತಮ್ಮ ಪತ್ನಿಯೊಂದಿಗೆ ಆಗಮಿಸಿದ್ದರು. ಗದುಗಿನ ನ್ಯಾಯವಾದಿಗಳಾದ ಶ್ರೀ ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಗೀತೆಯಂತು ಅಂದಿನ ದಿನದಲ್ಲಿ ಗಾಯತ್ರಿ ಮಂತ್ರದಂತೆ ಹೊರಹೊಮ್ಮಿದ್ದು ಈ ಸಮ್ಮೇಳನದ ವಿಶೇಷ ಗಮನಿಕೆಯಾಯಿತು. ಈ ಅಧಿವೇಶನದಲ್ಲಿಯೇ ಕರ್ನಾಟಕ ಏಕೀಕರಣದ ಮೊದಲನೇ ಪರಿಷತ್ತು ನಡೆಸ ಬೇಕೆಂಬ ಶ್ರೀನಿವಾಸರಾಯರ ಸೂಚನೆಗೆ ಶಂ.ಭಾ. ಜೋಶಿ, ಕಡಪಾ ರಾಘವೇಂದ್ರರಾಯರು ಮುಂತಾದವರು ಬೆಂಬಲಿಸಲು ಒಪ್ಪಿಗೆ ದೊರೆಯಿತು. ಕಂಬಳಿ ಸಿದ್ಧಪ್ಪನವರ ಅಧ್ಯಕ್ಷತೆಯಲ್ಲಿ ನಿರ್ವಿಘ್ನವಾಗಿ ಸುವ್ಯವಸ್ಥಿತವಾಗಿ ಜರುಗಿದ ಈ ಅಧಿವೇಶನದಲ್ಲಿ ಅನೇಕ ಸಮಾಜಗಳು ಮುಕ್ತ ಮನಸ್ಸಿನಿಂದ ಪಾಲ್ಗೊಳ್ಳುವಂತಾಯಿತು. ಈ ಅಧಿವೇಶನದ ಯಶಸ್ಸಿಗೆ ಬಹುವಿಧವಾಗಿ ಕಾರಣರಾದ ಶ್ರೀನಿವಾಸರಾಯರು ಕನ್ನಡಿಗರೆಲ್ಲರ ಜನಪ್ರಿಯ ಮುಂದಾಳು, ಒಳ್ಳೆಯ ಕಾರ್ಯಕರ್ತರೆಂದೆನಿಸ ತೊಡಗಿದರು. ಅಲ್ಲಿನ ಕನ್ನಡ ವಾತಾವರಣದ ನಿರ್ಮಿತಿಗೆ ಗಣ್ಯ ಕಾರಣ ಕರ್ತರಾದರು.

ಕರ್ನಾಟಕತ್ವವು ರಾಷ್ಟ್ರೀಯತ್ವಕ್ಕೆ ವಿರುದ್ಧವೆಂಬ ಕೆಲವರ ಅಭಿಪ್ರಾಯಕ್ಕೆ ಉತ್ತರವಾಗಿ ಶ್ರೀನಿವಾಸರಾಯರು 'ಕನ್ನಡಿಗ' ವಾರಪತ್ರಿಕೆಯನ್ನು ಕ್ರಿ.ಶ. 1[illegible]

[illegible]

ಭ್ರಮನಿರಸನ' ಎಂಬ ಆಲೂರರ ಲೇಖನ, ಕಡಪಾ ರಾಘವೇಂದ್ರರಾಯರ ಕನ್ನಡ ಗೀತೆಗಳು ಪ್ರಕಟವಾದುವಲ್ಲದೇ, ಮುಗುಳಿ, ಮಾಳವಾಡ, ಕೃಷ್ಣಮೂರ್ತಿ ಪುರಾಣಿಕ, ಸಿಂಪಿ ಲಿಂಗಣ್ಣ, ಅನಕೃ, ಹೊಯಿಸಳ, ಬೇಲೂರು ಕೇಶವದಾಸ, ಸಿದ್ಧವನಹಳ್ಳಿ ಕೃಷ್ಣ ಶರ್ಮ, ಟಿಟಿ ಶರ್ಮ, ಬೇಂದ್ರೆ, ಮುದವೀಡು, ಮಧುರಚೆನ್ನ, ಕೊಣ್ಣೂರು ಹನುಮಂತರಾವ್ ಮುಂತಾದವರ ಸಾಹಿತ್ಯ ಸೇವೆಗೆ 'ಕನ್ನಡಿಗ'ವು ಪ್ರೇರಕವಾಗಿತ್ತು. ಹೈದ್ರಾಬಾದಿನ ಚಿಮ್ಮಲಗಿ, ಮದ್ರಾಸಿನ ಬೆನಗಲ್ ರಾಮರಾವ (ಮುಂದೆ ಬೆಂಗಳೂರಿನಲ್ಲಿ ನೆಲೆ ನಿಂತರು) ಮಂಗಳೂರಿನ ಜಿನರಾಜ ಹೆಗ್ಗಡೆ, ಉಡುಪಿಯ ಫಣಿಯಾಡಿ ಮುಂತಾದವರು ಪತ್ರಿಕೆಗೆ ಆತ್ಮೀಯ ಬೆಂಬಲ ನೀಡಿದರು.

ಬಹು ಕಾಲದಿಂದ ರೂಢಿಯಲ್ಲಿದ್ದ ಮರಾಠೀ ಭಾಷೆಯ ವಾಡಿಕೆ ಕಡಿಮೆಯಾಗುತ್ತ ವ್ಯಾಪಾರಸ್ಥರು ಸಹ ಮರಾಠಿ ಬದಲಿಗೆ ಕನ್ನಡ ಪದಗಳ ಬಳಕೆಯನ್ನು ರೂಢಿಸಿಕೊಳ್ಳ ತೊಡಗಿದರು. ಲೆಕ್ಕ ಪತ್ರಗಳನ್ನು ಸಹ ಕನ್ನಡದಲ್ಲೇ ಬರೆಯ ತೊಡಗಿದರು. ದರಗಳನ್ನು 'ಚವಲಿ', 'ಪಾವಲಿ' ಎನ್ನುತ್ತಿದ್ದ ಮಾರಾಟಗಾರರಿಗೆ ಶ್ರೀನಿವಾಸರಾಯರು ಎರಡಾಣೆ, ನಾಲ್ಕಾಣೆ ಎಂದು ಕನ್ನಡದಲ್ಲಿ ಹೇಳುವಂತೆ ಕಲಿಸಿ ಕನ್ನಡದಲ್ಲೇ ದರ ಹೇಳಿದರೆ ಇಡೀ ಬುಟ್ಟಿ ತಾವೇ ವ್ಯಾಪಾರ ಮಾಡುವುದಾಗಿ ಮಾರಾಟಗಾರರನ್ನು ಉತ್ತೇಜಿಸುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ದೀಪಾವಳಿ ಹಬ್ಬದ ಸಂಭ್ರಮದ ನಡುವೆ ಬಂಧುಮಿತ್ರರೆಲ್ಲರೂ ಕೂಡಿ ಪೀಡಾಪರಿಹಾರಕ್ಕಾಗಿ ಪಗಡೆ ಆಡುವುದು ವಾಡಿಕೆಯಲ್ಲಿದೆ. ಈ ಸಂದರ್ಭದಲ್ಲಿ ಕವಡೆ ಕುಲುಕಿ ಹಾಕಿದಾಗ 'ದಹಾ', 'ಪಂಚವೀಸ್', 'ಬಾರಾ', 'ದೋನಿ', 'ತೀನಿ' ಎನ್ನುತ್ತಿದ್ದ ಮರಾಠೀ ಪದಗಳ ಬಳಕೆಯನ್ನು ಬದಲಿಸಲು ಶ್ರೀನಿವಾಸರಾಯರು ಪ್ರಯತ್ನಿಸಿದರಾದರೂ ಅವರ ಪ್ರಯತ್ನ ಸಫಲವಾಗಲಿಲ್ಲವೆಂದು ತಾವೇ ಪಗಡೆ ಆಡುವುದನ್ನು ತ್ಯಜಿಸಿದ್ದರು.

## ಏಕೀಕರಣ ಸಭೆಯ ಕಾರ್ಯದರ್ಶಿ

ಬೆಳಗಾವಿಯಲ್ಲಿ ಸ್ಥಾಪನೆಗೊಂಡ ಕರ್ನಾಟಕ ಏಕೀಕರಣ ಸಭೆಗೆ ಕಾರ್ಯದರ್ಶಿಯಾಗಿ ಶಂ.ಭಾ. ಜೋಷಿ ಹಾಗೂ ಶ್ರೀನಿವಾಸರಾಯರು ನೇಮಕಗೊಂಡಿದ್ದು ಸಂಘಟನೆಯ ಕಾರ್ಯ ಚಟುವಟಿಕೆಗಳಲ್ಲಿ ಮುಂದಾಳತ್ವದಿಂದ ಶ್ರಮಿಸಿದರು. ಅಂದಿನ ಕರ್ನಾಟಕವು 19 ಬೇರೆ ಬೇರೆ ಆಡಳಿತಗಳಲ್ಲಿ ಹಂಚಿಹೋದ ವಿಚಾರವನ್ನೂ, ಆಡಳಿತಗಳ ಹೆಸರನ್ನೂ ನಿರ್ದೇಶಿಸಿ ಪ್ರಥಮವಾಗಿ ಶ್ರೀನಿವಾಸರಾಯರು ಲೇಖನ ಬರೆದರು. ತಮ್ಮ ವ್ಯಾಪಕ ಚಟುವಟಿಕೆ ಹಾಗೂ ಕಾರ್ಯ ತತ್ಪರತೆಯಿಂದ ತಮ್ಮ ಆತ್ಮೀಯರಾದ ಜಂಗಿನ ಮುರಗಯ್ಯನವರ ಸಹಕಾರದಿಂದ, ಕೈ ಬಿಟ್ಟು ಹೋಗುತ್ತಿದ್ದ ಬಳ್ಳಾರಿಯ ಭಾಗವನ್ನು ಕರ್ನಾಟಕಕ್ಕೆ ಸೇರುವಂತೆ ಮಾಡುವ ಪ್ರಯತ್ನದಲ್ಲಿ ಹಗಲಿರುಳೆನ್ನದೇ ಹೋರಾಡಿದರು.

ಕರ್ನಾಟಕದ ಸರ್ವತೋಮುಖ ಏಳಿಗೆಯ ಕನಸನ್ನು ನನಸಾಗಿಸಲು ಶ್ರಮಿಸುತ್ತಿದ್ದ ಶ್ರೀನಿವಾಸರಾಯರು ಅನೇಕ ಸಂಘ - ಸಂಸ್ಥೆಗಳ ಜನ್ಮಕ್ಕೆ ಕಾರಣೀಭೂತರೆಂದು ಸ್ವತಃ ತಾವೇ ಸ್ಪಷ್ಟಪಡಿಸಿದ್ದಾರೆ.

ಕ್ರಿ.ಶ. 1917 ರಲ್ಲಿ ಕಾಲೇಜು (ಧಾರವಾಡದಲ್ಲಿ) ವಿದ್ಯಾರ್ಥಿಯಾಗಿದ್ದಾಗಲೇ ಶ್ರೀನಿವಾಸರಾಯರು ನಾಟಕದಲ್ಲಿ ಆಸಕ್ತಿ ಹೊಂದಿದವರಾಗಿದ್ದರು. ಪ್ರಥಮವಾಗಿ ಇವರು ಒಂದು ಕುಡುಕನ ಪಾತ್ರವನ್ನು ವಹಿಸಿದ್ದ ವರ್ಣನೆಯನ್ನು 'ನನ್ನ ಸ್ಮೃತಿಗಳು' ಎಂಬ ಲೇಖನದಲ್ಲಿ ಬಹಳ ಸ್ವಾರಸ್ಯವಾಗಿ ವಿವರಿಸಿದ್ದಾರೆ. ಮುಖ್ಯ ಪಾತ್ರವನ್ನು ವಹಿಸಬೇಕೆಂದು ಹಂಬಲಿಸಿದ್ದ ಇವರು ತಮ್ಮ ಗೆಳೆಯ ಆ ಪಾತ್ರವನ್ನು ಅಪೇಕ್ಷಿಸಿದ್ದಕ್ಕಾಗಿ ಬಿಟ್ಟುಕೊಟ್ಟು ತಾವು ಕುಡುಕನ ಪಾತ್ರಕ್ಕೆ ಒಪ್ಪಿಕೊಂಡಿದ್ದರು. ಕ್ಕಿಕ್ಕಿರಿದು ತುಂಬಿದ್ದ ಧಾರವಾಡದ ವಿಕ್ಟೋರಿಯಾ ಥಿಯೇಟರಿನಲ್ಲಿ ಮನದ ತುಂಬ ಅಭಿನಯದ ಕೆಚ್ಚನ್ನು ತುಂಬಿಕೊಂಡು ದುಗುಡಭಾವದಿಂದ ತಮ್ಮ ಪಾತ್ರಾಭಿನಯಕ್ಕಾಗಿ ಕಾಯುತ್ತಿದ್ದ ಇವರ ಮನದಲ್ಲಿ - ಮೊಟ್ಟಮೊದಲ ಅಭಿನಯದಲ್ಲಿ ಮುಖ್ಯಪಾತ್ರ ವಹಿಸದೇ ಕುಡುಕನ ಪಾತ್ರ ವಹಿಸಿರುವ ಹೀನಗಂಡದ ಭಾವನೆಯೊಂದು ಒಳಮನದಲ್ಲಿ ಕಾಡುತ್ತಿತ್ತು. ತಮ್ಮ ಸರದಿ ಬಂದೊಡನೆ ಗಾಬರಿಯಿಂದಲೇ ರಂಗ ಪ್ರವೇಶ ಮಾಡಲು ಮಾತುಗಳು ಸರಿಯಾಗಿ ಬಾರದೆ ತೊದಲುತ್ತಾ ಕೈಯಲ್ಲಿ ಹಿಡಿದಿದ್ದ ಸೆರೆ ಬಾಟಲಿ ಕಳಚಿ ಕೆಳಗೆ ಬೀಳಲು ಅಂಜುತ್ತಾ, ಆಗ ಹೊರಬಿದ್ದ ಅಸ್ಪಷ್ಟ ನುಡಿಗಳನ್ನು ಮೆಚ್ಚಿದ ಪ್ರೇಕ್ಷಕರು ಇವರು ಕುಡುಕನ ಪಾತ್ರವನ್ನು ಅದ್ಭುತವಾಗಿ ನಟಿಸುತ್ತಿರುವರೆಂದು ಚಪ್ಪಾಳೆ ತಟ್ಟಿದರು. ಸ್ವಲ್ಪ ಚೇತರಿಸಿಕೊಂಡ ಶ್ರೀನಿವಾಸರಾಯರು ಮುಂದಿನ ಭಾಗದಲ್ಲಿ ವ್ಯವಧಾನದಿಂದ ಅಭಿನಯಿಸಿದ್ದರೆಂದೂ ನಾಟಕ ಮುಗಿದ ಮೇಲೆ - 'ಓ ಮಿಸ್ಟರ್ ಕುಡುಕರೇ, ನೀವು ಇಷ್ಟು ಚೆನ್ನಾಗಿ ಕುಡುಕನ ಪಾತ್ರ ನಟಿಸುವಿರೆಂಬ ಕಲ್ಪನೆ ನನಗಿರಲಿಲ್ಲ' ಎಂದು ಪ್ರೊ. ಬೋಂದಾಲೆ ಉದ್ಗಾರ ತೆಗೆದಿದ್ದರಂತೆ. 'ಕುಡುಕನ ಪಾತ್ರವೇ ಅಂದು ನನ್ನನ್ನು ಪಾರು ಮಾಡಿತ್ತು' ಎಂದು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದ ಶ್ರೀನಿವಾಸರಾಯರು ಮುಂದೆ ಅತ್ಯಂತ ಸಂತಸದಿಂದ ವಿವರಿಸಿದ್ದಾರೆ.

ಕ್ರಿ.ಶ. 1917ರ ನಂತರ ಕ್ರಿ.ಶ. 1927ರಲ್ಲಿ ದಿ. ಕೆರೂರು ವಾಸುದೇವಾಚಾರ್ಯರ ಮಗನ ಪರಿಚಯವಾಗಿ ಕೆರೂರರ 'ಪತಿವಶೀಕರಣ' ನಾಟಕದ ಪ್ರತಿಯನ್ನು ಓದಿದ ಶ್ರೀನಿವಾಸರಾಯರು ಈ ನಾಟಕವನ್ನು ರಂಗದ ಮೇಲೆ ಪ್ರಯೋಗಿಸುವ ಹಟ ತೊಟ್ಟು ಗೆಳೆಯರ ಸಹಕಾರದಿಂದ ಗಣೇಶ ಚತುರ್ಥಿ ಉತ್ಸವದಲ್ಲಿ ನಾಟಕವಾಡಿ ಯಶಸ್ಸು ಕಂಡರು. ಈ ಸಂದರ್ಭದಲ್ಲಿ 'ಅಮೆಚೂರ್' ಎಂಬ ಇಂಗ್ಲೀಷ ಪದದ ಪರ್ಯಾಯಾರ್ಥವಾಗಿ ಮುದವೀಡು ಕೃಷ್ಣರಾಯರ ಸೂಚನೆಯಂತೆ 'ವಾಸುದೇವ ವಿನೋದಿನಿ ನಾಟ್ಯ ಸಭೆ' ಯನ್ನು ಕೆರೂರು ವಾಸುದೇವಾಚಾರ್ಯರ ನೆನಪಿಗಾಗಿ ಹುಟ್ಟು ಹಾಕಿದ ಕನ್ನಡ ಪ್ರೇಮಿ

ಎನಿಸಿದರು. ಈ ಸಂಸ್ಥೆಯ ಮೂಲ ಯೋಜನೆಯ ರುವಾರಿ ತಾವೇ ಎಂಬ ವಿಷಯವನ್ನು ತಮ್ಮ ಲೇಖನದಲ್ಲಿ ಬಹಳ ನಮ್ರರಾಗಿ ಹೇಳಿಕೊಂಡಿದ್ದಾರೆ. ಈ ಭಾವನೆಯಿಂದಾಗಿ ಅವರು 'ನಾನು' ಎಂಬ ಅಹಂ ಇಲ್ಲದ ಸಂಕೋಚದ ವ್ಯಕ್ತಿ ಎಂಬುದು ಸ್ಪಷ್ಟವಾಗುತ್ತದೆ. ಈ ನಾಟಕ ಅತ್ಯಂತ ಯಶಸ್ಸು ಕಂಡಿತಲ್ಲದೇ ಶ್ರೀನಿವಾಸರಾಯರು ವಹಿಸಿದ್ದ ರಾಚಿದೇವರಾಯನ ಪಾತ್ರ ಎಲ್ಲರನ್ನೂ ಹೊಟ್ಟೆ ಹುಣ್ಣಾಗಿಸುವಂತೆ ನಗಿಸುತ್ತಿತ್ತೆಂದು ವಿವರಣೆಗಳಿಂದ ತಿಳಿದು ಬಂದಿದೆ.

ಇದರ ನಂತರ 'ಸುಗುಣ ಗಂಭೀರ' ನಾಟಕದಲ್ಲಿ ನಾಯಕಿಯ ಪಾತ್ರ ವಹಿಸಿ ತೃಪ್ತಿ ಕಂಡಿದ್ದರು. ನಂತರ 'ನಳ ದಮಯಂತಿ' ನಾಟಕದಲ್ಲಿ ವೃದ್ಧ ಋಷಿಯ ಪಾತ್ರ ವಹಿಸಿದ್ದರು. ಈ ಪಾತ್ರದಲ್ಲಿ ವೃದ್ಧ ಋಷಿಯ ಕಂಪಿತ ಕಂಠದ ನುಡಿಗಳನ್ನು ಬಯಸಿದ್ದ ಡಾ. ಮುಗುಳಿಯವರು ಪ್ರತ್ಯೇಕವಾಗಿ ಶ್ರೀನಿವಾಸರಾಯರೆಡೆಗೆ ಬಂದು ಎಚ್ಚರಿಸಿದ್ದರೆಂದೂ ಮುಂದೆ ಮರುಪ್ರಯೋಗದಲ್ಲಿ ಎಚ್ಚರವಹಿಸ ಬೇಕೆಂದಿದ್ದ ಇವರಿಗೆ ಈ ನಾಟಕ ಮರು ಪ್ರಯೋಗವಾಗದೆ ಅದೊಂದು ಹಳಹಳಿ ಹಾಗೇ ಉಳಿಯಿತೆಂದು ಹೇಳಿಕೊಂಡಿದ್ದಾರೆ.

## ಕರ್ನಾಟಕ ವಣಿಕ ಸಂಘ

ಕ್ರಿ.ಶ. 1928 ರಲ್ಲಿ ಶ್ರೀನಿವಾಸರಾಯರು ಜಂಗಿನ ಮುರುಗಯ್ಯನವರೊಡನೆ ಕೂಡಿ ವಣಿಕ್ ಸಂಘವನ್ನು ಸ್ಥಾಪಿಸಿದರು. 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಶ್ರೀ ಆರ್. ಕೆ. ಜೋಶಿಯವರು 'ಕಟ್ಟಾಳು ಕನ್ನಡಿಗ' ಲೇಖನದಲ್ಲಿ ಶ್ರೀನಿವಾಸರಾಯರು ಕರ್ನಾಟಕದ ಆರ್ಥಿಕ ಚಿಂತನೆ ಮಾಡುತ್ತಿದ್ದರೆಂದು ಅವರ ಕರ್ನಾಟಕದ ಸರ್ವತೋಮುಖ ಏಳಿಗೆಯ ಚಿಂತನೆಯ ಫಲವೇ ವಣಿಕ್ ಸಂಘ ಸ್ಥಾಪನೆಗೆ ಎಡೆ ಮಾಡಿತೆಂದು ಈ ಸಂಘ ಸ್ಥಾಪನೆಯ ಬಹುಪಾಲು ಶ್ರೇಯಸ್ಸು ಶ್ರೀನಿವಾಸರಾಯರದೇ ಎಂದು ಮನಸ್ಫೂರ್ತಿಯಾಗಿ ಅವರ ಹಿರಿಮೆಯನ್ನು ಕೊಂಡಾಡಿದ್ದಾರೆ. ಕ್ರಿ.ಶ. 1928ರ ಆಗಸ್ಟ್‌ನಲ್ಲಿ ಬಾಗಲಕೋಟೆಯಲ್ಲಿ ಏರ್ಪಟ್ಟ ಕರ್ನಾಟಕ ವಾಣಿಜ್ಯ ಉದ್ದಿಮೆಗಳ ಸಮ್ಮೇಳನಕ್ಕೆ ಸರ್ ಎಂ. ವಿಶ್ವೇಶ್ವರಯ್ಯನವರನ್ನು ಆಹ್ವಾನಿಸಲಾಗಿದ್ದು, ಈ ವಾಣಿಜ್ಯ ಉದ್ಯಮಿಗಳು ಕರ್ನಾಟಕದ ಆರ್ಥಿಕ ಚಿಂತನೆಯಲ್ಲಿ ತೊಡಗಿರುವುದು ಸಂತಸದ – ಸೋಜಿಗದ ಸಂಗತಿಯೆಂದು ಅವರು ಅಭಿಮಾನದಿಂದ ಶ್ಲಾಘಿಸಿ ಸರ್ ಎಂ. ವಿ. ಪತ್ರ ಬರೆದಿದ್ದರು.

ಜಂಗಿನ ಮುರುಗಯ್ಯ ಮತ್ತು ಶ್ರೀನಿವಾಸರಾಯರು ಇವರಿಬ್ಬರೂ ಕರ್ನಾಟಕದ ಹಿತ ರಕ್ಷಿಸುವ ಜಯ – ವಿಜಯರಂಥ ದ್ವಾರ ಪಾಲಕರೆಂದು ಶ್ರೀರಂಗರು ತುಂಬು ಹೃದಯದಿಂದ 'ನಾ ತಿಳಿದುಕೊಂಡ ಶ್ರೀನಿವಾಸರಾಯರು' ಎಂಬ ಲೇಖನದಲ್ಲಿ ಬರೆದಿದ್ದಾರೆ. ಬೆಳೆಯುತ್ತಿದ್ದ ಈ ಮಹಾಸಂಸ್ಥೆ ಬಾಗಲಕೋಟೆಯಿಂದ ಗದುಗಿಗೆ ಸ್ಥಳಾಂತರ ಹೊಂದಿ ನಂತರ ಹುಬ್ಬಳ್ಳಿಯಲ್ಲಿ

ನೆಲೆಯೂರಿ ಹೆಮ್ಮರವಾಗಿ ಕರ್ನಾಟಕದಾದ್ಯಂತ ವರ್ತಕರ, ಉದ್ದಿಮೆದಾರರ ಚಟುವಟಿಕೆಯ ಕೇಂದ್ರವಾಯಿತು.

ಈ ಮಹಾ ಸಂಸ್ಥೆಯ ಪ್ರಾಣಪ್ರತಿಷ್ಠೆಯ ಶ್ರೇಯಸ್ಸಿಗೆ ಪಾತ್ರರಾದ ಶ್ರೀನಿವಾಸರಾಯರು ಸಮಗ್ರ ತಿಳಿವಳಿಕೆಯಿಂದ, ಆಸ್ಥೆಯಿಂದ, ಜವಾಬ್ದಾರಿಯಿಂದ ವಣಿಕ್ ಸಂಘದ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದರು. ಇಂದಿಗೂ ಈ ವಣಿಕ್ ಸಂಘವು ಹುಬ್ಬಳ್ಳಿಯಲ್ಲಿ 'ಕರ್ನಾಟಕ ಚೆಂಬರ ಆಫ್ ಕಾಮರ್ಸ್' ಎಂಬುದಾಗಿ ಕ್ರಿಯಾಶೀಲವಾಗಿ ಅಸ್ತಿತ್ವದಲ್ಲಿದೆ. ಶ್ರೀನಿವಾಸರಾಯರು ಎಂದಿಗೂ ಹಿಡಿದ ಕೆಲಸದ ಯಶಸ್ಸಿಗೆ ಮಹತ್ವ ಕೊಟ್ಟಿದ್ದರೇ ಹೊರತು ತಮ್ಮ ಶ್ರೇಯಸ್ಸಿನ ಇಚ್ಛೆಯೇ ಅವರಿಗಿರಲಿಲ್ಲ. ಶ್ರೀನಿವಾಸರಾಯರಿಗೆ ಗೌರವ ನೀಡಿ ಅವರ ಭಾವಚಿತ್ರ ಅನಾವರಣ ಮಾಡಿದೆ.

ಕ್ರಿ.ಶ. 1930 ರಲ್ಲಿ ಶ್ರೀನಿವಾಸರಾಯರು ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆ (ಎ.ಐ.ಸಿ.ಸಿ)ಯ ಸದಸ್ಯರಾದರು. ದಿನಾಂಕ 21-03-1930 ರಲ್ಲಿ ಗುಜರಾತಿನಲ್ಲಿ ನಡೆದ ಎ.ಐ.ಸಿ.ಸಿ. ಸಭೆಗೆ ಹೋಗಿದ್ದು ಗಾಂಧೀಜಿ ನಡೆಸಿದ ದಾಂಡಿಯಾತ್ರೆಯನ್ನು ಕಣ್ಣಾರೆ ಕಂಡು ಸ್ಫೂರ್ತಿಯಿಂದ ಬಾಗಲಕೋಟೆಗೆ ಮರಳಿದರು. ಈ ಸಮಯದಲ್ಲಿ ಕಾಯ್ದೆಭಂಗ ಚಳುವಳಿಯ ತಾಜಾ ಸುದ್ದಿಗಳನ್ನು ಮುದ್ರಿಸಲು 'ಕನ್ನಡಿಗ' ಪತ್ರಿಕೆಗೆ ಅಸೋಸಿಯೆಟೆಡ್ ಪ್ರೆಸ್ಸ್‌ನ ಸಂಕ್ಷಿಪ್ತ ತಂತಿಗಳನ್ನು 'ವರ್ನಾಕುಲರ್ ಸಮರಿ ಸರ್ವಿಸಸ್'ನ ಮೂಲಕ ತರಿಸುವ ವ್ಯವಸ್ಥೆ ಮಾಡಿದರು. ಬೇರೆ ಪತ್ರಿಕೆಗಳಿಗೆ ಈ ವ್ಯವಸ್ಥೆ ಇರದ ಕಾರಣ 'ಕನ್ನಡಿಗ'ದ ಪ್ರಚಾರ ಹೆಚ್ಚಿತು.

ಇದೇ ವೇಳೆಯಲ್ಲಿ ಅನೇಕ ಸ್ವಯಂಸೇವಕರನ್ನಾಯ್ದು ಹುರಿದುಂಬಿಸಿ ಚಳುವಳಿಗೆ ಕಳಿಸುವ ಜವಾಬ್ದಾರಿಯನ್ನು ವಹಿಸಿಕೊಂಡು ಯಶಸ್ವಿಯಾದರು ಇದರಿಂದಾಗಿ ಇವರನ್ನು ಎ.ಐ.ಸಿ.ಸಿ. ಗೆ ಕರ್ನಾಟಕ ಭಾಗದ ಸದಸ್ಯರಾಗಿ ಆಯ್ಕೆ ಮಾಡಲಾಯಿತು. ದಿನಾಂಕ 13-04-1930 ರಲ್ಲಿ ಬಾಗಲಕೋಟೆಯಲ್ಲಿ ನಿಯಮಬಾಹಿರ ಉಪ್ಪನ್ನು ಮಾರಿ ಉಪ್ಪಿನ ಸತ್ಯಾಗ್ರಹ ಮಾಡಿ ಆರು ತಿಂಗಳ ಜೈಲು ಶಿಕ್ಷೆಗೆ ಒಳಗಾದರು. ಉಪ್ಪನ್ನು ತಯಾರಿಸಿದ ಭೀಮಾಜಿ ಲಿಂಗಾಪುರ್‌ರಿಗೆ 10 ರೂಪಾಯಿ ದಂಡ ವಿಧಿಸಲಾಯಿತು. ಉಪ್ಪನ್ನು ಕೊಂಡ ಕೃಷ್ಣಾಜಿ ಗೋಪಾಲ ನಾಯಕಗೆ 25 ರೂಪಾಯಿ ದಂಡ ವಿಧಿಸಲಾಯಿತು. ಅಂದು ಉಪ್ಪನ್ನು ಕೊಳ್ಳಲು ಮಕ್ಕಳು, ಸ್ತ್ರೀಯರು ನೂಕುನುಗ್ಗಲಾಗಿ ಮುಗಿ ಬೀಳಲು ಅವರ ಹೆಸರು ತಿಳಿಯಲಾಗದೆ ಪೋಲೀಸರು ಪೇಚಿಗೀಡಾಗಲು ಅವರ ಹೆಸರುಗಳನ್ನು ಕಾಂಗ್ರೆಸ್ ಆಫೀಸಿನಲ್ಲಿ ಪ್ರಕಟಿಸಲಾಗುವುದೆಂದು ಸಭೆಯಲ್ಲಿ ಜಾಹೀರುಮಾಡಲಾಯಿತು. ಈ ಪ್ರಕರಣದಿಂದ ಜೈಲು ಶಿಕ್ಷೆಗೆ ಒಳಗಾಗಿದ್ದ ಶ್ರೀನಿವಾಸರಾಯರು ಬಿಡುಗಡೆಯಾದೊಡನೆ ಮತ್ತೆ ಅಕ್ಟೋಬರ್‌ದಲ್ಲಿ ಅರಣ್ಯ ಸತ್ಯಾಗ್ರಹ ಮಾಡಿ ಬಾಗಲಕೋಟೆಯ ಬಳಿಯ ಶಿರೂರಿನಲ್ಲಿ ಶಿಂಧಿಗಿಡ ಕಡಿದ

ಬಗ್ಗೆ ಭಾಷಣ ಮಾಡಿ ಮತ್ತೆ ಆರು ತಿಂಗಳ ಜೈಲುವಾಸವನ್ನು ಅನುಭವಿಸ ಬೇಕಾಯಿತು.

## 'ಕನ್ನಡಿಗ' ಕ್ಕೆ ದಂಡ

ಇವರ ಜೈಲು ಶಿಕ್ಷೆಯ ಅವಧಿಯಲ್ಲಿ ಮುಜುಮ್‌ದಾರ್ ಬಳವಂತರಾವ ವಕೀಲರು ಸ್ವಯಂ ಪ್ರೇರಣೆಯಿಂದ 'ಕನ್ನಡಿಗ'ದ ಸಂಪಾದಕತ್ವದ ಜವಾಬ್ದಾರಿ ವಹಿಸಿಕೊಂಡರು ಮತ್ತು ಸಹಾಯಕರಾಗಿ ಮುಂದೆ ಬಂದ ಅನೇಕ ಮಿತ್ರರು ಸಹಕರಿಸಿದರಾದರೂ ದಿ. 26-7-1930 ರಂದು ಸರಕಾರದ ಆಜ್ಞೆಯಿಂದಾಗಿ 'ಕನ್ನಡಿಗ' ಪತ್ರಿಕೆ ನಿಲ್ಲಿಸುವ ಸ್ಥಿತಿ ಎದುರಾಯಿತು. ಮುಂದೆ ಕ್ರಿ.ಶ. 1931ರ ಮಾರ್ಚನಲ್ಲಿ ರೂ. 10,000 ಗಳಷ್ಟು ದೊಡ್ಡ ಮೊತ್ತದ ನಷ್ಟದೊಂದಿಗೆ ಪತ್ರಿಕೆಯನ್ನು ನಿಲ್ಲಿಸಬೇಕಾಯಿತು. ಇಂತಹ ನಷ್ಟದ ಸಮಯದಲ್ಲಿ ಕುಟುಂಬಕ್ಕಾದ ಕಷ್ಟ ಬವಣೆ ವರ್ಣನಾತೀತ. ಧರ್ಮಪತ್ನಿಯಾದ ಶ್ರೀಮತಿ ಲಕ್ಷ್ಮೀಬಾಯಿಯವರು ತಮ್ಮ ಒಡವೆಗಳನ್ನು ಕಷ್ಟದ ಸಮಯಕ್ಕೆ ಸಹಾಯಕವಾಗಿ ಕೊಟ್ಟರು. ತಾವು ತವರೂರಲ್ಲಿ ನೆಲೆಸಿದರು.

ಆಗರ್ಭ ಶ್ರೀಮಂತರ ಮನೆತನದಲ್ಲಿ ಜನಿಸಿದ ಲಕ್ಷ್ಮೀಬಾಯಿಯನ್ನು ಸವಣೂರಿನ ದಿವಾನರ ಮನೆತನದ ಸೊಸೆಯೆಂದು ಮದುವೆ ಮಾಡಿಕೊಟ್ಟಾಗ ತಮ್ಮ ಮಗಳು ಸರ್ಕಾರಿ ಅಧಿಕಾರಿಗಳ ಹೆಂಡತಿಯಾಗುವಳೆಂದುಕೊಂಡಿದ್ದರೆ ವಿಧಿಖಿತಗಳನ್ನು ಯಾರೂ ಅಳಿಸಲಾರರೆಂಬುದಕ್ಕೆ ಶ್ರೀಮತಿ ಲಕ್ಷ್ಮೀಬಾಯಿಯವರೇ ಪ್ರತ್ಯಕ್ಷ ಸಾಕ್ಷಿ. ಜೀವನದುದ್ದಕ್ಕೂ ಅತ್ಯಂತ ಕಷ್ಟ ನಷ್ಟಗಳನ್ನೆದುರಿಸಿದ ತ್ಯಾಗಮಯಿ. ಪತಿ ಜೈಲಿನಲ್ಲಿದ್ದಾಗ ಅವರು ಜೋಳದರೊಟ್ಟಿ ತಿನ್ನುವರೆಂದು ಗರ್ಭಿಣಿಯಾಗಿರಲಿ, ಬಾಣಂತಿಯಾಗಿರಲಿ, ಇವರು ಸಹ ಜೋಳದ ರೊಟ್ಟಿಯನ್ನೇ ಸೇವಿಸುತ್ತಿದರೆಂದು ಪ್ರತ್ಯಕ್ಷ ಕಂಡ ಬಂಧುಗಳು ಹೇಳುತ್ತಿದ್ದರು. ಶ್ರೀನಿವಾಸರಾಯರು ಜೈಲಿನಲ್ಲಿದ್ದಾಗಲೇ ಚಿಕ್ಕಮಗುವಾದ ವಾದಿರಾಜ ಎಂಬ ಮಗನನ್ನು ಕಳೆದುಕೊಂಡಿದ್ದರು. ಇದೇ ಕೊರಗಿನಲ್ಲಿ ಆ ಮಗುವಿನ ಅಂತಿಮ ಇಚ್ಛೆಯಾಗಿದ್ದ ಮೊಸಂಬಿ ಹಣ್ಣನ್ನು ಲಕ್ಷ್ಮೀಬಾಯಿಯವರು ಜೀವನ ಪರ್ಯಂತ ತ್ಯಜಿಸಿದ್ದರು ಮತ್ತು ಮೊಸಂಬಿ ಹಣ್ಣನ್ನು ಕಂಡೊಡನೆ ಹಿಂದಿನ ನೆನಪಿನಲ್ಲಿ ದುಃಖಿಸುತ್ತಿದ್ದರು.

ಅರಣ್ಯ ಸತ್ಯಾಗ್ರಹದಿಂದ ಜೈಲಿಗೆ ಹೋಗಿದ್ದ ಶ್ರೀನಿವಾಸರಾಯರು ಕ್ರಿ.ಶ. 1931 ರಲ್ಲಿ ಬಿಡುಗಡೆಗೊಂಡು ಹೊರ ಬಂದ ಮೇಲೆ ಡಿಸೆಂಬರ್‌ನಲ್ಲಿ ತಮ್ಮ ಪತ್ನಿ ಮತ್ತು ಚೊಚ್ಚಲ ಮಗಳಾದ ಮೂರು ವರ್ಷದ ಮಂದಾಕಿನಿಯನ್ನು ಕರೆದುಕೊಂಡು ಮಂತ್ರಾಲಯಕ್ಕೆ ಹೋಗಿ ಶ್ರೀ ಗುರುರಾಘವೇಂದ್ರಸ್ವಾಮಿಗಳ ಸೇವೆಯನ್ನು ಮಾಡತೊಡಗಿದರು. ಆ ವೇಳೆಯಲ್ಲಿ ಶ್ರೀನಿವಾಸರಾಯರು ಗಡ್ಡ ಮೀಸೆ ಬೆಳೆಸಿದ್ದು ತಮ್ಮ ಮುಂದಿನ ಕಾರ್ಯದ ಸನ್ನಾಹದಲ್ಲಿ ತೊಡಗಿದ್ದರು.

ಪತಿಪತ್ನಿಯರಿಬ್ಬರೂ ರಾಯರ ಸೇವೆಯಲ್ಲಿ ತೊಡಗಿದ್ದರೂ ಇಬ್ಬರ ಇಷ್ಟಾರ್ಥಗಳು ಮಾತ್ರ ಪರಸ್ಪರ ಬೇರೆಯಾಗಿದ್ದವು. ಪತಿಯು ದೇಶ ಸೇವೆಗೆ ಆಸ್ಪದ ಸಿಗಲಿ, ದೇಶ ಸ್ವತಂತ್ರವಾಗಲಿ ಎಂಬ ಅಭೀಷ್ಟೆ ಹೊಂದಿದವರಾಗಿದ್ದರೆ, ಪತ್ನಿಯು ತನ್ನ ಪತಿ ಜೈಲಿಗೆ ಹೋಗುವ ಪ್ರಸಂಗ ಬರದಿರಲಿ ಎಂದು ರಾಯರಲ್ಲಿ ಬೇಡಿದ್ದರು.

ಕ್ರಿ.ಶ. 1932 ರಲ್ಲಿ ಮತ್ತೆ ಚಳುವಳಿ ಆರಂಭವಾಗಲು 19 ಜನರ ಮೇಲೆ ವಾರಂಟು ಹೊರಟಿತು. ಆ ವೇಳೆಯಲ್ಲಿ ಮಂತ್ರಾಲಯವು ಮದ್ರಾಸ ಪ್ರಾಂತದಲ್ಲಿ ಇದ್ದುದರಿಂದ ಮಂತ್ರಾಲಯದಲ್ಲಿ ನೆಲೆಸಿದ್ದ ಶ್ರೀನಿವಾಸರಾಯರ ಬಂಧನವಾಗಲಿಲ್ಲ. ನಂತರ ಬಾಗಲಕೋಟೆಯಲ್ಲಿ ಆರನೇಯ ಕರ್ನಾಟಕ ರಾಜಕೀಯ ಪರಿಷತ್ತು ನಡೆಸಲು ಕೆ.ಪಿ.ಸಿ.ಸಿ.ಯ ಸೂಚನೆ ಬಂದಿತು. ಪ್ರಾಂತಿಕ ಕಾಂಗ್ರೆಸ್‌ನ ಮುಖಂಡರುಗಳಲ್ಲೊಬ್ಬರಾದ ಗಂಗಾಧರರಾವ್ ದೇಶಪಾಂಡೆಯವರು ಯೋಜನೆಯ ನಿರ್ದೇಶನ ವಿತ್ತರು. ಕೌಜಲಗಿ ತಿರುಮಲರಾಯರು, ಗುಡಿ ಗೋವಿಂದಾಚಾರ್ಯರು ಪರಿಷತ್ತಿನ ಸಿದ್ಧತೆಯಲ್ಲಿ ತೊಡಗಿದರು.

## ಗುಪ್ತ ತಯಾರಿ – ಯಶಸ್ವೀ ಸಮ್ಮೇಳನ

ಶ್ರೀನಿವಾಸರಾಯರನ್ನೇ ಈ ಪರಿಷತ್ತಿನ ಸ್ವಾಗತಾಧ್ಯಕ್ಷರನ್ನಾಗಿ ಮಾಡಿದರು. ಆ ವೇಳೆಯಲ್ಲಿ ಶ್ರೀನಿವಾಸರಾಯರು ಶಿರೂರು ಬಳಿ ವೆಂಕಟೇಶ್ವರ ದೇವಾಲಯದಲ್ಲಿ ಅರ್ಚಕರಂತೆ ವೇಷ ಮರೆಸಿಕೊಂಡು ಭೂಗತರಾಗಿದ್ದರು. ಹೀಗೆ ಗುಪ್ತರೀತಿಯಲ್ಲಿ ಪರಿಷತ್ತಿನ ತಯಾರಿ ನಡೆಸಿದರು. ಅವರು ತಮ್ಮ ಕನ್ನಡಕವನ್ನು ಬಿಟ್ಟು ಗಡ್ಡ ಮೀಸೆ ಬೆಳೆಸಿಕೊಂಡು ಗ್ರಂಥ ಪಠಣ ಮಾಡಿಕೊಂಡು ಪುರಾಣ ಸಹ ಹೇಳುತ್ತ ಗುರುಗಳಂತೆ ಇದ್ದುಕೊಂಡು ಪರಿಷತ್ತಿನ ಸಂಪೂರ್ಣ ತಯಾರಿಯಲ್ಲಿ ತೊಡಗಿದ್ದರು. ಇವರಂತೆಯೇ ಕಾರ್ಯೋನ್ಮುಖರಾಗಿದ್ದ ಅನೇಕ ಮುಖಂಡರುಗಳು ಪರಿಷತ್ತಿನ ತಯಾರಿಯಲ್ಲಿ ತೊಡಗಿದ್ದರು. ಪಟ್ಟಣದಲ್ಲಿ ಪರಿಷತ್ತು ನಡೆಯಲಾರದೆಂದು ಪೋಲೀಸರ ಊಹೆಯಾಗಿತ್ತು. ತುಮಕೂರಿನ ತಾಳಕೆರೆ ಸುಬ್ರಹ್ಮಣ್ಯಮ್ ಪರಿಷತ್ತಿನ ಅಧ್ಯಕ್ಷರೆಂದು ಗೊತ್ತುಮಾಡಿದ್ದು ಅವರು ಬಾಗಲಕೋಟೆಯ ರೈಲು ನಿಲ್ದಾಣದಲ್ಲಿ ಬಂಧಿತರಾದರು.

ಬೆಂಗಳೂರಿನ ರಜವಿ ಸಾಹೇಬರನ್ನು ದ್ವಿತಿಯಾಧ್ಯಕ್ಷರಾಗಿ ನಿಯೋಜಿಸಿದ್ದು ವೇಷ ಮರೆಸಿಕೊಂಡು ಬಂದಿದ್ದರೂ ಅವರು ಬಂಧನಕ್ಕೊಳಗಾದರು. ಹ.ರಾ. ಪುರೋಹಿತರು ಭೂಗತರಾಗಿ ಬಾಗಲಕೋಟೆಯನ್ನು ಸುರಕ್ಷಿತವಾಗಿ ಸೇರಿದರು. ಭೂಗತರಾಗಿದ್ದ ಕರ್ನಾಟಕದ ಹಿರಿಯ ಕಾರ್ಯಕರ್ತರಾದ ಮಾಗಡಿ, ಹಳ್ಳಿಕೇರಿ, ಚಿನ್ಮಯಸ್ವಾಮಿ, ಓಂಕಾರ್‌ಮಠ ಮುಂತಾದವರು ಬಾಗಲಕೋಟೆಗೆ ಬಂದಿದ್ದರು. ದಾಬಡೆ ಟೇಲರ್ ಗುಳೇದಗುಡ್ಡದಲ್ಲಿ ಗುಪ್ತವಾಗಿ ಎಲ್ಲ ಠರಾವುಗಳನ್ನು ಛಾಪಿಸಿ

ತಂದಿದ್ದರು. ಪರಸ್ಥಳದ ನಾಯಕರಲ್ಲಿ ಕೆಲವರು ಸಂತೆಯ ವ್ಯಾಪಾರಕ್ಕೆ ಬಂದಂತೆ ಮತ್ತು ಬಿಕ್ಷುರಂತೆ, ಹೀಗೆ ಬೇರೆ ಬೇರೆ ರೀತಿಯಲ್ಲಿ ವೇಷಮರೆಸಿಕೊಂಡು ಸಿದ್ಧರಿದ್ದರು. ಪೋಲೀಸರ ಸರ್ಪಗಾವಲು ಅತೀ ಕಟ್ಟುನಿಟ್ಟಾಗಿತ್ತು. ಸಭೆಯನ್ನು ಬಗ್ಗುಬಡಿಯಲು ಎರಡು ತಿಂಗಳಿಂದ ಎಲ್ಲ ರಸ್ತೆಗಳನ್ನು ಬಂದು ಮಾಡಿ ಸಂಶಯ ಬಂದವರನ್ನು ತಪಾಸಣೆ ಮಾಡಲು ಮತ್ತು ಬಂಧಿಸಲು ಪ್ರಾರಂಭಿಸಿದ್ದರು. ಇಂಥ ಬಿಗಿ ಸರ್ಪಗಾವಲಿನಲ್ಲೂ ಬಾಗಲಕೋಟೆಯ ಮಾರ್ಕೇಟ್ ಮಧ್ಯದಲ್ಲೇ ಸಂತೆಯ ದಿನ ದಿನಾಂಕ 28–05–1932 ರ ಮಧ್ಯಾಹ್ನ ಎರಡು ಗಂಟೆಯ ನಿಗದಿತ ವೇಳೆಗೆ ಶ್ರೀನಿವಾಸರಾಯರು ಹಾಗು ಅಧ್ಯಕ್ಷ ಹ.ರಾ.ಪುರೋಹಿತರು ಹಾಜರಾಗಿ ಜಯಕಾರ ಹಾಕಲು ಸಂತೆಯಲ್ಲಿ ಸಾಮಾನ್ಯರಂತೆ ಓಡಾಡುತ್ತಿದ್ದ ಸುಮಾರು ಒಂದು ಸಾವಿರದಷ್ಟು ಸ್ಥಳೀಯರು ಹಾಗು ಪರ ಊರಿನ ಕಾರ್ಯಕರ್ತರುಗಳು ಹಾಜರಾದರು.

ಶ್ರೀನಿವಾಸರಾಯರಿಂದ ಸ್ವಾಗತ ಭಾಷಣ ಆರಂಭವಾಗಲು ಮಾಮೂಲು ವೇಷದಲ್ಲಿದ್ದ ಪೋಲೀಸರಿಬ್ಬರು ಬಂದು ಇವರನ್ನು ಬಂಧಿಸಲು ಮುಂದಾದರು. ಚಾಣಾಕ್ಷರಾದ ಶ್ರೀನಿವಾಸರಾಯರು 'ನಿಮ್ಮ ವಾರೆಂಟು ತೋರಿಸಿ' ಎಂದು ಗದರಿಸಲು, ಹೆದರಿದ ಪೋಲೀಸರು ತಮ್ಮ ಮೇಲಾಧಿಕಾರಿಗಳ ಕಡೆಗೆ ಧಾವಿಸಿದರು. ಶ್ರೀನಿವಾಸರಾಯರ ಸ್ವಾಗತ ಭಾಷಣ ಮುಗಿಯಿತು. ಹ.ರಾ.ಪೊರೋಹಿತರ ಅಧ್ಯಕ್ಷ ಭಾಷಣ ನಡೆಯುತ್ತಿದ್ದಂತೆ ಪೋಲೀಸ್ ಪಡೆ ಮುತ್ತಿತು. ಕೆರೂರು ಸುಗುಣೇಂದ್ರರು ಠರಾವುಗಳನ್ನು ಮಂಡಿಸಿದರು. ಠರಾವುಗಳ ಮಂಡನೆ ಮತ್ತು ಮಂಜೂರಾತಿಯೂ ಆಯಿತು. ಪೋಲೀಸರು ಬರುವಷ್ಟರಲ್ಲಿ 144ನೇ ಕಾಲಂನು ಉಲ್ಲಂಘಿಸಿ ಆರನೇಯ ಪ್ರಾಂತಿಕ ರಾಜಕೀಯ ಪರಿಷತ್ತು ಮುಗಿಯಿತು. ಪರಿಷತ್ತು ಯಶಸ್ವಿಯಾಗಿ ಮುಗಿಯಲು ಇವರನ್ನೆಲ್ಲಾ ಬಂಧಿಸಿದ ಪೋಲೀಸರು ಪ್ರಮುಖ ಬೀದಿಗಳಲ್ಲಿ ಸಾಗುತ್ತಿದ್ದಂತೆ ಅಪಾರ ಜನಸಂದಣಿ ಜಯಘೋಷ ಮಾಡುತ್ತ ಇವರುಗಳನ್ನನುಸರಿಸಿತು. ತಾಲೂಕು ಕಚೇರಿ ಆವರಣವೇ ಇವರಿಗೆಲ್ಲಾ ಜೈಲಾಗಿ ಊರ ಜನರೆಲ್ಲಾ ಇವರುಗಳ ಸಮಾರಾಧನೆಗೆ ಸಹಕರಿಸಿದರು. ದೀರ್ಘಕಾಲ ಭೂಗತರಾಗಿದ್ದ ಕರ್ನಾಟಕದ 200 ಜನ ಗಣ್ಯ ಕಾರ್ಯಕರ್ತರ ಬಂಧನವಾದ್ದರಿಂದ ಪೋಲೀಸ್ ಅಧಿಕಾರಿಯೊಬ್ಬನು ಶ್ರೀನಿವಾಸರಾಯರನ್ನುದ್ದೇಶಿಸಿ 'ನಮ್ಮ ಸಿ.ಐ.ಡಿಗಳ ದಕ್ಷತೆಯ ಶೋಧಕ್ಕೆ ಕೂಡ ದೊರೆಯದ ಹುಲಿ, ಸಿಂಹ, ಆನೆಗಳಂತಹ ಪ್ರಮುಖರಾದ ಮುಂದಾಳುಗಳು ಸಹ ಈಗ ನಮಗೆ ಲಭ್ಯವಾಗಿದ್ದರಿಂದ ಶ್ರೀನಿವಾಸರಾಯರನ್ನು ವಂದಿಸಿದರೆ ತಪ್ಪಾಗಲಾರದು' ಎಂದಿದ್ದರಂತೆ.

ಈ ಪರಿಷತ್ತಿನ ಬಗ್ಗೆ ಶ್ರೀನಿವಾಸರಾಯರು ಆಗಾಗ ಸ್ವತಃ ನಮಗೆ ಹೇಳುತ್ತಿದ್ದುದು ನೆನಪಿದೆ. ಈ 6ನೇ ರಾಜಕೀಯ ಪರಿಷತ್ತು ಕರ್ನಾಟಕಕ್ಕೆ ಅದರಲ್ಲೂ

ಬಾಗಲಕೋಟೆಗೆ ಕೀರ್ತಿ ತಂದಿತಲ್ಲದೇ ಸ್ವಾತಂತ್ರ್ಯ ಸಂಗ್ರಾಮದಲ್ಲೇ ಅಪೂರ್ವ ಘಟನೆಯಾಯಿತು. ಶ್ರೀನಿವಾಸರಾಯರ ಸಂಘಟನಾ ಶಕ್ತಿಗೆ ಈ ಪ್ರಭಾವಶಾಲಿ ಪರಿಷತ್ತು ಅದ್ಭುತವಾದ ಸಾಕ್ಷಿಯಾಗಿದೆ. ಈ ಹಿಂದೆ ಮಂತ್ರಾಲಯದಲ್ಲಿದ್ದು ರಾಯರ ಸೇವೆಯಲ್ಲಿ ತೊಡಗಿದ್ದಾಗಿನಿಂದ ವ್ರತನಿಯಮಗಳ ಕಟ್ಟುನಿಟ್ಟಿನ ಜೀವನ ನಡೆಸಿದ್ದ ಇವರು ಈ ಸಲ ಜೈಲಿನಲ್ಲೂ ಸ್ವತಃ ಅಡಿಗೆ ಮಾಡಿಕೊಳ್ಳುವುದಾಗಿ ಆಗ್ರಹ ನಡೆಸಿ ಕತ್ತಲೆ ಕೋಣೆಯ ಶಿಕ್ಷೆಗೆ ಒಳಗಾದರು.

## 'ಕನ್ನಡಿಗ'ವು 'ಸಂಯುಕ್ತ ಕರ್ನಾಟಕ'ದಲ್ಲಿ ಐಕ್ಯ

ಈ ಶಿಕ್ಷೆ ಮುಗಿದು ಜೈಲಿನಿಂದ ಬಿಡುಗಡೆಯಾದ ಮೇಲೆ ಕ್ರಿ.ಶ. 1933 ರ ಎಪ್ರಿಲ್ ನಲ್ಲಿ 'ಕನ್ನಡಿಗ' ದಿನ ಪತ್ರಿಕೆಯನ್ನು ಪುನಃ ಹೊರಡಿಸುವ ಸನ್ನಾಹದಿಂದ ಆಲೂರರ ಸಂಪಾದಕತ್ವದಲ್ಲಿ ಧಾರವಾಡಕ್ಕೆ ಸ್ಥಳಾಂತರಿಸಿದರು. ದಿನಾಂಕ 24–8–1933 ರಿಂದ 'ಕನ್ನಡಿಗ'ವು ಜಾಗ್ರತವಾಗ ತೊಡಗಿತ್ತು. ಇದೇ ವೇಳೆಯಲ್ಲಿ ಬೆಳಗಾವಿಯಿಂದ 'ಸಂಯುಕ್ತ ಕರ್ನಾಟಕ' ಎಂಬ ಪತ್ರಿಕೆ ಹೊರ ಬರ ತೊಡಗಿತು. 'ಕನ್ನಡಿಗ'ವು ವೈಯಕ್ತಿಕ ಸಾಹಸದಿಂದ ನಡೆಯುತ್ತಿದ್ದ ಪತ್ರಿಕೆ. ಆದರೆ 'ಸಂಯುಕ್ತ ಕರ್ನಾಟಕ'ಕ್ಕೆ ಸಂಘಟಿತ ಸಂಸ್ಥೆಯ ಬೆಂಬಲ ಏದ್ದಿತು. ಈ ಎರಡೂ ಪತ್ರಿಕೆಗಳನ್ನು ಹೊರಡಿಸುವವರು ಸಹ ಪರಸ್ಪರ ಸ್ನೇಹಿತರೇ ಆಗಿದ್ದರು; ಮತ್ತು ಇವೆರಡರ ಗುರಿಯು ಒಂದೇ ಆಗಿದ್ದಿತು. ಹೀಗಿರುವಾಗ ಸಂಘಟಿತ ಬೆಂಬಲವಿರುವ ಒಂದೇ ಪತ್ರಿಕೆ ಹೊರಬಂದರೆ ಉಚಿತವೆಂಬ ಘನೋದ್ದೇಶದಿಂದ ಶ್ರೀನಿವಾಸರಾಯರು ತಮ್ಮ ಪತ್ರಿಕೆಯನ್ನು 'ಸಂಯುಕ್ತ ಕರ್ನಾಟಕ'ದಲ್ಲಿ ವಿಲೀನಗೊಳಿಸಲು 'ಕರ್ನಾಟಕ ಪ್ರಕಾಶನ ಮಂಡಳ' ದವರಿಗೆ ಬಿನ್ನವಿಸಿ ಸಂಚಾಲಕ ವರ್ಗಕ್ಕೆ ಒಪ್ಪಿಸಿದರು. ಹೀಗಾಗಿ 'ಕನ್ನಡಿಗ'ವು ದಿನಾಂಕ 25–11–1933ರಿಂದ ಬೆಳಗಾವಿಯ 'ಸಂಯುಕ್ತ ಕರ್ನಾಟಕ'ದಲ್ಲಿ ಲೀನವಾಯಿತು. 'ಕನ್ನಡಿಗ'ವು 'ಸಂಯುಕ್ತ ಕರ್ನಾಟಕ' ದಲ್ಲಿ ಸಮಾವೇಶವಾಗಿದೆ ಎಂದು ಹಲವಾರು ವರ್ಷಗಳ ಕಾಲ ಮುದ್ರಿಸಲಾಗುತ್ತಿತ್ತು. ಶ್ರೀನಿವಾಸರಾಯರು ತಮ್ಮ ಆದರ್ಶವನ್ನು 'ಸಂಯುಕ್ತ ಕರ್ನಾಟಕ'ಕ್ಕೆ ತುಂಬಿ ಅದರ ಬೆಳವಣಿಗೆಗಾಗಿ ಶ್ರಮಿಸಿದರು. ಕನ್ನಡಿಗರಿಗಾಗಿ ಒಂದಾದರೂ ಕನ್ನಡ ಪತ್ರಿಕೆ ಉಳಿಯಲಿ ಎಂಬಂಥ ವಿಶಾಲ ಹೃದಯದಿಂದ ದುಡಿದರು.

'ಕನ್ನಡಿಗ' ಪತ್ರಿಕೆಯನ್ನು ಕುರಿತು ಆಲೂರರು ತಮ್ಮ 'ಜೀವನ ಸ್ಮೃತಿ' ಗಳಲ್ಲಿ – 'ಕರ್ನಾಟಕತ್ವದ ಪ್ರಚಾರಕ್ಕಾಗಿಯೇ ಹೊರಟ ಪತ್ರಿಕೆ ಎಂದರೆ ಮಂಗಳವೇಢೆ ಶೀನೂನು ತೆಗೆದ ಕನ್ನಡಿಗ ಪತ್ರಿಕೆಯೊಂದೇ. ಅವನು ಅದನ್ನು ಕೆಲವರ್ಷ ನಡೆಸಿದನು. ಅದಕ್ಕೆ ದೈನಿಕ ಪತ್ರದ ಸ್ವರೂಪ ಕೊಡಲು ಕೆಲವು ತಿಂಗಳು ಸಾಹಸ ಪಟ್ಟ, ಆಗ ಅದಕ್ಕೆ ನಾನು 'ಸಂಪಾದಕ' ಎಂದು ಹೇಳಿದ್ದಾರೆ.

ಶ್ರೀನಿವಾಸರಾಯರು ತಮ್ಮ ಜೀವಿತಾವಧಿಯಲ್ಲಿ ಹೊರತಂದಿರುವ 'ಕನ್ನಡಿಗ' ಪತ್ರಿಕೆಗಳ ಸಂಗ್ರಹವನ್ನು ಇಂದಿಗೂ ಕರ್ನಾಟಕ ವಿಶ್ವವಿದ್ಯಾಲಯವು ಸ್ವಾತಂತ್ರ್ಯ ಸಂಗ್ರಾಮದ ಅಮೂಲ್ಯವಾದ ಐತಿಹಾಸಿಕ ದಾಖಲೆಯೆಂದು ಗುರುತಿಸಿ ಅವುಗಳನ್ನು ರಕ್ಷಿಸಿಕೊಂಡು ಬಂದಿದೆ. ಕ್ರಿ.ಶ. 1973ರ ವೇಳೆಗೆ ಡಾ. ಸೂರ್ಯನಾಥ ಕಾಮತರಿಗೆ ಶ್ರೀನಿವಾಸರಾಯರ ನಿಕಟ ಸಂಪರ್ಕ ಒದಗಿ ಬಂದು 'ಕನ್ನಡಿಗ' ಪತ್ರಿಕೆಯ ಹಳೆಯ ಕಡತಗಳನ್ನು ರಾಜ್ಯ ಪತ್ರಾಗಾರದಲ್ಲಿ ಆಗಿನ ಪತ್ರಾಗಾರದ ನಿರ್ದೇಶಕರಾದ ಡಾ. ದೇಶೀಕಾಚಾರ್ ಅವರ ಸಹಾಯದಿಂದ ಮೈಕ್ರೊಫಿಲ್ಮ್ ಮಾಡಿಸಿ ಕಾದಿರಿಸಿದ್ದಾರೆ.

ಆಲೂರರು ಕ್ರಿ.ಶ. 1924 ರಲ್ಲಿ ಉದಕಮಂಡಲದ ಪ್ರಾಚ್ಯ ಸಂಶೋಧನಾ ಇಲಾಖೆಯವರನ್ನು ಭೇಟಿಯಾಗಿ ಕರ್ನಾಟಕದ ಹಳ್ಳಿಗಳಲ್ಲಿರುವ ಶಿಲಾ ಲಿಪಿಗಳನ್ನು ಸಂಗ್ರಹಿಸಲು ಶ್ರೀನಿವಾಸರಾಯರಿಗೆ ಒತ್ತಾಯಿಸಿದ್ದರು. ಕ್ರಿ.ಶ. 1940 ರಲ್ಲಿ ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧನ ಮಂಡಲದ ಕಾರ್ಯದರ್ಶಿಯಾಗಿ ತಮ್ಮನ್ನು ತಾವು ತೊಡಗಿಸಿ ಕೊಂಡ ಶ್ರೀನಿವಾಸರಾಯರು ಬಾಗಲಕೋಟೆ, ಬಾದಾಮಿ ಸಮೀಪದ ಗ್ರಾಮಗಳಲ್ಲಿ ಸುತ್ತಾಡಿ ಹಳೆಯ ನಾಣ್ಯಗಳನ್ನು ಪತ್ತೆ ಮಾಡಿ ಸಂಶೋಧನಾ ಸಂಸ್ಥೆಗೆ ಒಪ್ಪಿಸಿದರು. ಮಣ್ಣಿನ ಪಾತ್ರೆ, ಶಂಖ, ಕಬ್ಬಿಣ, ಕಲ್ಲಿನ ತುಣುಕುಗಳನ್ನು ಪತ್ತೆ ಹಚ್ಚಿ ಸಂಶೋಧನಾ ಇಲಾಖೆಗೆ ಕೊಟ್ಟರು ಐತಿಹಾಸಿಕ ಮಹತ್ವದ ಹಸ್ತ ಲಿಖಿತ ಪುಸ್ತಕ ಹಾಗು ಸನದುಗಳನ್ನು ಸಂಶೋಧಿಸಿ ಸಂಶೋಧನಾ ಸಂಸ್ಥೆಗೆ ವರದಿ ಸಲ್ಲಿಸಿದರು. ಈ ರೀತಿ ಕರ್ನಾಟಕದ ಇತಿಹಾಸವನ್ನು ಕಲೆಹಾಕುವಲ್ಲಿ ಶ್ರದ್ಧೆವಹಿಸಿ ಕರ್ನಾಟಕ ಇತಿಹಾಸ ಮಂಡಲದ ಕಾರ್ಯದರ್ಶಿಯಾಗಿ ಅಮೂಲ್ಯ ಸೇವೆ ಸಲ್ಲಿಸಿದವರಾದರು.

ಎಂಟು ವರ್ಷದ ಬಾಲಕಿಯಾಗಿದ್ದ ತಮ್ಮ ಮಗಳನ್ನು ಪ್ರಭಾತ ಫೇರಿಯಲ್ಲಿ ಭಾಗವಹಿಸಲು ಪ್ರೇರೆಪಿಸಿದ್ದರು. ಆ ಕಾಲದಲ್ಲಿ ಸಣ್ಣ ಮಕ್ಕಳು ಸಹಿತ ಶಾಲಾ ಬಾಲಾಬಾಲಕಿಯರು ದೇಶ ಭಕ್ತಿಯಿಂದ ಪ್ರಭಾತಫೇರಿ, ಸೇವಾದಳ, ಚರಕ ನೂಲುವುದು, ಖಾದಿವಸ್ತ್ರ ತೊಡುವುದು ಮುಂತಾದ ದೇಶಾಭಿಮಾನಿ ಚಟುವಟಿಕೆಗಳಲ್ಲಿ ಸ್ವಯಂ ಪ್ರೇರಿತರಾಗಿ ಭಾಗಿಯಾಗುತ್ತಿದ್ದರು. ಕ್ರಿ.ಶ. 1942 ರಿಂದ ಕ್ರಿ.ಶ. 1945ರ ವರೆಗೆ ಶ್ರೀನಿವಾಸರಾಯರು ಕಾರ್ಯಕರ್ತರನ್ನು ತಯಾರಿಸಿ, ಅವರ ಮನವೊಲಿಸಿ, ಹುರಿದುಂಬಿಸಿ ಆಂದೋಳನಗಳಲ್ಲಿ ಅವರನ್ನು ತೊಡಗಿಸಿದ ಯಶಸ್ಸಿಗೆ ಕಾರಣರಾದರು. ಅವು 'ಕ್ವಿಟ್ ಇಂಡಿಯಾ' ಚಳುವಳಿಯ ದಿನಗಳು. ಗಾಂಧಿಜೀಯವರ ಆದೇಶದಂತೆ 'ಮಾಡು ಇಲ್ಲವೇ ಮಡಿ' ಆಚರಣೆ ನಡೆದಿತ್ತು. ಅಲ್ಲಲ್ಲಿ ಸಭೆ, ಮೆರವಣಿಗೆಗಳನ್ನೇರ್ಪಡಿಸಿ ಸರಕಾರಿ ಕೆಲಸಕಾರ್ಯಗಳಿಗೆ ಅಡ್ಡಿ ಆತಂಕಗಳನ್ನೊಡ್ಡಿ, ಸರಕಾರವನ್ನು ನಿಷ್ಕ್ರಿಯಗೊಳಿಸುವ ಕಾರ್ಯದಲ್ಲಿ ದೇಶದೆಲ್ಲೆಡೆ ಜನತೆ ನಿರತವಾಗಿದ್ದರೂ ಶ್ರೀನಿವಾಸರಾಯರ ಮುಂದಾಳತ್ವದಲ್ಲಿ ಬಾಗಲಕೋಟೆಯಲ್ಲಿ ಸರ್ಕಾರಿ ಕಾಗದ ಪತ್ರಗಳನ್ನು ಧ್ವಂಸ ಮಾಡುವುದು,

ಪರದೇಶೀ ವಸ್ತ್ರಗಳನ್ನು ಸುಡುವುದು, ರೈಲು ಹಳಿಗಳನ್ನು ಕಿತ್ತುಹಾಕುವುದು, ತಾರು ತಂತಿಗಳನ್ನು ಕತ್ತರಿಸುವುದು ಮತ್ತು ಗುಪ್ತವಾಗಿ ಸಂದೇಶಗಳನ್ನು ಬೀರುವ ಕೈಬರಹದ ಬುಲೆಟಿನ್‌ಗಳನ್ನು ತಯಾರಿಸಿ ಹಂಚುವ ಮಹತ್ವದ ಕೆಲಸಗಳನ್ನು ಯಶಸ್ವಿಗೊಳಿಸುವುದರಲ್ಲಿ ಸಫಲರಾದರು.

ಇಂತಹ ಒಂದು ಸಂದರ್ಭದಲ್ಲಿ ಶ್ರೀನಿವಾಸರಾಯರಿಂದಲೇ ಬುಲೆಟಿನ್ ತಯಾರಿಸಲು ತರಬೇತಿ ಹೊಂದಿದ ಸ್ವತಃ ಅವರ ಅಕ್ಕನ ಮಗ ಪಿ.ಯಂ. ಮಂಗಳವೇಢೆಯವರು ಭೂಗತ ಕರ ಪತ್ರವನ್ನು ತಮ್ಮ ಕೈಬರಹದಿಂದ ತಯಾರಿಸಿ ಹೊರಡಿಸುತ್ತಿದ್ದ ಸಂದರ್ಭದಲ್ಲಿ ಪೋಲೀಸರ ಅನುಮಾನಕ್ಕೊಳಗಾಗಿ ಬಂಧಿಸಲ್ಪಟ್ಟರು. ಅವರನ್ನು ಠಾಣೆಯಲ್ಲಿ ವಿಚಾರಣೆಗೊಳಪಡಿಸಿದರು. ಪಿ.ಯಂ. ಮಂಗಳವೇಢೆಯವರಿಂದ ಒಂದು ಹಾಳೆಯಲ್ಲಿ ಬರೆಯಿಸಿ ನೋಡಲು ಬುಲೆಟಿನ್‌ನಲ್ಲಿದ್ದ ಅಕ್ಷರಕ್ಕೂ ಅವರು ಠಾಣೆಯಲ್ಲಿ ಬರೆದಂತಹ ಅಕ್ಷರಕ್ಕೂ ವ್ಯತ್ಯಾಸ ಕಂಡು ಬರಲು ಅನುಮಾನದಿಂದ ಬಂಧಿಸಿದ್ದ ಪೋಲೀಸರು ಅವರನ್ನು ಬಿಡಲೇಬೇಕಾಯಿತು. ಇದರಲ್ಲಿ ಅಡಗಿರುವ ಗೂಢತೆ ಎಂದರೆ ಬುಲೆಟಿನ್ ತಯಾರಿಸುವಾಗ ಎಡಗೈಯಿಂದ ಅಭ್ಯಾಸ ಮಾಡಿ ಬರೆಯುವಂತೆ ಶ್ರೀನಿವಾಸರಾಯರು ತರಬೇತಿ ನೀಡಿದ್ದರು. 'ಈ ಚಾಣಾಕ್ಷತೆಯ ತರಬೇತಿ ನೀಡಿದ ಶೀನುಕಾಕಾರಿಂದ ನಾನು ಪಾರಾದೆ ಎಂದು ಪಿ.ಯಂ. ಮಂಗಳವೇಢೆಯವರು ತಿಳಿಸಿದ್ದಾರೆ.

## ಬಂಧನ

ಶ್ರೀನಿವಾಸರಾಯರು ಸತ್ಯಾಗ್ರಹಿಗಳಿಗೆ ಆಶ್ರಯವನ್ನೂ, ಭೂಗತ ನಾಯಕರಿಗೆ ನೆರವನ್ನೂ ನೀಡುತ್ತಿದ್ದರೆಂದು ತಿಳಿದುಬಂದು ಕ್ರಿ.ಶ. 1942 ರ ಡಿಸೆಂಬರ್‌ದಲ್ಲಿ ಬಂಧಿಸಲು ಅವರು ಬೆಳಗಾವಿ ಜೈಲಿನಲ್ಲಿ ಸ್ಥಾನ ಬದ್ಧರಾಗಿದ್ದರು. ಇದೇ ರೀತಿಯಾಗಿ ಒಟ್ಟು ಚಳುವಳಿ ಸಂದರ್ಭದಲ್ಲಿ ನಾಲ್ಕು ಬಾರಿ ಜೈಲಿಗೆ ತೆರಳಿದ್ದಾರೆ. ಇವರು ಒಟ್ಟಾರೆ 36 ತಿಂಗಳುಗಳ ಕಾಲಾವಧಿಯ ಜೈಲುವಾಸವನ್ನು ಅನುಭವಿಸಿದ್ದಾರೆ. ಶ್ರೀನಿವಾಸರಾಯರ ಸ್ವಾತಂತ್ರ್ಯ ಪ್ರೇಮ ನಾಡು ನುಡಿಯ ಬಗೆಗಿನ ಕಾಳಜಿ ಮತ್ತು ಚಿಂತನೆಯಲ್ಲಿ ಜನಮನವನ್ನು ಬಡಿದೆಬ್ಬಿಸಲು ಗಯ್ಯುತ್ತಿದ್ದ ಸತತ ಪ್ರಯತ್ನಗಳ ಸಾಹಸಕ್ಕಾಗಿ ಆರ್ಥಿಕವಾಗಿ – ವೈಯಕ್ತಿಕವಾಗಿ ಬವಣೆಬಟ್ಟಂಥ ದೇಶ ಪ್ರೇಮಿ. ಇವರ ಜೈಲುವಾಸದ ಅವಧಿಯಲ್ಲಿ ಕುಟುಂಬಕ್ಕಾದ ನಷ್ಟ, ಆರ್ಥಿಕ ಮುಗ್ಗಟ್ಟಿನ ಬಾಧೆಯನ್ನು ಸರಿಪಡಿಸಲು ತಮ್ಮ ತಾಯಿಯ ಆಸ್ತಿ ಮಾರಿ ಖರಿದಿಸಿದ್ದ ಬಾಗಲಕೋಟೆಯ ಊರ ಹೊರಗಿನ ಬೀಳು ಹೊಲವನ್ನು ನಿವೇಶನಗಳಾಗಿ ವಿಂಗಡಿಸಿ ಅವುಗಳನ್ನೆಲ್ಲ ಮಾರಿ ಸುಮಾರು ರೂ. 50 ಸಾವಿರದಷ್ಟು ಇದ್ದ ಸಾಲದ ಬಾಧೆಯಿಂದ

ಋಣಮುಕ್ತರಾದರು. ಆದರೆ, ವೈಯಕ್ತಿಕವಾಗಿ ಅವರು ಅನುಭವಿಸಿದ ನಷ್ಟ ತುಂಬಲಾರದ ನಷ್ಟವೇ ಸರಿ. ಇಷ್ಟಿದ್ದರೂ ಕುಟುಂಬವು ಪಟ್ಟ ಪಾಡು ಅವರೆಲ್ಲರ ದೇಶಭಕ್ತಿಯ ಸಂಕೇತವಾಗಿದೆ.

ಆಗರ್ಭ ಶ್ರೀಮಂತರಾಗಿದ್ದ ಶ್ರೀನಿವಾಸರಾಯರು ಜೈಲಿನ ಊಟವೇ 'ಪರಮ ಪಾವನ' ಎನ್ನುತ್ತಿದ್ದರೆಂದೂ ಅವರ ಸರಳತೆಯನ್ನೂ ಅವರ ದೇಶ ಪ್ರೇವನ್ನೂ ಮತ್ತು ಅವರಿಗೆ ಸಹಕಾರವಿತ್ತ ಅವರ ಧರ್ಮ ಪತ್ನಿಯನ್ನು ಮನತುಂಬಿ ಶ್ಲಾಘಿಸುತ್ತಾ ದಾತಾರ ಸುಬ್ಬಕ್ಕನವರು ಶ್ರೀನಿವಾಸರಾಯರು ಜೈಲಿಗೆ ಹೊರಟಾಗ ಕಣ್ಣಾರೆಕಂಡ ದೃಶ್ಯವನ್ನು ತಮ್ಮ ಲೇಖನದಲ್ಲಿ 'ಊರಿನ ಪ್ರಮುಖರೆಲ್ಲರೂ ಸೇರಿ ನೂಲಿನ ಹಾರ ಹಾಕುತ್ತಿದ್ದರು. ಈ ಹಾರದಿಂದ ಅವರ ಕೊರಳು ತುಂಬಿರಲು ಹಸನ್ಮುಖದಿಂದಲೇ ಎಲ್ಲರನ್ನು ಬೀಳ್ಕೊಟ್ಟು ಜೈಲಿಗೆ ಹೊಗುತ್ತಿದ್ದರು' ಎಂದು ವಿವರಿಸಿದ್ದಾರೆ.

ಶ್ರೀನಿವಾಸರಾಯರು ಕ್ರಿ.ಶ. 1944 ರಿಂದಲೇ ರಾಜಕೀಯದ ನಂಟನ್ನು ಕಡಿಮೆ ಮಾಡಿದ್ದರಾದರೂ ದೇಶ ಸ್ವತಂತ್ರವಾಗುವವರೆಗೂ ದೇಶಭಕ್ತಿ ಅವರನ್ನು ಇದೇ 'ಚಟುವಟಿಕೆಯಲ್ಲಿ ಬಂಧಿಸಿಟ್ಟಿತ್ತು. ಕ್ರಿ.ಶ. 1944 ರಲ್ಲಿ ಜೈಲಿನಿಂದ ಬಿಡುಗಡೆಯಾಗಿ ಹೊರ ಬಂದ ಮೇಲೆ ಶ್ರೀರಂಗರು ಶ್ರೀನಿವಾಸರಾಯರನ್ನು ಕಂಡು 'ನೀವು ಆಗಾಗ ಜೈಲಿಗೆ ಹೋಗುವ ಚಳುವಳಿಯನ್ನು ಬಿಟ್ಟರೆ ಏಕೀಕರಣದ ಬಗ್ಗೆ ಹೆಚ್ಚು ದುಡಿಯಬಹುದು' ಎನ್ನಲು – 'ಇನ್ನು ಸ್ವರಾಜ್ಯ ಸಿಕ್ಕುವ ಲಕ್ಷಣವಿದೆ. ನಾನು ರಾಜಕೀಯವನ್ನು ಬಿಡುವೆ. ಆದರೆ ಏಕೀಕರಣಕ್ಕಾಗಿ ನೀವು ಮುಂದಾಗಿ ದುಡಿಯ ಬೇಕು' ಎಂದಿದ್ದರೆಂದು ಶ್ರೀರಂಗರು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. 'ಮಹಾರಾಷ್ಟ್ರದಲ್ಲಿ ಉಚ್ಚಶಿಕ್ಷಣ ಪಡೆದು, ಇಂಗ್ಲಂಡಿನಲ್ಲಿ ಮೂರು ವರ್ಷ ಕಳೆದು, ಧಾರವಾಡದ ಕಾಲೇಜಿನಲ್ಲಿ ಸಂಸ್ಕೃತ ಕಲಿಸುತ್ತಿದ್ದ ನನಗೆ ಕನ್ನಡದಲ್ಲಿ ಆಸಕ್ತಿ ಇರಲಿಲ್ಲ, ಕರ್ನಾಟಕತ್ವದ ಕಲ್ಪನೆಯೇ ಇದ್ದಿರಲಿಲ್ಲ' ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುವ ಶ್ರೀರಂಗರನ್ನು ಕನ್ನಡ ಪ್ರೇಮಿಯನ್ನಾಗಿ ಮಾಡಿದ ಶ್ರೀನಿವಾಸರಾಯರನ್ನು ಅವರು 'ಗುರು' ಎಂದಿದ್ದಾರೆ. ತೀರಾ ಸ್ವತಂತ್ರ ಎನ್ನಿಸುವ ಅವರ ನಾಟಕಗಳನ್ನು ಅಂದಿನ ದಿನಗಳಲ್ಲಿ ಮೆಚ್ಚಿ 'ಹರಿ ಜನಿವಾರ' ನಾಟಕವನ್ನು ಬಾಗಲಕೋಟೆಯಲ್ಲಿ ಆಡಲು ಉತ್ತೇಜಿಸಿದ ಶ್ರೀನಿವಾಸರಾಯರ ವಿಶಾಲ ಹೃದಯವನ್ನು ಕೊಂಡಾಡಿದ್ದರೆ. 'ಸಂಪ್ರದಾಯ ವಿರೋಧಿಯಾದ ನನ್ನನ್ನು ಮತ್ತು ಸಂಪ್ರದಾಯ ನಿಷ್ಠರಾದ ಅವರನ್ನು ಕ್ರಮೇಣ ಸ್ನೇಹದಲ್ಲಿ ಬಂಧಿಸಿದ್ದು ರಂಗ ಭೂಮಿ' ಎಂದು ತಮ್ಮ 'ನಾ ತಿಳಿದುಕೊಂಡ ಶ್ರೀನಿವಾಸರಾಯರು' ಎಂಬ ಲೇಖನದಲ್ಲಿ ಅರುಹಿದ್ದಾರೆ.

ಬ್ರಾಹ್ಮಣ – ವೀರಶೈವ ಎಂಬ ಭೇದವು ತಲೆಯೆತ್ತುತ್ತಿದ್ದ ಅಂದಿನ ದಿನಗಳಲ್ಲಿ ಇವೆರಡೂ ವರ್ಗಗಳ ಇಬ್ಬರು (ಶ್ರೀನಿವಾಸರಾಯರು ಮತ್ತು ಜಂಗಿನ

ಮುರಗಯ್ಯ) ಒಂದು ಉದ್ದೇಶಕ್ಕಾಗಿ ಒಟ್ಟಾಗಿ ದುಡಿದು ಭವಿಷ್ಯದ ಕರ್ನಾಟಕ ಎಲ್ಲ ಕನ್ನಡಿಗರ ಹಿತಕ್ಕಾಗಿ – ಬ್ರಾಹ್ಮಣ, ವೀರಶೈವ, ಜೈನ, ಮುಸಲ್ಮಾನ, ಕಾಂಗ್ರೆಸ್ಸಿಗ, ಕಾಂಗ್ರೆಸ್ಸೇತರ ಎಲ್ಲಾ ಕನ್ನಡ ಭಕ್ತರನ್ನು ಒಂದು ಗೂಡಿಸುವಲ್ಲಿ ಶ್ರೀನಿವಾಸರಾಯರು ಹಾಕಿಕೊಟ್ಟ ಯೋಜನೆ ಮತ್ತು ಪ್ರೇರಣೆ ಸಹಕಾರಿಯಾಗಿ ಪರಿಣಾಮ ಬೀರಿತ್ತು ಎಂಬುದಾಗಿ ಸಹ ಶ್ರೀರಂಗರು ಹೇಳಿದ್ದಾರೆ.

## 'ಕರ್ನಾಟಕ ಏಕೀಕರಣ' ಪುಸ್ತಕ

ಶ್ರೀನಾರಾಯಣ ಸಂಗಮರೊಂದಿಗೆ 'ಕರ್ನಾಟಕ ಏಕೀಕರಣ' ಪುಸ್ತಕವನ್ನು ಶ್ರೀನಿವಾಸರಾಯರು ಬರೆಯ ತೊಡಗಿದರು. 'ಕಾಂಗ್ರೆಸ್ ಸ್ವರೂಪ ದರ್ಶನ ಮಾಲಿಕೆ' ಯಲ್ಲಿ ರಾಷ್ಟ್ರೀಯ ವಾಙ್ಮಯ ಪ್ರಕಾಶನ ಟ್ರಸ್ಟಿನಿಂದ ಕ್ರಿ.ಶ. 1946 ರಲ್ಲಿ ಈ ಪುಸ್ತಕ ಪ್ರಕಟವಾಯಿತು.

ಅಸಂಖ್ಯಾತ ಗಾಂಧಿವಾದಿಗಳ ಅಹಿಂಸಾ ಹೋರಾಟ, ದೇಶ ಭಕ್ತರ ನಿಸ್ವಾರ್ಥ ಸೇವೆಯಿಂದಾಗಿ ಭಾರತವು ಕ್ರಿ.ಶ. 1947, ಆಗಸ್ಟ 14 ರ ಮಧ್ಯರಾತ್ರಿಯಂದು ಬ್ರಿಟೀಷರಿಂದ ಮುಕ್ತಗೊಂಡು ಸ್ವತಂತ್ರ ದೇಶವಾಯಿತು.

ಸ್ವಾತಂತ್ರ್ಯ ಬಂದ ಮೇಲೆ ಮಂತ್ರಿ ಪದವಿಗೆ ಅರ್ಹತೆ ಯೋಗ್ಯತೆ ಎರಡೂ ಇದ್ದರೂ ನಿರಪೇಕ್ಷಿಗಳಾದ ಶ್ರೀನಿವಾಸರಾಯರು ಕರ್ನಾಟಕ ಏಕೀಕರಣದ ಚಿಂತನೆಯಲ್ಲಿ ಆಳವಾಗಿ ತೊಡಗಿದರು. ಕರ್ನಾಟಕದ ಏಕೀಕರಣವೆಂದರೆ ಇವರ ದೃಷ್ಟಿಯಲ್ಲಿ ಕೇವಲ ರಾಜಕೀಯ ಅಥವಾ ಭೌಗೋಲಿಕ ಏಕೀಕರಣವಾಗಿರಲಿಲ್ಲ. ಕನ್ನಡನಾಡಿನ ಮತ್ತು ಜನತೆಯ ಸರ್ವಾಂಗೀಣ ಅಭಿವೃದ್ಧಿಯ ಕನಸನ್ನು ಕಂಡಿದ್ದರು. ಶ್ರೀನಿವಾಸರಾಯರು ಏಕೀಕರಣ ಮಹಾಸಮಿತಿಯ ಗೌರವ ಕಾರ್ಯದರ್ಶಿಗಳಾಗಿ ಕರ್ನಾಟಕ ಏಕೀಕರಣ ಕಾರ್ಯಾಚರಣೆ ನಿಮಿತ್ತ ಹುಬ್ಬಳ್ಳಿಯಲ್ಲಿ ನೆಲೆಸಿದ್ದರು. ಅಂದಾನಪ್ಪ ದೊಡ್ಡ ಮೇಟಿ ಇನ್ನೊಬ್ಬ ಕಾರ್ಯದರ್ಶಿಗಳು ಕ್ರಿ.ಶ. 1949ರ ಸುಮಾರಿಗೆ ಹರಿದು ಹಂಚಿಹೋಗಿರುವ ಕನ್ನಡದ ಭೂಭಾಗಗಳು ಒಂದಾದಲ್ಲಿ ಆರ್ಥಿಕ, ಸಾಮಾಜಿ, ನೈತಿಕ ಹಾಗೂ ರಾಷ್ಟ್ರೀಯ ಭಾವೈಕ್ಯಗಳು ಹೇಗೆ ಬೆಳೆಯಲು ಸಾಧ್ಯ ಎಂಬ ಬಗ್ಗೆ ವಿವರಣಾತ್ಮಕವಾಗಿ ಪ್ರಚುರ ಪಡಿಸಿದರು. ಕರ್ನಾಟಕ ಪ್ರಾಂತ ನಿರ್ಮಾಣ ಮತ್ತು ಕನ್ನಡದ ಬೆಳವಣಿಗೆ ಇವೆರಡರ ಹೊರತು ಅವರಿಗೆ ಬೇರೆ ವಿಷಯಗಳೇ ಇರಲಿಲ್ಲ. ಅಂದಿನ ಕಾಲದಲ್ಲಿ ಇವೆರಡೂ ಶುದ್ಧ ಕನಸುಗಳೆಂದು ತಿಳಿದಿದ್ದರೂ ನಿರಾಶೆಗೊಳ್ಳದೇ ಇಂದಲ್ಲಾ ನಾಳೆ ಶಕ್ಯವಾದೀತೆಂದು ಆದರೆ ಅದಕ್ಕೆ ಕ್ರಮಬದ್ಧವಾದ ಯೋಜನೆಯಿಂದ ದುಡಿಯಬೇಕೆಂದು ನಿರ್ಧರಿಸಿ ಕರ್ನಾಟಕದ ರೈಲ್ವೆ, ಕರ್ನಾಟಕ ನೈಸರ್ಗಿಕ ಸಂಪತ್ತು, ಕರ್ನಾಟಕದ ಕರಾವಳಿ, ಕರ್ನಾಟಕದ ಪ್ರಾಚೀನ ವೈಭವ ಇವುಗಳ ಬಗ್ಗೆ ಚಿಂತಿಸಿ ಆಯಾ ವಿಷಯಗಳನ್ನು

ಬಲ್ಲವರಿಂದ ಅಭ್ಯಾಸಯುಕ್ತವಾದ ಲೇಖನಗಳನ್ನು ಬರೆಯಿಸುತ್ತಿದ್ದರು. ದೀರ್ಘಕಾಲ ಬಾಗಲಕೋಟೆಯ ಮನೆಬಿಟ್ಟು ಹುಬ್ಬಳ್ಳಿಯಲ್ಲೇ ನೆಲೆಸಿದ್ದರು. ತಮ್ಮ ಸ್ವಂತ ಖರ್ಚಿನಿಂದ ಪ್ರವಾಸ ಮಾಡಿ ಸಾಹಿತಿಗಳನ್ನು, ಇತಿಹಾಸ ಸಂಶೋಧಕರನ್ನು, ಅರ್ಥ ಶಾಸ್ತ್ರಜ್ಞರನ್ನು ಭೇಟಿಯಾಗಿ ತಮ್ಮ ಉತ್ಸಾಹದಿಂದ ಅವರ ಮನ ಒಲಿಸುತ್ತಿದ್ದರು. ಎಂಥವರಿಗೂ ಕರ್ನಾಟಕತ್ವದ ಪ್ರಭಾವ ಬೀರಬಲ್ಲ ಪ್ರಭಾವಶಾಲೀ ವ್ಯಕ್ತಿತ್ವ ಇವರದಾಗಿತ್ತು.

ಕ್ರಿ.ಶ. 1956 ರ ಏಕೀಕರಣದ ನಂತರ ವಿಶಾಲ ಮೈಸೂರು ರಾಜ್ಯವಾದರೂ ಕರ್ನಾಟಕವೆಂಬ ಸರಿಯಾದ ನಾಮಕರಣವಾಗುವವರೆಗೂ ಶ್ರೀನಿವಾಸರಾಯರು ಎಡಬಿಡದೆ ದುಡಿದರು. ಕ್ರಿ.ಶ. 1960 ರಿಂದ ಇವರು ಬೆಂಗಳೂರಿಗೆ ತಮ್ಮ ಪುತ್ರರ ಜೊತೆ ಬಂದು ನೆಲೆಸಿ ತಮ್ಮ ಬಾಗಲಕೋಟೆಯ ವಾಸ್ತವ್ಯವನ್ನು ಸಂಪೂರ್ಣವಾಗಿ ವರ್ಗಾಯಿಸಿದರು. ಕನ್ನಡಕ್ಕಾಗಿ ಕಂಕಣ ಕಟ್ಟಿ ನಿಂತ ಶ್ರೀನಿವಾಸರಾಯರು ಬೆಂಗಳೂರಿನಲ್ಲಿ ತಮ್ಮ ಕನ್ನಡ ಸೇವೆಯನ್ನು ಮುಂದುವರೆಸಿದರು. 'ವಿಶಾಲ ಮೈಸೂರು ರಾಜ್ಯ' ಎಂಬ ಹೆಸರಿನ ಬದಲಾಗಿ 'ಕರ್ನಾಟಕ ರಾಜ್ಯ' ಎಂಬ ಹೆಸರಿನಿಂದ ಕರೆಯಬೇಕು, ಕೈ ಬಿಟ್ಟು ಹೋಗಿರುವ ಆಲೂರು, ಆದವಾನಿ, ಮಡಕ್‌ಶಿರಾ, ತಾಳವಾಡಿ, ಕಾಸರಗೋಡು, ಜತ್,ಸೊಲ್ಲಾಪುರ ಮೊದಲಾದ ಕನ್ನಡದ ಭಾಗಗಳು ಪುನಃ ನಮ್ಮ ರಾಜ್ಯಕ್ಕೆ ಸೇರುವಂತಾಗಬೇಕು ಎಂಬ ಹೋರಾಟವನ್ನಾರಂಭಿಸಿದರು. ಶ್ರೀನಿವಾಸರಾಯರು 'ಕರ್ನಾಟಕ ರಾಜ್ಯ' ಎಂಬ ವಿಶೇಷ ಸಂಚಿಕೆಯನ್ನು ಪ್ರಾರಂಭಿಸಿ ರಾಜಧಾನಿಯಲ್ಲಿದ್ದ ಅನೇಕ ತರುಣ ಪೀಳಿಗೆಯವರನ್ನು ಪ್ರೋತ್ಸಾಹಿಸಿದರು. ತಾವೂ ಸಹ ಅಮೂಲ್ಯವಾದ ಲೇಖನವನ್ನು ಬರೆದುಕೊಟ್ಟು ಹೆಚ್ಚಿನ ಉತ್ಸಾಹದಿಂದ ತರುಣ ಪೀಳಿಗೆಯನ್ನು ಕಾರ್ಯಪ್ರವೃತ್ತರಾಗುವಂತೆ ಹುರಿದುಂಬಿಸಿದರು. ಪತ್ರಿಕೆಗಳಿಗೆ ಪತ್ರ ಲೇಖನಗಳನ್ನು ಬರೆಯುತ್ತಿದ್ದರು. ಕ್ರಿ.ಶ. 1962 ರಲ್ಲಿ ಶ್ರೀನಿವಾಸರಾಯರು 'ಕರ್ನಾಟಕ ರಾಜ್ಯ' ಎಂಬ ದೀರ್ಘ ಲೇಖನ ಬರೆದ 'ನಮ್ಮ ರಾಜಧಾನಿಯೂ ಕನ್ನಡಿಗರೂ' ಎಂಬ ಬೆಂಗಳೂರಿನ ಕನ್ನಡಿಗರ, ಕನ್ನಡ ಭಾಷೆಯ ದುಃಸ್ಥಿತಿಯ ಬಗ್ಗೆ ತಮ್ಮ ವ್ಯಥೆಯನ್ನು ವ್ಯಕ್ತ ಪಡಿಸಿದ್ದಾರೆ.

ಅವರಿತ್ತ ಸಲಹೆ ಸೂಚನೆಗಳಿಂದ ಕೂಡಿದ ಈ ಲೇಖನದ ಸಾರಾಂಶ ಹೀಗಿದೆ. ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ 'ಕನ್ನಡಿಗರೇ ಕನ್ನಡತನದ ಕಹಳೆಯನ್ನು ಗಟ್ಟಿಯಾಗಿ ದಿಟ್ಟತನದಿಂದ ತಹತಹಿಸದಿದ್ದರೆ ಅನ್ಯ ಭಾಷಿಕರನ್ನು ನಮ್ಮ ಕರ್ತೃತ್ವ ಶಕ್ತಿಯಿಲ್ಲದೇ ಟೀಕಿಸಿದರೆ ಫಲವೇನು?' ಎಂದು ಗರ್ಜಿಸಿದ್ದಾರೆ. ನಮ್ಮ ಕನ್ನಡಿಗರು ನೆರೆ ಭಾಷಾಬಂಧುಗಳನ್ನು ವಿಶಾಲ ಹೃದಯದಿಂದ ಸಹಾನುಭೂತಿ ತೋರುವುದು ಇವರ ಸುಸ್ವಭಾವ. ಶತಮಾನಗಳಿಂದಲೂ ಈ ಗುಣವು ವೃದ್ಧಿಯಾಗುತ್ತಾ ಬಂದಿದೆ. ತಮಿಳು ಬಂಧುಗಳು ಬೆಂಗಳೂರಿಗೆ ಆಗಮಿಸಿ ನೆಲೆಯೂರಲು ಕನ್ನಡಿಗರು ತಮಿಳು

ಕಲಿತು ಆದರಿಸಿದುದು ಹೆಮ್ಮೆಯ ವಿಷಯ. ಬಳ್ಳಾರಿ ತುಮಕೂರುಗಳಿಗೆ ತೆಲುಗು ಬಂಧುಗಳು ಆಗಮಿಸಲು ಪೂರ್ವದಲ್ಲಿರುವ ಕನ್ನಡಿಗರು ತೆಲುಗು ಕಲಿತು ಬಾಂಧವ್ಯ ಬೆಳಿಸಿದ್ದೂ ಹೆಮ್ಮೆಯ ವಿಷಯ. ಬೆಳಗಾವಿ ಸೊಲ್ಲಾಪುರ ಜಿಲ್ಲೆಗಳ ಕನ್ನಡಿಗರು ಮರಾಠೀ ಕಲಿತದ್ದು ಒಳ್ಳೆಯದೇ. ಕನ್ನಡಿಗರು ಈ ರೀತಿ ತಮ್ಮ ಸ್ವಭಾವಕ್ಕನುಗುಣವಾಗಿ ಎಲ್ಲಾ ಭಾಷೆಗಳನ್ನು ಅಳವಡಿಸಿಕೊಳ್ಳುವ ವಿಷಯ ಹೆಮ್ಮೆಯದ್ದಾದರೂ ನೆರೆ ಭಾಷೆಯವರಿಗೆ ಇದು ಮೇಲ್ಪಂಕ್ತಿಯಾದ ವಿಷಯವೆಂಬುದನ್ನು ಕನ್ನಡಿಗರು ಅರಿಯ ಬೇಕು. ಭ್ರಾತೃಪ್ರೇಮದಿಂದ ಪ್ರೇರಿತರಾಗಿ ನಾಲ್ಕೂ ದಿಕ್ಕಿನ ಗಡಿಗಳಲ್ಲಿ ನೆರೆಯರನ್ನೂ , ನೆರೆನುಡಿಗಳನ್ನೂ ಆದರಿಸಿ ಆರ್ಥಿಕ, ಸಾಮಾಜಿ, ಸಾಂಸ್ಕೃತಿಕ ಸಂಘಟನೆಗಳಲ್ಲಿ ಸಾಮಿಪ್ಯ ತೋರಿರುವುದು ಕನ್ನಡಿಗರ ಹಿರಿತನವನ್ನು ಎತ್ತಿ ಹಿಡಿಯುತ್ತದೆ.

ಇದೇ ರೀತಿಯಾಗಿ ಕನ್ನಡಿಗರು ನೆರೆ ರಾಜ್ಯಗಳಲ್ಲಿ ನೆಲೆಸಿ, ಆ ರಾಜ್ಯಗಳ ಜನತೆಯಲ್ಲಿ ಆತ್ಮೀಯರಾಗಿ ಬೆರೆತು ಆಯಾ ಪ್ರಾಂತದ ಭಾಷೆಗಳಲ್ಲಿ ಪರಿಣಿತರಾಗಿ ಖ್ಯಾತ ನಟ-ನಟಿಯರಾಗಿರುವುದು, ಕನ್ನಡೇತರ ಸಂಸ್ಥೆಗಳ ಸದಸ್ಯರೂ, ಸೂತ್ರಧಾರರೂ ಆಗಿರುವುದು, ಉತಮ ಲೇಖಕರೂ, ವಾಗ್ಮಿಗಳೂ ಆಗಿರುವುದು ಕನ್ನಡ ನಾಡಿಗೆ [illegible] ಕನ್ನಡಿಗರ ಈ ಆದರ್ಶ ಕನ್ನಡಕ್ಕಿದ್ದ ಸುಭದ್ರ ಸ್ಥಾನವನ್ನು ಇಳಿಸ ತೊಡಗಿದೆ. ಕನ್ನಡಿಗರು ನೆರೆ ಭಾಷೆಯವರಿಗೆ ಕನ್ನಡ ಕಲಿಯಲು ಆಸ್ಪದ ನೀಡದೆ ತಾವೇ ಅವರಲ್ಲಿ ಬೆರೆಯುತ್ತಾ ಹೋದರೆ ತಮ್ಮ ಕಾಲ ಮೇಲೆ ತಾವೇ ಕಲ್ಲು ಹಾಕಿಕೊಂಡಂತಾಗುವುದು. ಆದ್ದರಿಂದ ಕೋರ್ಟು, ಕಚೇರಿ, ವ್ಯಾಪಾರ, ಪರಸ್ಪರ ಭೇಟಿ, ಸಭೆ ಸಮಾರಂಭ, ದಿನ ನಿತ್ಯದ ವ್ಯವಹಾರಗಳು ಮುಂತಾದ ಪ್ರಸಂಗಗಳಲ್ಲಿ ಕನ್ನಡಿಗರು ಕಡ್ಡಾಯವಾಗಿ ಕನ್ನಡದಲ್ಲೇ ವ್ಯವಹರಿಸುತ್ತಾ ಕನ್ನಡೇತರರಿಗೆ ಕನ್ನಡ ಕಲಿಯುವ ಅವಕಾಶವನ್ನೊದಗಿಸಿ ಕೊಡುವಂತಾದರೆ ಮಾತ್ರ ಕನ್ನಡಪರ ನಮ್ಮ ಕರ್ತವ್ಯ ನಿಭಾಯಿಸಿದಂತಾಗುವುದು. ನೆರೆ ಭಾಷೆಯವರೊಡನೆ ಅವರ ಭಾಷೆಯಲ್ಲಿ ಮಾತನಾಡುವಾಗ ನಾವು ಕಲಿತಂತೆ ತಾವೂ ಕನ್ನಡವನ್ನು ಕಲಿಯುವಂತೆ ತಿಳಿಸಿ ಹೇಳಿ ತಪ್ಪು ಕಲ್ಪನೆಗೆ ಅವಕಾಶ ಉಂಟಾಗದಂತೆ ಹೊಸ ಪರಂಪರೆ ಸೃಷ್ಟಿಯಾಗಬೇಕು. ಬೆಂಗಳೂರನ್ನು ತಮಿಳು ಪ್ರಭಾವಕ್ಕೆ ಅಣಿಮಾಡುವ ಧೋರಣೆ ಇಟ್ಟುಕೊಂಡವರು ತಮ್ಮ ತಮ್ಮ ಮನದಲ್ಲಿಯೇ ಶಾಂತವಾಗಿ ಆತ್ಮನಿರೀಕ್ಷಣೆ ಮಾಡಿಕೊಂಡರೆ ಪ್ರಾಂತಿಕ ಏಳಿಗೆಯಾಗುವುದಲ್ಲದೇ ಗಾಂಧೀಜಿಯವರು ಹಾಕಿಕೊಟ್ಟ ನೆರೆ ಭಾಷೆಯನ್ನು ಕಲಿಯ ಬೇಕೆಂಬ ಭಾರತ ರಾಷ್ಟ್ರದ ಕರೆಗೆ ಓಗೊಟ್ಟು ರಾಷ್ಟ್ರದ ಕಲ್ಯಾಣದ ದೃಷ್ಟಿಕೋನದಲ್ಲಿ ಮುಂದುವರಿದರೆ ಮನುಷ್ಯನ ಪ್ರಗತಿಗೂ ಸಾತ್ವಿಕ ಭಾವನೆಯ ಹೆಚ್ಚಳಕ್ಕೂ ಈ ಮಾರ್ಗವು ಗೌರವಯುಕ್ತವಾಗಿದೆ ಎಂದು ಶ್ರೀನಿವಾಸರಾಯರು ಕನ್ನಡದ ಗೌರವನ್ನುಳಿಸುವ ಸಲಹೆ ನೀಡಿದ್ದಾರೆ.

## ರಾಜಧಾನಿಯಲ್ಲಿ ಕನ್ನಡದ ದುಸ್ಥಿತಿ

ಸಮಾಜದ ಉಚ್ಚದರ್ಜೆಯಲ್ಲಿರುವ ಕೆಲ ತಮಿಳರಿಗಂತೂ ಬೆಂಗಳೂರಿನಿಂದ ಕನ್ನಡ ರಾಜಧಾನಿಯನ್ನು ಓಡಿಸುವ ಕನಸು ಸಹ ಬಿದ್ದಿದೆ!! ಭಾರತದ ರಾಜಧಾನಿಯಾದ ಡಿಲ್ಲಿಯು ಉತ್ತರದಲ್ಲಿ ಇರುವುದರಿಂದ್ ಈ ತಕ್ಕಡಿಯನ್ನು ಸರಿಪಡಿಸಲು ಭಾರತದ ದಕ್ಷಿಣ ತುದಿಯಲ್ಲಿರುವ ಬೆಂಗಳೂರನ್ನು ನಮ್ಮ ರಾಷ್ಟ್ರದ ದ್ವಿತೀಯ ರಾಜಧಾನಿಯೆಂದು ತೀರ್ಮಾನಿಸಿದರೆ ರಾಷ್ಟ್ರಕ್ಕೆ ಹಿತವಾಗಬಹುದೆಂದು ಚಳುವಳಿ ಹೂಡಲಾಗಿದೆ. ಇದರಲ್ಲಿ ತಮಿಳರು ಮುಂಚೂಣಿಯಲ್ಲಿರುವರು. ಆಂಧ್ರರೂ ಬೆಂಬಲಿಸಿರುವರು. ಕೇರಳರೂ ಈ ವಿಚಾರಕ್ಕೆ ಸ್ವಾಗತಿಸಿರುವರು. ದಕ್ಷಿಣ ಭಾರತದ ಇನ್ನುಳಿದ ಕನ್ನಡಿಗರ ಧೋರಣೆ ಏನಿದೆಯೆಂದು ಕೇಳಲ್ಪಟ್ಟಾಗ ಪೂರ್ವಾಪರ ವಿಚಾರ ಮಾಡದೆ ಕೆಲ ಕನ್ನಡಿಗರು ಸಮ್ಮತಿ ಇತ್ತುದು ಪ್ರಜಾಪ್ರಭುತ್ವದ ಪರಂಪರೆಗೆ ಅಪಾಯಕಾರಿ ಎಂಬುದನ್ನು ಗಮನಿಸಿ ಶ್ರೀನಿವಾಸರಾಯರು ಕನ್ನಡ ಜನತೆಯನ್ನು ಎಚ್ಚರಿಸಿದ್ದಾರೆ. ಬೆಂಗಳೂರಿನಲ್ಲಿ ಕನ್ನಡಿಗರ ರಾಜಧಾನಿ ಇರುವವರೆಗೆ ರಾಜಕೀಯ ಮೇಲುಗೈ ಹಾಗೂ ಹಿಡಿತ ಕನ್ನಡಿಗರಿಂದ ದಾಟಿ ತಮಿಳರಿಗೆ ದೊರೆಯದ ಕಾರಣ ಬೇರೊಂದು ಉಪಾಯದಿಂದ ರಾಷ್ಟ್ರ ಕಲ್ಯಾಣದ ಹೆಸರಿನಿಂದ ತಮ್ಮ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನ ಮುಂದುವರಿಯಗೊಡಬಾರದು. ಕನ್ನಡ ನಾಡಿನ ರಾಜಧಾನಿಯಾಗಿರುವಾಗಲೇ ಕನ್ನಡ ನುಡಿಯನ್ನು ಬೆಂಗಳೂರಿನಲ್ಲಿ ಹಿಮ್ಮೆಟ್ಟಿಸುವ ಸ್ಥಿತಿ ಬಂದಿರುವಾಗ ರಾಜಧಾನಿಯನ್ನು ಬೇರೆಡೆ ಸ್ಥಳಾಂತರಗೊಳಿಸಿದರೆ ಕನ್ನಡವು ಸಂಪೂರ್ಣವಾಗಿ ಬೆಂಗಳೂರಿನಿಂದ ಉಚ್ಚಾಟನೆಗೊಳಿಸಿದಂತೆಯೇ!! ಆದ್ದರಿಂದ ಮುಂದಾಳು ಕನ್ನಡಿಗರು ಎಚ್ಚೆತ್ತು ಸಾಧಕ ಬಾಧಕ ವಿಚಾರ ವಿಚಾರಗೈದು ನಂತರವೇ ತಮ್ಮ ಅಭಿಪ್ರಾಯವನ್ನು ಪ್ರಕಟಿಸುವುದು ಉಚಿತಯೆಂದು ಎಚ್ಚರಿಕೆ ನೀಡಿದ್ದಾರೆ. ಇದು ಆಕಾಲದಲ್ಲಿ ಬೆಂಗಳೂರಿನಲ್ಲಿ ಬೆಳೆದ ವಾತಾವರಣಕ್ಕೆ ಅವರ ತೀವ್ರ ಪ್ರತಿಕ್ರಿಯೆ.

ಮದ್ರಾಸ್ ರಾಜ್ಯದಿಂದ ಒಂದು ನೂರು ವರ್ಷಗಳಿಂದಲೂ ತಮಿಳು ಬಂಧುಗಳು ಬಂದು ಬೆಂಗಳೂರು ನಗರಕ್ಕೂ ಆಗಿನ ಸಂಸ್ಥಾನದ ಆಡಳಿತಕ್ಕೂ ಕನ್ನಡನಾಡಿಗೂ ಕರ್ನಾಟಕ ಸಂಸ್ಥೆಗಳಿಗೂ ಸಲ್ಲಿಸಿದ ಮಹತ್ತರ ಧೋರಣೆಗೆ ಅದೇ ಪರಂಪರೆಯನ್ನು ಅನುಸರಿಸುತ್ತಿರುವ ಮಹನೀಯರಿಗೆ ಕನ್ನಡ ನಾಡು ಉಪಕೃತವಾಗಿದೆ. ಹೀಗಿದ್ದಾಗ್ಯೂ ಇಂದಿನ ಕಿಂಚಿತ್ ಸಂಕುಚಿತ ದೃಷ್ಟಿಯ ಕೆಲ ತಮಿಳು ಮುಂದಾಳುಗಳ ಧೋರಣೆಯಿಂದಾಗಿ ಯಾವುದೇ ಕಾರ್ಯ ಕೈ ಮೀರಿತೆಂದರೆ ಕಠಿಣ ಸಮಸ್ಯೆಯಾಗಿ ಪರಿಣಮಿಸಬಹುದಾದ್ದರಿಂದ ಕನ್ನಡದ ಬಗ್ಗೆ ತಮ್ಮ ಧೋರಣೆಯನ್ನು ಬದಲಿಸಿ ಈಗಿನ ತಮ್ಮ ಆಕ್ರಮಣದ ಧೋರಣೆಯನ್ನೂ ಬದಲಿಸಿ ತಾವು ಕನ್ನಡವನ್ನು ಕಲಿತು ತಮ್ಮ ಅನುಯಾಯಿಗಳಿಗೂ ಕನ್ನಡ

ನಾಡಿನವರ ಆಕಾಂಕ್ಷೆಗಳ ಬಗ್ಗೆ ಆತ್ಮೀಯ ವೃತ್ತಿಯಿಂದ ವರ್ತಿಸುವಂತೆ ಪ್ರೇರೇಪಿಸಿ ಬೆಂಗಳೂರು ರಾಜಧಾನಿಯಲ್ಲಿ ಕನ್ನಡದ ಮುನ್ನಡೆಗೆ 'ಅಣ್ಣಾ ತಮ್ಮಂದಿರಂತೆ' ಸಹಕರಿಸಬೇಕಾಗಿ ಕನ್ನಡಿಗರೆಲ್ಲರ ವಿನಂತಿ ಇದೆ ಎಂಬುದಾಗಿ ನೆರೆಬಂಧುಗಳಲ್ಲಿ ಕನ್ನಡಿಗರ ಪರ ರಾಜಧಾನಿಯಾದ ಬೆಂಗಳೂರಿನಲ್ಲಿ ಶ್ರೀನಿವಾಸರಾಯರು ವಿನಂತಿಸಿದ್ದಾರೆ.

ನಮ್ಮ ರಾಜಧಾನಿಯಲ್ಲಿ ಕನ್ನಡದ ಸ್ಥಿತಿಯನ್ನು ಚೇತರಿಸಲು ಕನ್ನಡ ರಾಜ್ಯದ ಮಂತ್ರಿಗಳು ಸರ್ಕಾರಿ ಮಟ್ಟದಲ್ಲಿ ಪ್ರಭಾವಶಾಲಿಯಾಗಿ ಪ್ರಯತ್ನಿಸುವುದಲ್ಲದೆ ವ್ಯಕ್ತಿಗತ ವರ್ಚಸನ್ನು ಮಂತ್ರಿಮಟ್ಟದ ಅಧಿಕಾರವನ್ನು ವಿನಿಯೋಗಿಸುವ ನಿರ್ಧಾರ ಕೈಗೊಳ್ಳ ಬೇಕು. ಕೇಂದ್ರ ಸರ್ಕಾರದ ಕಾರ್ಖಾನೆಗಳು ಬೆಂಗಳೂರಿನಲ್ಲಿರುವುದರಿಂದ ಅಧಿಕಾರಿಗಳು, ನೌಕರರು, ಕೂಲಿಕಾರರು ಯಾರೇ ಇರಲಿ ಎಲ್ಲರೂ ವ್ಯಾವಹಾರಿಕವಾದ ಕನ್ನಡ ಜ್ಞಾನವನ್ನು ಆರು ತಿಂಗಳ ಅವಧಿಯಲ್ಲಿ ಪಡೆಯಬೇಕೆಂಬ ಕಾಯಿದೆ ಬದ್ಧವಾದ ಶರತ್ತನ್ನು ಕೇಂದ್ರ ಸರ್ಕಾರವು ಹೊರಡಿಸುವಂತೆ ಕರ್ನಾಟಕ ಸರ್ಕಾರ, ಕನ್ನಡದ ಸಾರ್ವಜನಿಕ ಸಂಸ್ಥೆಗಳು, ಕನ್ನಡನಾಡಿನ ಮುಂದಾಳುಗಳು, ಲೋಕ ಸಭೆಯಲ್ಲಿದ್ದ ಕರ್ನಾಟಕದ ಪ್ರತಿನಿಧಿಗಳು ಶ್ರದ್ಧೆವಹಿಸಿ ನೋಡಿಕೊಳ್ಳ ಬೇಕು. ಕನ್ನಡ ಜನತೆಯಂತೂ ಈ ಬಗ್ಗೆ ಚಳುವಳಿ ಹೂಡಿ ಮೇಲೆ ನಮೂದಿಸಿದ ಪ್ರಾತಿನಿಧಿಕರು ತಮ್ಮ ತಮ್ಮ ಕರ್ತವ್ಯ ನಡೆಸುವಂತೆ ಆಗ್ರಹ ಪಡಿಸುವ ದಕ್ಷತೆ ವಹಿಸಬೇಕು.

ಬೆಂಗಳೂರಿನ ಕಾರ್ಖಾನೆಗಳಿಗೆ ಕೇಂದ್ರ ಸರ್ಕಾರದಿಂದ ಹೊಸ ನೇಮಕಾತಿ ತೆಗೆದುಕೊಳ್ಳುವ ನೌಕರರಲ್ಲಿ ಅಧಿಕಾರಿಗಳಾಗಿರಲೀ, ಕೂಲೀಕಾರರಾಗಿರಲಿ ಕನ್ನಡದ ಜ್ಞಾನವಿದ್ದರಷ್ಟೇ ನೇಮಕಾತಿ ಮಾಡಲಾಗುವದೆಂಬ ನಿಯಮ ಬದ್ಧವಾದ ನಿಲುವನ್ನು ತೆಗೆದುಕೊಳ್ಳಲು ಕೇಂದ್ರ ಸರಕಾರವನ್ನು ಆಗ್ರಹ ಪಡಿಸಬೇಕು. ಕನ್ನಡಬಾರದ ನೌಕರರ ನೇಮಕಾತಿ ಮಾಡಬೇಕಾದ ಪ್ರಸಂಗವೊದಗಿದ್ದರೆ ಆರು ತಿಂಗಳ ಅವಧಿಯಲ್ಲಿ ಕನ್ನಡ ಕಲಿಸಿ ಪ್ರಶಸ್ತಿ ಪತ್ರವನ್ನು ಸರ್ಕಾರ ನಿರ್ಧರಿಸಿದ ತಜ್ಞರಿಂದ ಹಾಜರ ಪಡಿಸಬೇಕೆಂಬ ಕಡ್ಡಾಯವಾದ ನಿಯಮವನ್ನು ಮಾಡಲು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಅಸ್ಸಾಮ್‌ನಲ್ಲಾದ ಬಂಗಾಲಿಯರ ಪ್ರಸಂಗ ಒದಗದಂತೆ ಭಾವಾತ್ಮಕ ಐಕ್ಯತೆ ಮೂಡುವಂತೆ ಪ್ರಭಾವಶಾಲಿ ಆಂದೋಲನ ಜರುಗಬೇಕು. ನೆರೆ ರಾಜ್ಯಗಳಲ್ಲಿ ಭಾಷಾ ವಿಷಯದಲ್ಲಿ ಆರು ತಿಂಗಳುಗಳ ಕಾನೂನು ಆಜ್ಞೆ ಜಾರಿಯಲ್ಲಿರುವುದನ್ನು ಕನ್ನಡಿಗರು ಗಮನಿಸಬೇಕು. ಬೆಂಗಳೂರಿನ ಖಾಸಗಿ ಕಾರ್ಖಾನೆದಾರರು ಅಥವಾ ಸಾರ್ವಜನಿಕ ಸಂಘ ಸಂಸ್ಥೆಗಳು ಕನ್ನಡ ಸರ್ಕಾರದಿಂದ ಯಾವುದೇ ಬಗೆಯ ನೆರವನ್ನು ಅಪೇಕ್ಷಿಸಿದಲ್ಲಿ ಕನ್ನಡೇತರರಿಗೆ ನಿತ್ಯೋಪಯೋಗಿ ಕನ್ನಡದ ವ್ಯಾವಹಾರಿಕ ಜ್ಞಾನ ಒದಗಿಸಲು ಯೋಗ್ಯ ಏರ್ಪಾಟಾಗಬೇಕೆಂದು ನಿರಕ್ಷರಿಗಳಾದ ಕೂಲೀಕಾರರನ್ನು

ಅಕ್ಷರಸ್ತರನ್ನಾಗಿ ಮಾಡಲು ರಾತ್ರಿಯ ಶಿಕ್ಷಣ ವರ್ಗಗಳನ್ನು ಏರ್ಪಡಿಸಲು ಸರ್ಕಾರ ಮುತವರ್ಜಿವಹಿಸಬೇಕೆಂದು ಶ್ರೀನಿವಾಸರಾಯರು ಸೂಚಿಸಿದ್ದಾರೆ.

ಹೈದರಾಬಾದಿನಲ್ಲಿರುವ ಸುಪ್ರಸಿದ್ಧ ಸಂಸ್ಥೆಯಾದ ಕರ್ನಾಟಕದ ಸಾಹಿತ್ಯ ಮಂದಿರವು ಸ್ಥಾನಿಕ ಆಂಧ್ರರ ಸಂಗಡ ಸಹಕರಿಸುತ್ತಾ ಸಾರ್ವಜನಿಕವಾಗಿ ಸಮಾಧಾನಕರ ಸಂಪರ್ಕವನ್ನು ಸವಿರೀತಿಯಲ್ಲಿ ಕಾಯ್ದಿಟ್ಟುಕೊಂಡು ಬಂದಿರುವುದೆಂದು ಶ್ರೀನಿವಾಸರಾಯರು ಕ್ರಿ.ಶ. 1962 ರಲ್ಲಿ ಹೈದರಾಬಾದಿನ ಈ ಕನ್ನಡ ಸಂಸ್ಥೆಯನ್ನು ಪ್ರಶಂಶಿಸಿದ್ದಾರೆ. ಹೊರನಾಡ ಕನ್ನಡಿಗರ ಸಮ್ಮೇಳನ ನಡೆದ ಪ್ರಸಂಗದಲ್ಲಿ ಕರ್ನಾಟಕ ಸಾಹಿತ್ಯ ಮಂದಿರದ ಸಂಚಾಲಕರು ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳೆಡೆಗೆ ಹೋದಾಗ ಸ್ಥಾನಿಕ ಆಂಧ್ರರಿಗೆ ಕನ್ನಡಿಗರು ಸಹಕಾರ ಒದಗಿಸುತ್ತಿರಬೇಕೆಂದು ಒತ್ತಿಹೇಳಿದರು. ಈ ಪ್ರಸಂಗದಿಂದ ನೆರೆನುಡಿಯ ಮಂತ್ರಿಗಳ ದಕ್ಷತೆ ಅವರ ಸ್ವಾಭಿಮಾನದ ಸೂಚನೆಯಾಗಿದ್ದು ನಮ್ಮ ರಾಜ್ಯದ ಮಂತ್ರಿಗಳ ಉದಾಸೀನತೆ ವ್ಯಸನಕರ ಸಂಗತಿಯಾಗಿದೆಯೆಂದು ಕನ್ನಡ ರಾಜ್ಯದ ಮಂತ್ರಿಗಳಲ್ಲಿ ಕನ್ನಡ ಜನತೆಯ ಬಗ್ಗೆ ಸ್ವಾಭಿಮಾನ ಹೆಚ್ಚುವಂತಾಗಬೇಕೆಂಬ ಸೂಚನೆ ಇತ್ತಿದ್ದಾರೆ.

ಆಗಿನ ಮೈಸೂರು ಮಂತ್ರಿಮಂಡಲವು ದೇಶದ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕೆಂಬ ಅಪ್ಪಣೆ ಹೊರಡಿಸಿದ್ದು ರಾಷ್ಟ್ರದ ಹಿತದ ದೃಷ್ಟಿಯಿಂದ ಅಭಿನಂದನೀಯ. ಇದು ಸಕಾಲಿಕ ಹಾಗೂ ಹಿಡಿತವುಳ್ಳ ಆಜ್ಞೆಯಾಗಿದೆ ಎಂದು ಕಡ್ಡಾಯವಾದ ಕನ್ನಡ ಕಲಿಕೆ ಜಾರಿಗೆ ಬರುವಂತಾಗಲೆಂದು ಆಶಿಸಿದ್ದಾರೆ.

## “ಸರ್ವತ್ರ ಕನ್ನಡ ಬರಲಿ”

ಚಲನಚಿತ್ರ ಮಾಧ್ಯಮವು ಅತಿಯಾಗಿ ಆಕರ್ಷಿಸುತ್ತಿರುವ ಈ ಕಾಲದಲ್ಲಿ ಕನ್ನಡಕ್ಕಿಂತ ನೆರೆ ನುಡಿಯ ಚಿತ್ರಗಳೇ ಪ್ರದರ್ಶಿತವಾಗುತ್ತಿರುವುದೆಂಬ ಕಟು ಅನುಭವ ಕನ್ನಡ ಚಿತ್ರ ಉದ್ದಿಮೆದಾರರದ್ದಾಗಿದೆ. ಕನ್ನಡ ಚಿತ್ರಗಳಿಗೆ ಉಚ್ಚ ಸ್ಥಾನ ದೊರಕಿಸಲು ಮತ್ತು ಕನ್ನಡವು ಕಳೆದುಕೊಂಡಿರುವ ಸ್ಥಾನವನ್ನು ಪುನಃ ಎತ್ತರಿಸುವುದಕ್ಕಾಗಿ ಸಂಘಟನೆ ಅವಶ್ಯವಾಗಿದೆ. ಆದ್ದರಿಂದ ಬೆಂಗಳೂರು ನಗರ ಕನ್ನಡ ಭಾಷಾ ರಕ್ಷಣಾ ಸಮಿತಿಯನ್ನು ಸ್ಥಾಪಿಸುವುದು ಸಕಾಲಿಕವಾಗಿದೆ ಮತ್ತು ಈ ಹೊಸ ಚಳುವಳಿಗೆ ಚಿತ್ರ ಉದ್ದಿಮೆದಾರರು ಸಂಪೂರ್ಣ ಬೆಂಬಲ ಕೊಟ್ಟು ಧನ ಸಹಾಯವನ್ನೂ ಒದಗಿಸಿದರೆ ಚಳುವಳಿಗೆ ಮೂರ್ತಸ್ವರೂಪ ಬಂದು ಫಲಕಾರಿ ಆಗಬಹುದು. ಮುಖ್ಯವಾದ ಸಂಗತಿಯೆಂದರೆ ಈ ಚಳುವಳಿ ಸೌಹಾರ್ದ ಭಾವನೆಯಿಂದ ಸಾಗಬೇಕು. ಶಾಂತಿಯುತವಾದ ಅಹಿಂಸಾ ತತ್ವದಿಂದ ಕೂಡಿದ ಉಚ್ಚ ಭಾವದಿಂದ ಈ ಆಂದೋಲನ ನಡೆದರೆ ಬೆಂಗಳೂರಿನಲ್ಲಿದ್ದ

ನೆರೆ ಭಾಷಿಕರ ಸಹಕಾರ ಪಡೆಯಲು 'ಸಾಧ್ಯವಾದೀತು ಎಂದು ಐಕ್ಯತೆಯ ಸಂದೇಶ ನೀಡಿದ್ದಾರೆ.

ಬೆಂಗಳೂರು ಕಾರ್ಪೊರೇಷನ್‌ದವರು ತಮಿಳು ಭಾಷೆಗೆ ಉಚ್ಚಸ್ಥಾನ ಕೊಡಬೇಕೆಂದು ತಮಿಳು ಸದಸ್ಯರೋರ್ವರ ಆರ್ಭಟನೆ ಪ್ರಕಟವಾಗಿದ್ದೇ ಇದೆ. ಇದಲ್ಲದೆ ಕಾರ್ಖಾನೆಗಳು ನೌಕರರ ಅರ್ಜೀ ಕರೆಯುವಲ್ಲಿ ಸಹ 'ಕನ್ನಡ ಅಥವಾ ತಮಿಳು ಚೆನ್ನಾಗಿ ಬಲ್ಲ' ಎಂಬ ಜಾಹೀರಾತನ್ನು ಕೊಡಹತ್ತಿರುವರು. ಈ ರೂಢಿಯನ್ನು ಬದಲಿಸಿ 'ಕನ್ನಡ ಬಲ್ಲ' ಎಂದೇ ಇರುವಂತೆ ಅತೀ ಎಚ್ಚರ ವಹಿಸಬೇಕು. ಕನಿಷ್ಟ ಪಕ್ಷ 'ತಮಿಳು ಮಾತೃ ಭಾಷೆಯವರಿಗೆ ಕನ್ನಡದ ವ್ಯಾವಹಾರಿಕ ಜ್ಞಾನವಿರಬೇಕು' ಎಂಬ ನಿಯಮವಿರಬೇಕು. 'ಕನ್ನಡ ಅಥವಾ ತಮಿಳು ಬಲ್ಲ, ಎಂಬ ಜಾಹೀರಾತಿನಲ್ಲಿ ಕನ್ನಡವನ್ನು ಅಗೌರವವಾಗಿ ಗಣಿಸಲ್ಪಟ್ಟಿರುವುದು ಸ್ಪಷ್ಟವಾಗಿದ್ದು ತಮಿಳು ಅಧಿಕಾರಿಗಳು ಕನ್ನಡ ಭಾಷೆ ಮತ್ತು ಕನ್ನಡದ ನೆಲದ ಮೇಲೆ ಆಕ್ರಮಣಕಾರಿ ಸಂಚು ಹೂಡುತ್ತಿರುವುದು ಸ್ಪಷ್ಟವಾಗಿ ವ್ಯಕ್ತವಾಗಿದೆ. ಮೈಸೂರು ಸರ್ಕಾರವೂ, ಕನ್ನಡ ಜನತೆಯೂ ಈ ವೃತ್ತಿಯನ್ನು ತಡೆಯಲೇ ಬೇಕು ಎಂದು ತಮಿಳರ ಅಪಾಯಕಾರಿ ಸಂಚನ್ನು ನಿಲ್ಲಿಸಲು ಜನತೆಯನ್ನು ಶ್ರೀನಿವಾಸರಾಯರು ಎಚ್ಚರಿಸಿದ್ದಾರೆ. ಆಗ ಏಕೀಕರಣದ ನಂತರವೂ ಬೆಂಗಳೂರಲ್ಲಿ ಇಂಥ ಪ್ರಚಿತ್ರ ವಾತಾವರಣವಿತ್ತು.

ಮೂಲತಃ ಕನ್ನಡ ನಾಡಿನವರೇ ಆದ ಕಾಂಗ್ರೇಸ್ ಅಧ್ಯಕ್ಷ ಸಂಜೀವರೆಡ್ಡಿಯವರು ಕನ್ನಡವರಿತಿದ್ದರೂ ಬೆಂಗಳೂರಿನಲ್ಲಿ ನಡೆದ ನಗರ ಕಾಂಗ್ರೆಸ್ ಸಮ್ಮೇಳನದಲ್ಲಿ ತೆಲುಗು ಭಾಷೆಯಲ್ಲೇ ಭಾಷಣ ನೀಡಿ ಕನ್ನಡವನ್ನು ಅಲಕ್ಷಿಸಿದ ಸಂಗತಿ ಗಮನಾರ್ಹ (1960) ಮತ್ತೆ ಮಧುರೆಯಲ್ಲಿ ಜರುಗಿದ ಕಾಂಗ್ರೇಸ್ ಸಭೆಯಲ್ಲಿ ಅಧ್ಯಕ್ಷ ಸಂಜೀವರೆಡ್ಡಿಯವರೇ ತಮಿಳಿನಲ್ಲಿ ಭಾಷಣ ಪ್ರಾರಂಭಿಸಿ ಶಿಷ್ಟ ಸಂಪ್ರದಾಯವನ್ನು ಪ್ರಕಟಿಸಿದವರಾದರು. ಬೆಂಗಳೂರಿನಲ್ಲು ಕೂಡ ಮೊದಲು ಕನ್ನಡದಲ್ಲಿ ನಾಲ್ಕು ಮಾತುಗಳನ್ನಾಡಿ ನಂತರ ತೆಲುಗಿನಲ್ಲಿ ಭಾಷಣ ಮಾಡಿದ್ದರೆ ತಮ್ಮ ಸ್ಥಾನಕ್ಕೆ ಯೋಗ್ಯ ಮನ್ನಣೆ ನೀಡಿದವರಾಗಿ ಹಿಂದಿನ ಸುಪರಂಪರೆಯಂತೆ 'ಉಭಯ ಭಾಷಾ' ಪ್ರೋತ್ಸಾಹಕರೆಂಬ ಕೀರ್ತಿಗೆ ಅರ್ಹರಾಗುತ್ತಿದ್ದರು ಎಂದು ಕನ್ನಡವನ್ನು ಕಡೆಗಣಿಸಿದ ಅಧ್ಯಕ್ಷ ಸಂಜೀವರೆಡ್ಡಿಯವರ ಅಲಕ್ಷ್ಯದ ವ್ಯವಹಾರವನ್ನು ಶ್ರೀನಿವಾಸರಾಯರು ಟೀಕಿಸಿದ್ದಾರೆ.

ಕನ್ನಡಿಗರಿಗೆ ಇಂಗ್ಲೀಷಿನ ಹುಚ್ಚಿನಿಂದಾಗಿ ಬೇವಿನ ಮರದ ಮತ್ತು ಬಸವನಗುಡಿ ಬೀದಿಗಳು 'ಮಾರ್ಗೋಸಾ ರೋಡ್' ಮತ್ತು 'ಬುಲ್ ಟೆಂಪಲ್ ರೋಡ್' ಗಳೆಂದೇ ಬಳಕೆಯಲ್ಲಿ ಬಂದಿವೆ. ಹೊಸದಾಗಿ ಪ್ರಾರಂಭಿಸಿದ ಬೀದಿಗಳಿಗೆ ಸಹ 'ಸರ್ಪೆಂಟಾಯಿನ' 'ಡಬಲ್ ರೋಡ್' 'ಸ್ವಿಮಿಂಗ್

ಪೂಲ್'ಗಳ ಬದಲು ದೇಶೀ ಭಾಷೆಯ ಹೆಸರು ಹಾಕಲು ಬರುತ್ತಿರಲಿಲ್ಲವೇ? ಕನ್ನಡಿಗರೇ ಕನ್ನಡವನ್ನು ಈ ರೀತಿಯಾಗಿ ಬೀಸಾಡಿರುವಾಗ ನೆರೆನುಡಿಯವರು ನಮ್ಮನ್ನು ನಮ್ಮ ರಾಜಧಾನಿಯಲ್ಲಿಯೇ ಹೀಯಾಳಿಸಿ ಹಿಮ್ಮೆಟ್ಟುವ ಹಂಬಲ ತೋರ್ಪಡಿಸಿದರೆ ಆಶ್ಚರ್ಯವೇನು? ಕನ್ನಡಿಗರು ಮೊದಲು ರಾಜಧಾನಿಯಲ್ಲಿ ಕನ್ನಡಿಗರಾಗಿ ನಿಲ್ಲುವ ನಿರ್ಧಾರ ಮಾಡಿಕೊಳ್ಳುವುದು ಅಗತ್ಯವಾಗಿದೆ ಎಂದು ಶ್ರೀನಿವಾಸರಾಯರು ಸಾರಿ ಹೇಳಿದ್ದಾರೆ.

ಕೇರಳದ ಮುಖ್ಯಮಂತ್ರಿ ಪಟ್ಟಂಥಾನು ಪಿಳ್ಳೆಯವರು ಕೇರಳ ಪ್ರದೇಶವು ಗೋಕರ್ಣದವರೆಗೆ ಸಮುದ್ರ ದಂಡೆಯಗುಂಟ ಇತ್ತೆಂದು ಹೇಳಿದರು. ಬೆಂಗಳೂರಿನಲ್ಲಿ ದಿನಾಂಕ 1.10.1961 ರಂದು ಕೇರಳ ಸಮಾಜದವರಿಗೆ ಇಂಥ ಭಾಷಣ ಮಾಡಿ ಈ ರೀತಿ ಉಪದೇಶಿಸಿದ್ದು ಉಂಟು. 'ನಮ್ಮ ರಾಷ್ಟ್ರದಲ್ಲಿ ಈಗ ಅನೇಕ ಸಮಸ್ಯೆಗಳಿವೆ. ಗುಂಪು ಕಟ್ಟಿಕೊಂಡು ಆ ಸಮಸ್ಯೆಗಳಲ್ಲಿ ತೊಡಕನ್ನುಂಟು ಮಾಡುವುದು ವಿಹಿತವಲ್ಲ. ಬೆಂಗಳೂರಿನಲ್ಲಿ ನೆಲೆಸಿದ ಕೇರಳಿಗರಾದ ನೀವು ಈ ಕನ್ನಡ ಜನತೆಯ ಸಂಗಡ ಸ್ನೇಹ ಸೌಹಾರ್ದಗಳಿಂದ ನಡೆದು ಕೊಂಡರೇನೇ ಸಂಯುಕ್ತ ಭಾರತವನ್ನು ನಾವು ಕಟ್ಟುವುದು ಸಾಧ್ಯವಾಗುವುದು' ಎಂದು ಕೇರಳದ ಮಂತ್ರಿಗಳ ಹಾರ್ದಿಕ ಭಾಷಣವನ್ನು ಬೇರೆ ಬೇರೆ ದೃಷ್ಟಿಕೋನಗಳ ಮಾರ್ಮಿಕವಾದ ಅರ್ಥವನ್ನು ವಾಚಕರೇ ಮಾಡಿಕೊಳ್ಳತಕ್ಕದ್ದು ಎಂದು ಶ್ರೀನಿವಾಸರಾಯರು ಅರ್ಥೈಸಿಕೊಳ್ಳುವ ಭಾರವನ್ನು ವಾಚಕರಿಗೆ ಬಿಟ್ಟಿದ್ದಾರೆ.

## ರಾಜಾಜಿ ಬರಹಕ್ಕೆ ತೀವ್ರ ಪ್ರತಿಕ್ರಿಯೆ

ಕರ್ನಾಟಕ ಏಕೀಕರಣ ಮತ್ತು ನಾಮಕರಣಕ್ಕಾಗಿ ಅವಿರತವಾಗಿ ಶ್ರಮಿಸುತ್ತಿದ್ದ ಶ್ರೀನಿವಾಸರಾಯರಿಗೆ ಕ್ರಿ.ಶ. 1967-68 ರಲ್ಲಿ ಅತೀ ನಿಕಟವರ್ತಿಗಳಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿದ್ದ ಪ್ರೋ. ಹಂ.ಪ. ನಾಗರಾಜಯ್ಯನವರು ಒದಗಿಸಿದ ಕ್ರಿ.ಶ. 1968 ರ ಒಂದು ಕರಪತ್ರದಿಂದ ಶ್ರೀನಿವಾಸರಾಯರಿಗಿದ್ದ ಕನ್ನಡದ ಹುಚ್ಚು, ಕನ್ನಡದ ಕೆಚ್ಚು ಎಂತಹದು ಎಂಬುದನ್ನು ತಿಳಿಸುವಂತಹ ಒಂದು ಘಟನೆಯ ವಿವರ ಹೀಗಿದೆ.

ಭಾರತದ ಮಾಜೀ ಗವರ್ನರ್ ಜನರಲ್ ಮತ್ತು ಸ್ವತಂತ್ರ ಪಕ್ಷದ ಪಿತಾಮಹ ಎನಿಸಿದ ಚಕ್ರವರ್ತಿ ರಾಜಗೋಪಾಲಾಚಾರಿ (ರಾಜಾಜಿ) ಯವರ 13-1-1968 ರ 'ಸ್ವರಾಜ್ಯ' ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನ ಕನ್ನಡದ ಇರವನ್ನೇ ಪ್ರಶ್ನಿಸುವಂತಹದಾಗಿದ್ದು ನಖಶಿಖಾಂತ ಕನ್ನಡಿಗರಾದ ಶ್ರೀನಿವಾಸರಾಯರಂಥವರನ್ನು ಕೆರಳಿಸಿದ ಸಂಗತಿಯಾಯಿತು. ಇಲ್ಲಿ ರಾಜಾಜಿಯವರ ಆಶಯ ಏನೆಂದರೆ 'ಆಡುನುಡಿಯಾದ ಕನ್ನಡಭಾಷೆ ಎಂಬುದು ಆರಂಭದ ಕ್ರೈಸ್ತ ಪಾದ್ರಿಗಳು ಪುನರ್ರೂಪಿಸಿರುವ ಮತ್ತು ತೆಲುಗು ಲಿಪಿಯಲ್ಲಿ

ಬರೆಯಲಾಗುತ್ತಿರುವ ತಮಿಳು ಭಾಷೆ ಆಗಿದೆ' ಎಂಬುದಾಗಿತ್ತು. ಈ ರೀತಿ ಕನ್ನಡ ಭಾಷೆಗೆ ಆಗುತ್ತಿರುವ ಅವಮಾನ, ತೇಜೋವಧೆಯನ್ನು ಸಹಿಸಲಾರದೆ 72 ವರ್ಷ ವಯಸ್ಸಾಗಿದ್ದ ಶ್ರೀನಿವಾಸರಾಯರು ತಣ್ಣಗೆ ಮಲಗಿದ್ದ ಕನ್ನಡಿಗರನ್ನು ಬಡಿದೆಬ್ಬಿಸಿ ಕನ್ನಡದ ಉಳಿವಿಗೆ ಹೋರಾಡುವ ಸಂಕಲ್ಪ ಮಾಡಿದರು. ಸ್ವಂತ ವಾಹನವಾಗಲೀ, ದೂರವಾಣಿ ಸೌಕರ್ಯವಾಗಲೀ ಇರದಿದ್ದ ಅಂದಿನ ದಿನದಲ್ಲಿ ಪತ್ರಕರ್ತರನ್ನು, ಸಾಹಿತಿಗಳನ್ನು ಪದೇ ಪದೇ ಸಂಪರ್ಕಿಸಿ ಎಚ್ಚರಿಸಿದ್ದರಲ್ಲದೇ ಕನ್ನಡನಾಡಿನಲ್ಲಿ ರಾಜಾಜಿಯಂಥವರ ಹೆಸರಿನ ಬೆಂಗಳೂರಿನ 'ರಾಜಾಜಿ ನಗರ' ಎಂಬ ಹೆಸರನ್ನು ಬದಲಾಯಿಸಿ 'ವಿಜಯನಗರ' ಎಂದು ಮರುನಾಮಕರಣ ಮಾಡಬೇಕೆಂದು ಕರೆ ಕೊಡುವ ಕಿರು ಕರ ಪತ್ರಗಳನ್ನು 5000 ದಷ್ಟು ಪ್ರತಿಗಳನ್ನು ಮುದ್ರಿಸಿ, ರಾಜಾಜಿ ನಗರದಲ್ಲಿರುವವರ ಮನೆ ಮನೆಗೆ, ಅಂಗಡಿಗಳಿಗೆ ಹಂಚಿದರು. ಅಲ್ಲದೇ ಹಾದಿ ಬೀದಿಗಳಲ್ಲಿ ಹೋಗುತ್ತಿರುವವರಿಗೂ ಕರ ಪತ್ರಗಳನ್ನು ಕೊಟ್ಟು ಕರ್ನಾಟಕದಲ್ಲಿ ಕನ್ನಡಕ್ಕಾಗಿರುವ ಅವಮಾನವನ್ನು ವಿವರಿಸುತ್ತಿದ್ದರು. ರಾಜಾಜಿ ಹೇಳಿಕೆ ಸರಿಯಲ್ಲ, ಕನ್ನಡವು ತೆಲುಗು ಲಿಪಿಯನ್ನನುಸರಿಸಿದೆ ಎಂಬುದು ಶುದ್ಧ ಹಾಸ್ಯಾಸ್ಪದ ಹೇಳಿಕೆ ಎಂಬುದಾಗಿ ಪ್ರತಿಭಟಿಸಿದರು.

ಕನ್ನಡದ ಪ್ರಥಮ ಶಾಸನದ ಕಾಲ ಕ್ರಿ.ಶ. 450 ಕ್ಕೆ ಸೇರಿದ ಹಲ್ಮಿಡಿ ಶಾಸನ. ಕನ್ನಡದ ಮೊದಲನೇ ಗ್ರಂಥ ಕಾಲ 9ನೇ ಶತಮಾನದ ಕವಿರಾಜ ಮಾರ್ಗ. ತೆಲುಗುಲಿಪಿ ಕಂಡುಬರುವ 300 ವರ್ಷ ಮುಂಚೆಯೇ ಸ್ವತಂತ್ರ ಕನ್ನಡ ಲಿಪಿ ಬೆಳೆದಿತ್ತೆಂಬುದು ಸ್ಪಷ್ಟ ಸಂಗತಿ. ಕನ್ನಡಕ್ಕೆ 6000 ವರ್ಷಗಳ ಪ್ರಾಚೀನತೆ ಇದೆ ಎಂಬುದನ್ನು ಆಧಾರಗಳ ಸಂಗ್ರಹಣೆ ಮೂಲಕ ವಿವರಿಸಿದರು. ಇಷ್ಟಿದ್ದಾಗಿಯೂ ಮುದ್ರಣದ ಅನುಕೂಲಕ್ಕಾಗಿ 19ನೇ ಶತಮಾನದಲ್ಲಿ ಮಂಗಳೂರಿನ ಬಾಸೆಲ್ ಮಿಶನ್‌ನವರು ಕೆಲವು ಬದಲಾವಣೆಗಳನ್ನು ಮಾಡಿದರು. ಕ್ರಿಶ್ಚಿಯನ್ ಮಿಶನರಿಗಳು ತಿದ್ದಿದ ಮಾತ್ರಕ್ಕೆ ಕನ್ನಡ ಲಿಪಿ ತೆಲುಗು ಲಿಪಿಯಾಗುವುದಿಲ್ಲ. ಇದನ್ನು ರಾಜಾಜಿ ತಿಳಿಯಬೇಕು. ರಾಜಾಜಿ ಹೇಳಿಕೆ ಶುದ್ಧ ತಪ್ಪು ಎಂಬುದಾಗಿ ವಾದ ವಿವಾದಗಳಿಂದ ಖಂಡಿಸಿದರು. ಈ ಪ್ರತಿಭಟನೆಗೆ ಬೆಂಬಲ ಇತ್ತವರು ಕನ್ನಡ ನಾಡಿನ ಗಣ್ಯರಾದ ಬಿ.ಶಿವಮೂರ್ತಿ ಶಾಸ್ತ್ರಿಗಳು, ಬಿ. ಪುಟ್ಟಸ್ವಾಮಯ್ಯ, ಡಾ. ಸೂರ್ಯನಾಥ ಕಾಮತ್, ಡಾ. ತಿಪ್ಪೇರುದ್ರಸ್ವಾಮಿ, ಡಾ. ಹಾ.ಮಾ. ನಾಯಕ, ಡಾ.ಹಂ.ಪ. ನಾಗರಾಜಯ್ಯ, ಜಿ.ವಿ. ಹಳ್ಳಿಕೆರೆ, ಅಂದಾನಪ್ಪ ದೊಡ್ಡಮೇಟಿ ಮುಂತಾದವರೊಡನೆ ಶ್ರೀನಿವಾಸರಾಯರು ರಾಜಾಜಿಯವರ ಹೇಳಿಕೆಯನ್ನು ಪ್ರತಿಭಟಿಸಿದರು.

'ಭಾಷೆ ಜನಾಂಗದ ಜೀವ ನಾಡಿ. ಆದ್ದರಿಂದ ಒಂದು ಜನಾಂಗವನ್ನು ನಾಶ ಪಡಿಸಲು ಮೊದಲು ಅವರ ಭಾಷೆಯನ್ನು ನಾಶ ಮಾಡು' ಎಂಬುದಾಗಿ ಸುಪ್ರಸಿದ್ಧ ಫ್ರೇಂಚ್ ಸೇನಾಧಿಪತಿ ನೆಪೋಲಿಯನ್ ಹೇಳಿದ್ದಾನೆ. ಭಾರತದ ಸಂಪರ್ಕ ಭಾಷೆಯ ನೆಪದಲ್ಲಿ ಹಿಂದಿಯನ್ನು ಹೇರಿ ಪ್ರಾಂತೀಯ ಭಾಷೆಗಳನ್ನು

ತುಳಿಯ ಹತ್ತಿದ್ದ ಸೇಠ ಗೋವಿಂದದಾಸ ಮತ್ತು ಅವರ ಅನುಯಾಯಿಗಳ ಪ್ರಯತ್ನ ಒಂದೆಡೆ. 'ಆಂಗ್ಲಭಾಷೆಯ ದಬ್ಬಾಳಿಕೆಯಿಂದ ಮಾತೃ ಭಾಷೆ ಸೊರಗ ಹತ್ತಿರುವದರಿಂದ ಮಾತೃಭಾಷೆಗೆ ಪ್ರಾಮುಖ್ಯ ಕೊಡಬೇಕೆಂದರೆ 'ಆಂಗ್ಲ ಭಾಷೆಯನ್ನು ತೊರೆದರೆ ಜಗತ್ತೇ ಅಂಧಕಾರದಲ್ಲಿ ಕವಿದಂತೆ' ಭಾವಿಸುವ ಮಿಶನರಿಗಳ ಎಂಜಲು ತಿನ್ನುವವರ ತಂಡ ಇನ್ನೊಂದೆಡೆ. ಹಿಂದಿ ವಿರೋಧಿ ಮುಖವಾಡಧರಿಸಿದ ಭಾಷೆಗಳ ವೈರತ್ವ ಮೂಡಿಸಿ ದಕ್ಷಿಣ ಭಾರತವನ್ನಾಳುವ ಸಂಚಿನ ಡಿ.ಎಂ.ಕೆ. ಪಕ್ಷದ ಹೊಂಚಿನಲ್ಲಿ ಕನ್ನಡದ ಉಳಿವಿನ ಬಗ್ಗೆ ಕನ್ನಡಿಗರು ಚಿಂತಿಸಬೇಕು ಎಂದು ಶ್ರೀನಿವಾಸರಾಯರೇ ಸಾರಿದರು. ಕನ್ನಡವನ್ನು ಜಾಗೃತಗೊಳಿಸಿ ಕನ್ನಡ ಗ್ರಂಥಗಳನ್ನೋದಲು ಅಭ್ಯಾಸ ಮಾಡಿ, ಕ್ರಿಯಾಶೀಲ ಸಾಹಿತ್ಯವನ್ನು ಸೃಷ್ಟಿಸಿ ನೊಬೆಲ್ ಪಾರಿತೋಷಕಗಳನ್ನು ಗಳಿಸಬೇಕು ಎಂಬುದಾಗಿ ಕನ್ನಡಿಗರನ್ನು ಅವರು ಹುರಿದುಂಬಿಸಿದರು. ರಾಜಾಜಿ ಹಾಗೂ ಅವರ ಅನುಯಾಯಿಗಳಿಗೆ ಪ್ರತಿಭಟನೆ ತೋರಬೇಕಾದರೆ ಕನ್ನಡ ಜಾಗೃತಗೊಳಿಸಬೇಕೆಂದು ಸಂಕಲ್ಪಿಸಿ 'ಕನ್ನಡ ಜಾಗೃತಿ ಪರಿಷತ್' ಏರ್ಪಡಿಸಿ ಕನ್ನಡ ಸರ್ವ ಕಾಲಕ್ಕೂ ಚಿರನೂತನ ಚಿರವಿನೂತನ ಎಂದು ಘೋಷಿಸಿದರು. 'ರಾಜಾಜಿ ಕನ್ನಡಕ್ಕೆ ಅಪಮಾನ ಮಾಡಿದ್ದಾರೆ ಗೊತ್ತೇ?' ಎಂದು ವಿವರಿಸುತ್ತಿದ್ದ 72ರ ತರುಣ ಶ್ರೀನಿವಾಸರಾಯರನ್ನೂ ಅವರ ಹುರುಪನ್ನೂ ಮೆಚ್ಚಿಕೊಂಡ ಹಂ.ಪ.ನಾ. ಅವರು ರಾಜಾಜಿನಗರದ ಹೆಸರು ಬದಲಾಗದಿದ್ದರೂ, ಶ್ರಮ ಫಲಿಸದಿದ್ದರೂ 'ನಾವು ಯಾವ ವ್ಯಕ್ತಿ ದೊಡ್ಡವರೆಂದು ತಿಳಿದಿದ್ದೆವೋ ಅವರಿಗಿಂತ ಕನ್ನಡ ದೊಡ್ಡದು' ಎಂಬ ನಂಬಿಕೆಯಿದ್ದ ಶ್ರೀನಿವಾಸರಾಯರನ್ನು ಗೌರವದಿಂದ ಸ್ಮರಿಸಿದ್ದಾರೆ.

## 'ನಾಮಕರಣ'ದ ನಂತರ

ಮುಂದೆ ಕ್ರಿ.ಶ. 1973 ರಲ್ಲಿ ದೇವರಾಜ ಅರಸರ ನೇತೃತ್ವದಲ್ಲಿ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂಬ ನಾಮಕರಣವಾಗಲು ಶ್ರೀನಿವಾಸರಾಯರು ತಮ್ಮ ಕನಸು ನನಸಾಯಿತೆಂದು ಹೆಮ್ಮೆಯಿಂದ ಸಂಯುಕ್ತ ಕರ್ನಾಟಕ ಕಚೇರಿಯಲ್ಲಿ ಹೇಳಿಕೆ ನೀಡಲು ಬಂದಾಗ ಅವರನ್ನು ಭೇಟಿಯಾದ ಸುರೇಂದ್ರ ದಾನಿಯವರು ಅಪರಿಮಿತ ಆನಂದದ ಹೊಳೆಯಲ್ಲಿ ಕೊಚ್ಚಿಹೋಗುತ್ತಿದ್ದ ಶ್ರೀನಿವಾಸರಾಯರ ಸಂತಸದ ಚಿತ್ರಣವನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ದಾನಿಯವರು ಶ್ರೀನಿವಾಸರಾಯರನ್ನು ಕುರಿತು 'ರಾಯರೇ ಏಕೀಕರಣವೂ ಆತು ನಾಮಕರಣವೂ ಆತು. ನಿಮಗೆ ಇನ್ನೇನೂ ಕೆಲಸ ಉಳೀಲಿಲ್ಲ ಹೌದಲ್ಲೋ?' ಎನ್ನಲು ಅದಕ್ಕೆ ಉತ್ತರವಾಗಿ ಶ್ರೀನಿವಾಸರಾಯರು – 'ಹಾಂಗಂತೂ ನಾ ತಿಳಿದಿಲ್ಲ; ಇನ್ನೂ ಕೆಲಸ ಅದ ಅನ್ನೋದಕ್ಕ ನಾ ನಮಿಗ ಲಗೂನ ಉತ್ತರ ಕೊಡತೀನಿ' ಎಂದು ಹೇಳಿ ಮುಂದೆ ಕೆಲ ದಿನಗಳಲ್ಲೇ 'ಏಕೀಕರಣವೂ ಆಯಿತು, ನಾಮಕರಣವೂ

ಆಯಿತು, ಮುಂದೇನು?' ಎಂಬ ಶೀರ್ಷಿಕೆಯಿಂದಲೇ ಸುದೀರ್ಘ ಲೇಖನವನ್ನು ಬರೆದು ಕೊಟ್ಟರು. ಇದರಲ್ಲಿ ಮುಖ್ಯವಾಗಿ ಏಕೀಕರಣ ಕಾರ್ಯಕರ್ತರ ಕಾರ್ಯ ಮುಗಿಯಲಿಲ್ಲ, ನಾವು ಸಮೃದ್ಧ ಕರ್ನಾಟಕದ ನಿರ್ಮಾಣಕ್ಕೆ ತೊಡಗಬೇಕೆಂಬ ವಿವರಣೆಯಿಂದ ಕೂಡಿದ ಕಿರು ಹೊತ್ತಿಗೆಯನ್ನು ಹೊರ ತಂದು ಕರ್ನಾಟಕದ ಆಗಿನ ಸಮಸ್ಯೆಗೆ ಪರಿಹಾರ ಸಿಗಲಿ ಎಂದು ಹಂಚಿದರು. ದಾನೀಯವರನ್ನು ಕಂಡಾಗಲೆಲ್ಲ 'ದಾನೀಯವರ, ನೀವು ಆ ಪ್ರಶ್ನೆ ಕೇಳಿ ಭೊಲೋ ಮಾಡಿದ್ರಿ' ಎಂದು ಅವರನ್ನು ಶ್ಲಾಘಿಸುತ್ತಿದ್ದರೆಂದು ದಾನೀಯವರು ಹೇಳಿದ್ದಾರೆ. ಈ ನಿಟ್ಟಿನಲ್ಲಿ ಕೆಲಸಕ್ಕಾಗಿ ಶ್ರೀನಿವಾಸರಾಯರು ತರುಣನಿರಲಿ, ಹಿರಿಯರಿರಲಿ, ಯಾರಿಂದ ಯಾವ ಕೆಲಸ ಸಾಧ್ಯವೆಂಬುದನ್ನು ಗುರುತಿಸಿ ಅವರಿಗೆ ತಕ್ಕ ಸ್ಥಾನ ಮಾನಗಳನ್ನೊದಗಿಸಿ ಒಣ ಪ್ರತಿಷ್ಠೆಗೊಳಗಾಗದೆ ಹೆಸರಿಗಾಗಲೀ, ಪದವಿಗಾಗಲೀ ಅಪೇಕ್ಷೆ ಮಾಡದೇ ಕರ್ನಾಟಕದ ಸರ್ವಾಂಗೀಣ ಏಳಿಗೆಗಾಗಿ ಸಮೃದ್ಧ ಕರ್ನಾಟಕದ ನಿರ್ಮಾಣಕ್ಕಾಗಿ ವೇದಿಕೆಯೊಂದನ್ನು ಸಿದ್ಧ ಪಡಿಸಿದರು.

ಸರ್ಕಾರದ ಮೇಲೆ ಒತ್ತಡ ಹೇರುವ ಉದ್ದೇಶದಿಂದಾಗಿ ಪ್ರೋ. ಜವರೇ ಗೌಡರ ಅಧ್ಯಕ್ಷತೆಯಲ್ಲಿ 'ಕರ್ನಾಟಕ' ನಾಮಕರಣದ ನಂತರ 'ಕರ್ನಾಟಕ ಸಮೃದ್ಧಿ ಸಂಯೋಜನಾ ಪರಿಷತ್ತು' ಎಂಬ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದರು. ಕರ್ನಾಟಕದ ಸಾಧನ ಸಂಪತ್ತುಗಳ ಸರಿಯಾದ ಉಪಯೋಗವಾಗುವಂಥ ಯೋಜನೆಯುಳ್ಳ ಈ ಸಂಸ್ಥೆಯಲ್ಲಿ ಶ್ರೀನಿವಾಸರಾಯರು ಹಾಗೂ ಕೆ.ಎಫ್. ಪಾಟೀಲರು ಉಪಾಧ್ಯಕ್ಷರಾಗಿದ್ದರು. ನ್ಯಾಯಮೂರ್ತಿ ತುಕೋಲರು ಗೌರವಾಧ್ಯಕ್ಷರಾಗಿದ್ದರು. ನ್ಯಾಯಮೂರ್ತಿ ಎಸ್.ಎಸ್. ಮಳೀಮಠರು ಕೋಶಾಧ್ಯಕ್ಷರಾಗಿದ್ದರು. ಡಾ.ಸೂರ್ಯನಾಥ ಕಾಮತ ಮತ್ತು ಎಂ.ಎಸ್. ವ್ಯಾಸರಾವ್ ಕಾರ್ಯದರ್ಶಿಗಳಾಗಿದ್ದರು. ಜಿಜ್ಞಾಸೆಯಿಂದ ಕೂಡಿದ ಈ ಸಂಸ್ಥೆಯಲ್ಲಿ ಕೃಷ್ಣ-ಕಾವೇರಿ ಜಲವಿವಾದ, ಕರ್ನಾಟಕ ಸಾರಿಗೆ ವ್ಯವಸ್ಥೆ, ಹುಬ್ಬಳ್ಳಿ-ಕಾರವಾರ ರೈಲು ಮತ್ತು ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆಗಳಾದವು. ಹುಮ್ಮಸ್ಸಿನಿಂದ ಆರಂಭಗೊಂಡ ಸಂಸ್ಥೆ 15-16 ತಿಂಗಳುಗಳ ನಂತರ ಕ್ಷೀಣಗೊಂಡಿತು. ಶ್ರೀನಿವಾಸರಾಯರ ಅಸ್ವಸ್ಥತೆಯೂ ಕಾರಣವಾಗಿ ಈ ಸಂಸ್ಥೆ ಸ್ಥಗಿತಗೊಂಡಿತು. ಇದರ ಅಭಿವೃದ್ಧಿಯ ಯೋಜನೆಯಲ್ಲಿದ್ದ ಶ್ರೀನಿವಾಸರಾಯರು 'ನಖಶಿಖಾಂತ ಕನ್ನಡಿಗನಾದ ನನ್ನ ಕನಸು' ಎಂಬ ಲೇಖನದಲ್ಲಿ ತಮ್ಮ ಕನಸನ್ನು ಸ್ಪಷ್ಟ ಪಡಿಸಿದ್ದಾರೆ ಮತ್ತು ನನಸಾಗಿಸಲು ಶ್ರಮಿಸಿದ್ದಾರೆ.

ಕ್ರಿ.ಶ. 1974 ಡಿಸೆಂಬರ್‌ನ 'ಕರ್ನಾಟಕ ಸಂಮೃದ್ಧಿ ಸಂಯೋಜನಾ' ತ್ರೈ ಮಾಸಿಕದಲ್ಲಿ ಪ್ರಕಟಗೊಂಡ ವಿಷಯದ ಸಾರಾಂಶ ಹೀಗಿದೆ:

ಕಾರವಾರ ಬಂದರು ಸ್ಥಾಪನೆಯಾಗ ಬೇಕೆಂಬ ಕನಸು: ಜಗತ್ತಿನ ಶ್ರೇಷ್ಠತಮ ಹಾಗೂ ಬೃಹದಾಕಾರದ ಹಡಗುಗಳು ತಂಗುವ ಯೋಗ್ಯತೆ

ಕಾರವಾರ ಸಮುದ್ರಕ್ಕಿರುವವದರಿಂದ ಮತ್ತು ದೊಡ್ಡ ಹಡಗುಗಳಿಗೆ ಸಮುದ್ರದ ತೆರೆಗಳ ಆಕಸ್ಮಿಕ ಉಬ್ಬರದ ಆಘಾತ ಮತ್ತು ವಿಧ್ವಂಸಕ ಬಿರುಗಾಳಿಯ ಅಪಾಯ ತಟ್ಟದಂತೆ ಸೃಷ್ಟಿದೇವತೆ ಕಾರವಾರ ಬಂದರನ್ನು ಸುದೈವದಿಂದ ಸೃಜಿಸಿರುವುದರಿಂದ ಈ ಬಂದರು ಕರ್ನಾಟಕದ ಔದ್ಯೋಗಿಕ ಹಾಗೂ ವ್ಯಾಪಾರೀ ಏಳಿಗೆಗೆ ಮೂಲಾಧಾರವಾಗಿರುವುದರಿಂದ ಕರ್ನಾಟಕದ ಜಿಲ್ಲೆಗಳಲ್ಲಿ ಹುದುಗಿ ಕೊಂಡಿರುವ ನಾನಾ ಸ್ವರೂಪದ ಕಚ್ಚಾ ವಸ್ತುಗಳನ್ನು ಪರದೇಶಗಳಿಗೆ ರವಾನಿಸಿ ಶ್ರೇಷ್ಠದರ್ಜೆಯ ರಫ್ತು ವ್ಯಾಪಾರವಾಗುವಂತೆ ಕನ್ನಡಿಗರನ್ನು ಜಾಗೃತಗೊಳಿಸುವ ಯೋಜನೆ ಸೂಚಿಸಿದರು. ನೌಕಾ ಖಾತೆಯನ್ನು ಕಾರವಾರದಲ್ಲಿ ತೆರೆದರೆ ಯುದ್ಧದ ಹಡಗುಗಳನ್ನು ಸಹ ಭಾರತಕ್ಕೆ ಈ ಬಂದರವೇ ಪೂರೈಸಿಕೊಡಬಲ್ಲದು. ಕಾರವಾರದ ಬಂದರು ನಿರ್ಮಾಣ ಅಖಂಡ ಕರ್ನಾಟಕದ ಆರ್ಥಿಕ ಚಟುವಟಿಕೆಗಳಿಗೆ ಮೂಲಾಧಾರ ಎಂದು ಆ ಕಾಲದಲ್ಲೇ ವಾದಿಸಿದರು.

ಕರ್ನಾಟಕ ಬಂದರಿನ ಮುಖಾಂತರವಾಗಿ ದಕ್ಷಿಣ ಭಾರತದ ಸರಕುಗಳನ್ನು ಏಡನ್ ಮುಖಾಂತರವಾಗಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಮುಂಬೈ, ಮದ್ರಾಸು, ಕಲಕತ್ತಾ ಇಡೀ ಭಾರತದ ಆರ್ಥಿಕ ಪ್ರಗತಿಗೆ ಮುಲಾಧಾರವಾಗಿರುವಂತೆ ಕರ್ನಾಟಕದ ಈ ಬಂದರು ಕರ್ನಾಟಕದ ಆರ್ಥಿಕ ಚಟುವಟಿಕೆಯ ಬೆನ್ನೆಲುಬಾಗಿರುವುದರಿಂದ ಪ್ರಗತಿಯ ಕೇಂದ್ರವಾಗಬಹುದೆಂಬ ನಿಧಾನದ ಸತ್ಯವನ್ನು ಅಂದೇ ಅರುಹಿದರು.

ಕ್ರಿ.ಶ. 1956 ರಲ್ಲಿ ಕರ್ನಾಟಕ ರಾಜ್ಯ ನಿರ್ಮಾಣವಾದಂದಿನಿಂದಲೂ ಆಂಧ್ರಾ, ಗುಜರಾತ, ಮಹಾರಾಷ್ಟ್ರಗಳ ರೈಲ್ವೇ ಸಂಪರ್ಕಗಳು ನಿರ್ಮಾಣಗೊಂಡಂತೆ ಕರ್ನಾಟಕದ ರೈಲ್ವೇ ಸಂಪರ್ಕವು ದೂರದ ಪಟ್ಟಣಗಳಿಗೆ ಹೆಣೆದು ಕೊಂಡಿಲ್ಲ ಎಂಬುದನ್ನು ಸ್ಪಷ್ಟಪಡಿಸಿ ರೈಲ್ವೇ ಸಂಪರ್ಕದ ಮಹತ್ವವನ್ನು ಹೆಚ್ಚಿಸಿದರು.

ಸಾಂಸ್ಕೃತಿಕ ಸಮೃದ್ಧಿಯ ಕನಸು: ಕರ್ನಾಟಕ ಸಂಮೃದ್ಧಿ ಸಂಯೋಜನಾ ಪರಿಷತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಕರ್ನಾಟಕದ ಅಖಂಡತ್ವದ ಕಲ್ಪನೆಯನ್ನು ಮೂಡಿಸಲು ಯತ್ನಿಸಿದರು. ಕರ್ನಾಟಕದ 19 ಜಿಲ್ಲೆಗಳ ಪರಸ್ಪರ ಸಂಪರ್ಕ ರೈಲ್ವೇಯಿಂದ ಒದಗಿ ಬರುವುದಲ್ಲದೇ ಕನ್ನಡ ಸಾಹಿತ್ಯ ಪರಿಷತ್ತಿನ ಸಾಂಸ್ಕೃತಿಕ ಚಟುವಟಿಕೆಗಳಿಂದ ಕನ್ನಡತ್ವದ ಸಂದೇಶವು ಕರ್ನಾಟಕದ ಮೂಲೆ ಮೂಲೆಗಳಿಗೂ ಮುಟ್ಟುವಂತೆ ಶಾಲೆ, ಕಾಲೇಜು, ಸಂಘ, ಸಂಸ್ಥೆ, ಗ್ರಂಥಾಲಯಗಳಲ್ಲಿ ಕರ್ನಾಟಕದ ಅಖಂಡತ್ವದ ಕಲ್ಪನೆಯನ್ನು ಪ್ರಚಾರ ಮಾಡುವ ಉಪನ್ಯಾಸ ಮಾಲಿಕೆಗಳೇರ್ಪಡಬೇಕು. ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳ ಆಕರ್ಷಣೆ ಹೆಚ್ಚಿಸಿ ಅನುಕೂಲಕರ ದರಗಳನ್ನು ಒದಗಿಸಿ ಸ್ಥಳಗಳ ಮಹತ್ತರವನ್ನರಹುವ ಯೋಜನೆಯಾಬೇಕು. ಕರ್ನಾಟಕ ಸರಕಾರ ವಯಸ್ಕರ ಶಿಕ್ಷಣವನ್ನು ಚುರುಕುಗೊಳಿಸುವ ಯೋಜನೆಯಾಗಬೇಕು. ಕೇಂದ್ರ ಮತ್ತು

ರಾಜ್ಯ ಸರಕಾರೀ ಕಚೇರಿ, ಕರ್ಖಾನೆಗಳಲ್ಲಿ ಕನ್ನಡವರಿಯದ ಅಧಿಕಾರಿಗಳಿಗೆ ಕನ್ನಡ ಪ್ರಚಾರಕ್ಕೆ ಒತ್ತು ಕೊಟ್ಟು ಪರಿಷತ್ತು ಗಮನ ಹರಿಸಬೇಕು. ಕನ್ನಡ ನಾಟಕ ಸಂಘಗಳು ನಾಡಹಬ್ಬ, ರಾಜ್ಯೋತ್ಸವ ಸಮಯದಲ್ಲಿ ಮತ್ತು ಬೇಸಿಗೆ ರಜಾದಿನಗಳಲ್ಲಿ ಪರಿಷತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ಸಾಂಸ್ಕೃತಿಕ ಸಂಪರ್ಕವನ್ನು ಹೆಚ್ಚಿಸ ಬೇಕು. ಜಿಲ್ಲಾ ಗೋಷ್ಟಿ, ನಿಬಂಧ ಸ್ಪರ್ಧೆ ಏರ್ಪಡಿಸಿ ಬಹುಮಾನ ನೀಡಿ ಉತ್ತೇಜಿಸಬೇಕು. ಈ ಸ್ಪರ್ಧೆಗಳಿಗೆ ವಿಷಯ ಕರ್ನಾಟಕದ ಸಮಸ್ಯೆಗಳೇ ಆಗಿರಬೇಕು ಹಾಗೂ ಭಾಷೆ ಕಡ್ಡಾಯವಾಗಿ ಕನ್ನಡವೇ ಆಗಿರಬೇಕೆಂದು ಎಚ್ಚರಿಸಿದ್ದರು. ಆಗಿನ್ನೂ ಹೊಸದಾಗಿ ಸ್ಥಾಪಿತಗೊಂಡಿದ್ದ ಈ ಸಂಸ್ಥೆಯಲ್ಲಿ ನಿಧಿಯ ಕೊರತೆ ಇದ್ದುದರಿಂದ ಈ ತಮ್ಮ ಕನಸನ್ನು ನನಸಾಗಿಸಲು ಕನ್ನಡದ ಅಭಿಮಾನಿಗಳು, ದಾನಿಗಳು ಮುಂದೆ ಬರಬೇಕೆಂಬುದು ಸಹ ತಮ್ಮ ಮತ್ತೊಂದು ಕನಸೆಂದು ಸ್ಪಷ್ಟಪಡಿಸಿದರು. (ಇವೆಲ್ಲ 1974ರಲ್ಲಿ ಪ್ರಕಟಿಸಿದ ಆಶಯಗಳು) ಸಮೃದ್ಧ ಕರ್ನಾಟಕದ ಕನಸುಗಾರರಾದ ಶ್ರೀನಿವಾಸರಾಯರನ್ನು ಧಾರವಾಡದ ಖ್ಯಾತ ಪತ್ರಿಕೋದ್ಯಮಿ ಮೆಳ್ಳೀಗಟ್ಟಿಯವರು 'ಕರ್ನಾಟಕ ಪರ 'ಧರ್ಮಯುದ್ಧದ ಯೋಧ' ಎಂದಿದ್ದಾರೆ. (ಕ್ರುಸೇಡರ್ ಫಾರ್ ಕರ್ನಾಟಕ).

## 'ಕನ್ನಡಕ್ಕಾಗಿ ಛಲ'

ಕ್ರಿ.ಶ. 1920 ರಿಂದಲೇ ಸ್ವಾತಂತ್ರ್ಯಯೋಧರಾದ ಶ್ರೀನಿವಾಸರಾಯರು ತಮ್ಮ 78 ನೇ ಪ್ರಾಯದಲ್ಲಿ ಸರಕಾರಿ ಇಲಾಖೆಗಳಿಗೆ ಸಂಬಂಧಿಸಿದಂಥ ತಮ್ಮ ಕೆಲವು ಅನುಭವಗಳನ್ನು ಕುರಿತು ದಿ. 23-11-1972 ರ 'ಇಂಡಿಯನ್ ಎಕ್ಸಪ್ರೆಸ್' ಪತ್ರಿಕೆಗೆ ಅವರು ಬರೆದ ಪತ್ರದ ಕನ್ನಡಾನುವಾದದ ಒಂದು ನಮೂನೆಯ ಸಾರಾಂಶ ಹೀಗಿದೆ:

ಒಮ್ಮೆ ಶ್ರೀನಿವಾಸರಾಯರು ಬೆಂಗಳೂರಿನ ಶೆಷಾದ್ರಿಪುರಂ ಸಾರ್ಟಿಂಗ್ ಆಫೀಸಿನಲ್ಲಿ ಬೆಂಗಳೂರು ಮತ್ತು ವಿಜಾಪುರಗಳ ನಡುವಿನ ಪತ್ರಗಳ ಬಟಾವಣೆ ತಡವಾಗುತ್ತಿದ್ದ ಸಂಬಂಧವಾಗಿ ವಿಚಾರಿಸಲು, ಸಂಬಂಧಿತ ಅಧಿಕಾರಿ ತನಗೆ ಕನ್ನಡ ಬರುವುದಿಲ್ಲವೆಂದೂ ತನ್ನ ಸಹಾಯಕನಿಗೆ ವಿಚಾರಿಸಿಕೊಳ್ಳುವಂತೆ ಹೇಳಿ ವಿಜಾಪುರ ಜಿಲ್ಲೆಯು ಮೈಸೂರು ಅಂಚೆಯ ವ್ಯಾಪ್ತಿಯಲ್ಲಿ ಬರುವುದೇ ಎಂದು ಪ್ರಶ್ನಿಸಲು ಕನ್ನಡ ಪ್ರೇಮಿ ಶ್ರೀನಿವಾಸರಾಯರು ಅವಕ್ಕಾದರು. ಇದೇ ರೀತಿ ಒಮ್ಮೆ ಹಣಪಾವತಿಸಲು ಮನಿಯಾರ್ಡರ್ ಫಾರ್ಮನ್ನು ಕನ್ನಡದಲ್ಲಿ ಭರ್ತಿ ಮಾಡಿದ್ದರಿಂದ ಸಂಬಂಧಿತ ವ್ಯಕ್ತಿ ಆ ಫಾರ್ಮನ್ನು ಇಂಗ್ಲೀಷಿನಲ್ಲಿ ಭರ್ತಿಸಿ ಕೊಡಬೇಕೆಂದು ಹೇಳಿ ಶ್ರೀನಿವಾಸರಾಯರ ಕಡೆಗೆ ಎಸೆಯಲು ಅವರು ಸಹ ಆ ವ್ಯಕ್ತಿಗೆ 'ಕನ್ನಡದಲ್ಲಿ ಬರೆದ ಪತ್ರವನ್ನು ಸ್ವೀಕರಿಸುವುದಿಲ್ಲ' ಎಂದು ಬರೆದು ಕೊಡಲು ಕೇಳಿ ತಮ್ಮ ಮನವಿಗೆ ಉತ್ತರಿಸುವವರೆಗೂ ಕದಲದೇ ಅಲ್ಲಿಯೇ ನಿಲ್ಲಲು ಕಡೆಗೆ ಶ್ರೀನಿವಾಸರಾಯರನ್ನು ಕೆಕ್ಕರಿಸಿ ನೋಡುತ್ತ ಮನಿಯಾರ್ಡರ್

ಫಾರ್ಮನ್ನು ಸ್ವೀಕರಿಸಿ ಪಾವತಿ ಕೊಟ್ಟನೆಂದು ಬರೆದಿದ್ದಾರೆ. ಇದರಂತೆಯೇ ಮತ್ತೊಮ್ಮೆ ಶ್ರೀನಿವಾಸರಾಯರು ತಂತಿ ಸಂದೇಶವೊಂದನ್ನು ಕಳಿಸಲು ತಂತಿ ಕಚೇರಿಗೆ ಹೋದಾಗ ವಿಳಾಸವನ್ನು ಇಂಗ್ಲೀಷಿನಲ್ಲಿ ಬರೆದು ಕೊಡಲು ಗುಮಾಸ್ತ ಕೇಳಲು 'ತಂತೀ ಕಳಿಸುವವರ ವಿಳಾಸವೂ ಇಂಗ್ಲೀಷಿನಲ್ಲಿರಬೇಕೆಂಬ ಯಾವ ನಿಯಮವಿದೆ ವಿವರಿಸಿ' ಎಂದು ಧೃಡವಾಗಿ ಪ್ರಶ್ನಿಸಲು ಗುಮಾಸ್ತ ತಂತಿ ಸಂದೇಶವನ್ನು ಸ್ವೀಕರಿದನೆಂದು ಬರೆದಿದ್ದಾರೆ.

ಇಂತಹ ಅನೇಕ ಪತ್ರಗಳನ್ನು, ಅನುಭವಗಳನ್ನು ಬರೆಯುತ್ತಲೇ ಇದ್ದರು. ಆ ಕಾಲದಲ್ಲಿ ಅವರ ಕನ್ನಡದ ಹುಚ್ಚನ್ನು ಅರಿತವರೆಷ್ಟೋ ಗೊತ್ತಿಲ್ಲ.

ಕನ್ನಡಿಗರಿಗೆ ರೈಲ್ವೆಗಳಿಂದಾಗಬೇಕಾದ ಲಾಭಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ರೈಲುಮಾರ್ಗಗಳ ಸುಧಾರಣೆಗಾಗಿ, ಅಂಕಿ ಅಂಶಗಳನ್ನೊಳಗೊಂಡ, ಸೂಕ್ತ ಸೂಚನೆಗಳನ್ನೊಳಗೊಂಡ, ಅಧ್ಯಯನಶೀಲ ಲೇಖನಗಳನ್ನು ಗಣ್ಯಪತ್ರಿಕೆಗಳಲ್ಲಿ ಬರೆಯುತ್ತಿದ್ದರು. ಪ್ರಾದೇಶಿಕ ರೈಲ್ವೆ ಕಚೇರಿಗಳ ನಿರ್ವಾಹಕರನ್ನು ಖುದ್ದಾಗಿ ಹೋಗಿ ಮೇಲಿಂದ ಮೇಲೆ ಭೇಟಿಯಾಗಿ ಕನ್ನಡದಲ್ಲಿ ರೈಲ್ವೆ ಟಿಕೆಟುಗಳನ್ನು ಹಾಗೂ ವೇಳಾ ಪಟ್ಟಿಗಳನ್ನು ಮುದ್ರಿಸಬೇಕೆಂದು ಮತ್ತು ನಿಲ್ದಾಣಗಳ ಫಲಕಗಳು ಕನ್ನಡದಲ್ಲಿರಬೇಕೆಂದು ಸತತವಾಗಿ ಒತ್ತಾಯಿಸುತ್ತಿದ್ದರು. ಇವರ ಸತತ ಪ್ರಯತ್ನದಿಂದಾಗಿ ರೈಲ್ವೆ ಬೋರ್ಡ್ ಇವರ ಸೂಚನೆಗಳ ಬಗ್ಗೆ ಮನವರಿಕೆ ಮಾಡಿಕೊಂಡು ಆ ಸಲಹೆಗಳನ್ನು ಹೊಸ ವೇಳಾಪಟ್ಟಿಯಲ್ಲಿ ಸೇರಿಸುತ್ತಿದ್ದರು. ಹೊಸ ರೈಲುಮಾರ್ಗಗಳ ಬಗ್ಗೆ, ಗೇಜ್ ಪರಿವರ್ತನೆಗಳ ಬಗ್ಗೆ ಶ್ರೀನಿವಾಸರಾಯರು ಇಂತಹ ಸೂಚನೆಗಳು ಐದು ದಶಕಗಳ ನಂತರ ಕಾರ್ಯರೂಪಕ್ಕೆ ಬಂದಿರುವ ಉದಾಹರಣೆಗಳಿವೆ. ಕನ್ನಡದಲ್ಲಿ ಟಿಕೆಟುಗಳ ಮುದ್ರಣ, ರೈಲ್ವೇ ವೇಳಾಪಟ್ಟಿಗಳ ಮುದ್ರಣ ಮತ್ತು ಕನ್ನಡದಲ್ಲಿ ನಿಲ್ದಾಣಗಳ ಫಲಕಗಳು ಬರುವಂತೆ ಸತತ ಪ್ರಯತ್ನಗೈದರಲ್ಲದೇ ಕನ್ನಡದ ವೇಳಾ ಪಟ್ಟಿಗಳು ಮಾರಾಟವಾಗದು ಎಂಬ ತಕರಾರಿಗೆ ಉತ್ತರವಾಗಿ ಸ್ವಂತ ಖರ್ಚಿನಿಂದ ನೂರಾರು ಪ್ರತಿಗಳನ್ನು ಖರೀದಿಸಿ ಹಂಚಿದ ಈ ಕನ್ನಡ ಪ್ರೇಮಿಯ ಕನ್ನಡದ ಹುಚ್ಚು ವರ್ಣನಾತೀತ. ಐತಿಹಾಸಿಕ, ಪೌರಾಣಿಕ ಕನ್ನಡ ಚಲನ ಚಿತ್ರಗಳಲ್ಲಿ ಮಮತೆ, ಅಭಿರುಚಿ ಮೂಡಿಸಲು ತಮ್ಮ ಸ್ವಂತ ಖರ್ಚಿನಿಂದ ಟಿಕೇಟು ಖರೀದಿಸಿ ಕುಟುಂಬದವರನ್ನು, ಮಿತ್ರರನ್ನು, ನೆರೆಹೊರೆಯವರನ್ನು ಕರೆದೊಯ್ಯುತ್ತಿದ್ದ ಕನ್ನಡ ಅಭಿಮಾನಿ. ಇದು ಅವರು ಬಾಗಲಕೋಟೆಯಲ್ಲಿ ಇದ್ದಾಗ ನಡೆಸಿದ ಹವ್ಯಾಸ, ಅಲ್ಲಿ ಕನ್ನಡ ಚಿತ್ರಗಳು ಬರುವುದೇ ಅಪರೂಪ.

ಒಮ್ಮೆ ಶ್ರೀನಿವಾಸರಾಯರು ನ್ಯಾಯಮೂರ್ತಿ ಎಸ್.ಎಸ್. ಮಳೀಮಠರನ್ನು ಭೇಟಿಯಾಗಲು ಅವರ ಮನೆಗೆ ಹೋದಾಗ ಅವರ ಮಗ (ಮುಂದೆ ನ್ಯಾಯಮೂರ್ತಿ) ವಿಜಯಕುಮಾರರ ಹೆಸರಿನ ಫಲಕ ಇಂಗ್ಲೀಷಿನಲ್ಲಿ

ಇದ್ದುದನ್ನು ಕಂಡು ನೋವು ತುಂಬಿದ ಧನಿಯಲ್ಲಿ 'ಏನಪ್ಪಾ ವಿಜಯ ಕುಮಾರ, ನಿನ್ನ ಹೆಸರಿನ ಫಲಕ ಇಂಗ್ಲೀಷಿನಲ್ಲಿ ಮಾತ್ರ ಇದೆ, ಕನ್ನಡದಲ್ಲೂ ಬರೆಸಬಾರದಿತ್ತೇ, ಕನ್ನಡದಲ್ಲಿ ಬರೆಸಲು ಎಷ್ಟು ರೂಪಾಯಿಯಾದೀತು ಹೇಳು, ನಾನು ಕೊಡುವೆ. ಮುಂದಿನ ಸಲ ನಿಮ್ಮ ಮನೆಗೆ ಬರುವದರೊಳಗೆ ಕನ್ನಡದಲ್ಲಿ ಬರೆದ ನಿನ್ನ ಹೆಸರಿನ ಫಲಕ ನನ್ನನ್ನು ಸ್ವಾಗತಿಸಬೇಕು' ಎಂದಿದ್ದರಂತೆ. ತಕ್ಷಣವೇ ವಿಜಯಕುಮಾರರು ಕ್ಷಮೆ ಕೇಳಿ ಎರಡು ದಿನದಲ್ಲಿ ಕನ್ನಡದ ಫಲಕವನ್ನು ಬರೆಸಿ ಹಾಕಿದ್ದರೆಂದು ತಮ್ಮ 'ಒಲವಿನ ಗೆಳೆಯ' ಎಂಬ ಲೇಖನದಲ್ಲಿ ಶ್ರೀ ವಿಜಯಕುಮಾರ ಹೇಳಿದ್ದಾರೆ ಮತ್ತು ತಮ್ಮ ಮೇಲೆ ಪ್ರಭಾವ ಬೀರಿದ ಭೀಷ್ಮರು ಎಂಬುದಾಗಿ ಗೌರವದಿಂದ ಶ್ರೀನಿವಾಸರಾಯರನ್ನು ನೆನೆದಿದ್ದಾರೆ. ಈ ರೀತಿಯಾಗಿ ಸಣ್ಣ-ದೊಡ್ಡ ಎಲ್ಲ ವಯಸ್ಸಿನವರಿಗೂ ಮನ ಪರಿವರ್ತಿಸಿದ ಇಂತಹ ಉದಾಹರಣೆಗಳು ಸಾಕಷ್ಟಿವೆ.

ಕ್ರಿ.ಶ. 1954 ರ ವೇಳೆಯಲ್ಲಿ ಬಾಗಲಕೋಟೆಯ ರೈಲು ನಿಲ್ದಾಣದಲ್ಲಿ ಮಳೆಯಲ್ಲಿ ನೆಂದು ಬಿಸಿಲಲ್ಲಿ ಬೆಂದು ಮರದ ನೆರಳಿನ ಆಸರೆ ಸಾಲದೇ ಬವಣೆಪಡುತ್ತಿದ್ದ ಪ್ರವಾಸಿಗರ ಪರವಾಗಿ ಪತ್ರಿಕೋದ್ಯಮಿಯಾಗಿದ್ದ ಶ್ರೀನಿವಾಸರಾಯರು ಮೇಲಧಿಕಾರಿಗಳೊಡನೆ ಚರ್ಚಿಸಿ, ಬಾಗಲಕೋಟೆ ನಿಲ್ದಾಣದಲ್ಲಿ ಪ್ಲಾಟಫಾರಂಗೆ ಮೇಲ್ಛಾವಣಿ ವ್ಯವಸ್ಥೆಯಾಗುವಂತೆ ಮಾಡಿದರು.

## ಖಾದೀ ಪ್ರೇಮ

ಕ್ರಿ.ಶ. 1920 ರ ನಾಗಪುರ ಕಾಂಗ್ರೆಸ್ಸಿಗೆ ಹೋಗಿಬಂದಾಗಿನಿಂದಲೇ ಶ್ರೀನಿವಾಸರಾಯರು ಖಾದಿ ವ್ರತ ತೊಟ್ಟಿದ್ದರು. ಸಹಧರ್ಮಿಣಿಯಾದ ಸೌ. ಲಕ್ಷ್ಮೀಬಾಯಿ ಸಹ ಖಾದಿಧಾರಿಯಾಗುವವರೆಗೂ ಅವರು ಮುಟ್ಟಿದ ಪಾತ್ರೆ, ಬಟ್ಟೆಗಳನ್ನು ಮುಟ್ಟುತ್ತಿರಲಿಲ್ಲ. ಮಕ್ಕಳಿಗೂ ಸಹ ಖಾದಿ ತೊಡಲು ಕಡ್ಡಾಯ ವಿಧಿಸಿದ್ದರು. ಗಾಂಧೀವಾದಿಯಾಗಿದ್ದ ಅವರ ದೇಶ ಭಕ್ತಿ, ದೇಶ ಪ್ರೇಮ ತೋರಿಕೆಯದಾಗಿರಲಿಲ್ಲ. ಜೀವನ ಪರ್ಯಂತ ಶ್ರೀನಿವಾಸರಾಯರು ಖಾದಿ ಧೋತರ, ಅಂಗಿ, ಜುಬ್ಬಾ, ಜಾಕೀಟು, ಕೋಟು, ತಲೆಗೆ ಕಟ್ಟುತ್ತಿದ್ದ ಮಫ್ಲರು, ಹಾಸಿಕೊಳ್ಳುತ್ತಿದ್ದ ಪಲ್ಲಂಗಪೂಸು, ಹೊದೆಯುತ್ತಿದ್ದ ಹೊತ್ತಿಗೆ, ಕರವಸ್ತ್ರ ಸಹಿತವಾಗಿ ಎಲ್ಲವೂ ಖಾದಿಯದೇ ಆಗಿದ್ದವು.

ಮೊಮ್ಮಕ್ಕಳಾದ ನಾವು ಅವರೊಡನೆ ಕಳೆದದಿನಗಳಲ್ಲಿ ನಾವಿನ್ನೂ ಬಹಳ ಚಿಕ್ಕವರು. ಮೊಮ್ಮಕ್ಕಳೆಂದರೆ ಶ್ರೀನಿವಾಸರಾಯರಿಗೆ ಅತೀವವಾದ ಮಮಕಾರ. ಅಂತೆಯೇ ನಾವು ಅವರೊಡನೆ ಬಹಳ ಸಲುಗೆಯಿಂದ ಇರುತ್ತಿದ್ದೆವು. ಆದರೆ ಬಹಳ ಗೌರವದಿಂದ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದೆವು. ಅವರ ವ್ಯಕ್ತಿತ್ವವೇ ಅಂತಹದಾಗಿತ್ತು. ತಮ್ಮನ್ನು ತಾವು ಎಂದೂ ಪ್ರಶಂಶಿಸಿಕೊಳ್ಳುತ್ತಿರಲಿಲ್ಲ.

ಸದಾನಿರತ ವ್ಯಕ್ತಿಯಾದ ಇವರಿಗೆ ಪುರುಸೊತ್ತೇ ಇರುತ್ತಿರಲಿಲ್ಲ. ಸದಾಕಾಲವೂ ಯಾರಾದರೂ ಜನ ಬಂದು ಹೋಗುತ್ತಿರುತ್ತಿದ್ದರು. ಅವರ ಕಾರುಬಾರು ಏನೆಂದು ಯಾವುದೂ ತಿಳಿಯುತ್ತಿರಲಿಲ್ಲ. ಶಾಲೆಯಲ್ಲಿ ನಮ್ಮ ಗೆಳತಿಯರು 'ನಿಮ್ಮ ತಾತಾ ಏನು ಮಾಡುತ್ತಾರೆ' ಎಂದು ಕೇಳಿದಾಗಲೂ 'ನಮ್ಮ ತಾತಾ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು' ಎಂದು ಹೇಳುತ್ತಿದ್ದದ್ದು ನೆನಪಿದೆ. ನಮ್ಮ ಅಜ್ಜ ಶ್ರೀನಿವಾಸರಾಯರು ಸ್ವಾತಂತ್ರ್ಯ ಹೋರಾಟಗಾರರೆಂದು, ಗಾಂಧೀವಾದಿಯೆಂದು, ಖಾದಿಧಾರಿಗಳೆಂದು, ಶಿಸ್ತಿನ ವ್ಯಕ್ತಿಯೆಂದು ತಿಳಿದುಕೊಂಡಿದ್ದೆ ಅಷ್ಟೆ. ಮುಗ್ಧತೆಯ ಸೀಮಾವಧಿಯಲ್ಲಿ ಹೂತಿದ್ದ ನಾನು ಅವರನ್ನು ಅರಿತಿರಲೇ ಇಲ್ಲ. ಅವರು ಸಮಾಜ ಸೇವೆಯೆಂದು ವರ ಹಾಗೂ ಕನ್ಯಾದವರಿಗೆ ಪರಿಚಯಿಸಿ ಕೊಡುತ್ತಿದ್ದರು. ಆ ದಿನಗಳಲ್ಲಿ ಈಗಿನಂತೆ ವ್ಯವಸ್ಥಿತವಾದ ವಧು ವರ ಅನ್ವೇಷಣಾ ಪದ್ಧತಿ ಇರಲಿಲ್ಲ. ಗುರುತು ಪರಿಚಯದವರಿಂದಲೇ ಹೊಂದಿಕೆಯಾಗುತ್ತಿತ್ತು. ಇದಲ್ಲದೇ ಮದುವೆ ಮಧ್ಯಸ್ತಿಕೆದಾರರು ಶುಲ್ಕ ತೆಗೆದು ಕೊಂಡು ಪರಿಚಯ ನೀಡುವವರಿದ್ದರು. ಆದರೆ ಶ್ರೀನಿವಾಸರಾಯರು ಐಚ್ಛಿಕವಾಗಿ, ಸಮಾಜ ಕಲ್ಯಾಣಕ್ಕಾಗಿ, ಪರೋಪಕಾರ ಭಾವದಿಂದ ಈ ಸೇವೆ ಮಾಡುತ್ತಿದ್ದರು. ಇದರಿಂದಾಗಿ ಮನೆಗೆ ಬರುವ ಹೋಗುವ ಜನ ಇದ್ದೇಇರುತ್ತಿತ್ತು. ಇವರು ಪ್ರತಿಯೊಂದು ವಿಷಯದಲ್ಲೂ ಸೂಕ್ಷ್ಮತೆಯನ್ನು ಪಾಠಿಸುತ್ತಿದ್ದರು. ಮನೆಗೆ ಯಾರು ಬಂದರೂ, ಯಾವುದೇ ವೇಳೆಯಲ್ಲಿ ಬಂದರೂ ಆದರದಿಂದ ಸತ್ಕರಿಸುತ್ತಿದ್ದರು.

ಬಾಗಲಕೋಟೆಯ ಭವ್ಯ ಭವನವನ್ನು ತೊರೆದು ಕ್ರಿ.ಶ. 1960 ರಿಂದ ಬೆಂಗಳೂರಿನಲ್ಲಿ ನೆಲೆಸಿದರು. ಮಲ್ಲೇಶ್ವರದಲ್ಲಿ ಬಾಡಿಗೆಮನೆಯಲ್ಲಿ ವಾಸಕ್ಕೆ ಬಂದಾಗ ನಮ್ಮ ಅಜ್ಜಿ, ತಂದೆ ತಾಯಿ, ಚಿಕ್ಕಪ್ಪ ಹಾಗೂ ಚಿಕ್ಕ ಮಗುವಾಗಿದ್ದ ನಾನು ನಂತರ ಮನೆ ಹೊಸ ಸದಸ್ಯರ ಬರುವಿನಿಂದ ತುಂಬಿತು. ನಾವು ಬೆಳೆದದ್ದು ಅದೇ ಮನೆಯಲ್ಲಿ. ಶ್ರೀನಿವಾಸರಾಯರ ಸಮಾಜಸೇವೆ, ಕನ್ನಡ ಸೇವೆ, ಅವರ ಸಂಗಡಿಗರು ನಮಗಿನ್ನೂ ಅರ್ಥವಾಗಿರದ ಅಂದಿನ ದಿನದಲ್ಲಿ ಮನೆಗೆ ಬರುತ್ತಿದ್ದ ಕೆಲವರ ಪರಿಚಯವಿತ್ತು. ಡಾ. ಸೂರ್ಯನಾಥ ಕಾಮತರು, ಅನ್ನದಾನಯ್ಯ, ಪುರಾಣಿಕರು ತಮ್ಮ ಐತಿಹಾಸಿಕ ಸಂಶೋಧನೆಯ ಮಾಹಿತಿಗಾಗಿ ಇವರ ಭೇಟಿಗೆಂದು ಬರುತ್ತಿದ್ದರು. ಶ್ರೀಮತಿ ಸರೋಜಿನಿ ಮಹಿಷಿಯವರು, ಎಸ್.ಎಸ್. ಮಳೀಮಠರು, ಡಾ. ವಿ.ಕೃ. ಗೋಕಾಕರು, ವ್ಹಿ.ಬಿ.ನಾಯಕರು, ಜೊರಾಪುರ ಕೃಷ್ಣರಾಯರು, ಜೊರಾಪುರ ಗುರುರಾಯರು, ಕೃಷ್ಣಾಚಾರ ಜೋಷಿಯವರು, ಹಂಪ ದಂಪತಿಗಳೂ, ಡಾ.ರಂ.ಶ್ರೀ. ಮುಗಳಿಯವರು, ಗಜೇಂದ್ರಗಡ ಶಾಮರಾಯರು, ಕಲ್ಲೂರು ಕೃಷ್ಣಕುಮಾರರು ಹೀಗೆ ಅನೇಕ ಗಣ್ಯ ವ್ಯಕ್ತಿಗಳು ಬರುತ್ತಿದ್ದರೆಂಬುದು ನೆನಪಿದೆ.

ದೇಶ ಸೇವೆ, ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದ ಮಹಾನ್ ವ್ಯಕ್ತಿ ಶ್ರೀನಿವಾಸರಾಯರು ಪರೋಪಕಾರಿ ಸ್ವಭಾವದ ಸರಳತೆಯ

ಸಾಕಾರ ಮೂರ್ತಿಯಾಗಿದ್ದರು. ಬೆಂಗಳೂರಿನಲ್ಲಿ ಗ್ರಂಥಿಕೆ ಅಂಗಡಿ ವ್ಯಾಪಾರಿಗೆ ಕೇರುಬೀಜ, ಧಾರವಾಡ ಅಡಿಕೆ ಮುಂತಾದ ಉತ್ತರ ಕರ್ನಾಟಕದ ಅಪರೂಪದ ಸಾಮಾನುಗಳನ್ನು ನಿಸ್ವಾರ್ಥತೆಯಿಂದ ಉಚಿತವಾಗಿಯೇ ತಂದುಕೊಡುತ್ತಿದ್ದರು. ಮೊಮ್ಮಕ್ಕಳ ಬಗ್ಗೆ ಅತೀವವಾದ ಮಮತೆ ಹೊಂದಿದ್ದ ಇವರು ತಾವು ಕಾರ್ಯನಿಮಿತ್ತವಾಗಿ ವಿಧಾನ ಸೌಧಾಕ್ಕೇ ಆಗಲಿ, ಮತ್ತೆಲ್ಲಿಗೇ ಆಗಲಿ ಹೊರಟಾಗ ತಮ್ಮೊಡನೆ ನಮ್ಮನ್ನು ಕರೆದೊಯ್ಯುತ್ತಿದ್ದರು. ಆಗಿನ್ನೂ ಹೊಸದಾಗಿ ಪರಿಚಿತವಾಗಿದ್ದ ಜಂಟಿವಾಹನ ಮತ್ತು ಅಟ್ಟದ ಬಸ್ಸಿನಲ್ಲಿ ನಮ್ಮನ್ನ ಕರೆದೊಯ್ಯುತ್ತಿದ್ದರು.

ಪುಟ್ಟಪರ್ತಿಯ ಶ್ರೀ ಸತ್ಯ ಸಾಯಿಬಾಬಾರ ದರ್ಶನಕ್ಕೆ ಪುಟ್ಟಪರ್ತಿಗೆ ಮತ್ತು ವೈಟ್‌ಫೀಲ್ಡಿನಲ್ಲಿರುವ ಬೃಂದಾವನಕ್ಕೆ ಅವರೊಡನೆ ಹೋಗಿ ಬರುತ್ತಿದ್ದೆವು. ಪ್ರತಿ ಗುರುವಾರ ಸಂಜೆ ಮನೆಯಲ್ಲಿ ಸಾಯಿಬಾಬಾರ ಭಜನೆ ಮಾಡುತ್ತಿದ್ದೆವು. ಧಾರ್ಮಿಕ ಆಚರಣೆಯಲ್ಲಿ ಇವರು ಬಹಳ ಮುತವರ್ಜಿ ವಹಿಸುತ್ತಿದ್ದರು. ಮನೆಯಲ್ಲಿ ಅನಂತಪದ್ಮನಾಭವ್ರತ, ವರಲಕ್ಷ್ಮೀವ್ರತ ಮುಂತಾದ ಹಬ್ಬದ ದಿನಗಳಲ್ಲಿ ಸೇವೆಯಲ್ಲಿ ತಮ್ಮ ಪಾಲೂ ಇರಲೆಂದು ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು. ದೇವರನಾಮ, ರಂಗೋಲಿ ಮುಂತಾದ ಕಲೆಗಳಿಗೆ ಇವರು ಬಹಳ ಉತ್ತೇಜಿಸುತ್ತಿದ್ದರು. ಈ ರೀತಿಯಾಗಿ ಪ್ರತಿ ವಿಷಯದಲ್ಲೂ ಸೂಕ್ಷ್ಮಾವಲೋಕನದ ಸ್ವಭಾವ ಅವರದಾಗಿತ್ತು.

ಶ್ರೀನಿವಾಸರಾಯರ ಕಿರಿಯ ಮಗ, ವ್ಹಿ.ಎಸ್. ಮಂಗಳವೇಢೆಯವರು ತಾವು ಆರು ವರ್ಷದ ಬಾಲಕನಾಗಿದ್ದಾಗಿನ ಒಂದು ಘಟನೆಯಿಂದ ಶ್ರೀನಿವಾಸರಾಯರ ದೇಶ ಭಕ್ತಿಯ ಮಹತ್ವದ ಪರಿಚಯ ಹೀಗೆ ಕೊಡುತ್ತಾರೆ: ಆಗಿನ್ನು ಸ್ವತಂತ್ರ ಚಳುವಳಿ ನಡೆಯುತ್ತಿದ್ದ ಕಾಲ. ಗಣೇಶ ಹಬ್ಬಕ್ಕೆ ತಾವು ಪಟಾಕಿ ಹಾರಿಸಲು ಇಚ್ಛಿಸಿ ಪಟಾಕಿ ಕೊಡಿಸಲು ತಮ್ಮ ತಂದೆಯವರನ್ನು ಕೇಳಲು ಅಪ್ಪಟ ಗಾಂಧೀವಾದಿ, ದೇಶಪ್ರೇಮಿಯಾದ ಶ್ರೀನಿವಾಸರಾಯರು ಗಾಂಧೀಜಿಯವರು ಜೈಲಿನಲ್ಲಿರುವಾಗ ಯಾವ ಸಡಗರ, ಹಬ್ಬ, ಆರತಿ, ಉತ್ಸವನ್ನು ಮಾಡಬಾರದೆಂದರು. ಗಾಂಧೀಜೀ ಜೈಲಿನಲ್ಲಿ ಯಾಕಿರುವರೆಂದೇ ತಿಳಿಯದ ಏನೂ ಅರ್ಥವಾಗದ ಆರು ವರ್ಷದ ಮುಗ್ಧಬಾಲಕ ಅಸಮಾಧಾನದಿಂದ ಮೊಂಡತನ ಮಾಡಲು ಶ್ರೀನಿವಾಸರಾಯರ ಗೆಳೆಯರು ಅವರನ್ನು ಸಂತೈಸಿ ಕನಿಷ್ಠ ಪ್ರಮಾಣದಲ್ಲಿ ಹಬ್ಬ ಆಚರಿಸುವಂತೆ ಅನುವು ಮಾಡಿಕೊಟ್ಟಿದ್ದರೆಂದು ಹೇಳಿದ್ದಾರೆ.

## ಸ್ವಾತಂತ್ರ್ಯ ಚಳವಳಿಯ ಕಷ್ಟಗಳು

ಶ್ರೀನಿವಾಸರಾಯರ ಹಿರಿಯ ಮಗ, ಶ್ರೀ ಆರ್.ಎಸ್. ಮಂಗಳವೇಢೆಯವರ ಅನುಭವ ಅವರ ನೆನಪಿನ ಸುಳಿಯಿಂದ ತಿಳಿದು ಬಂದ ಕೆಲವು ಕಟು ಸತ್ಯ ಹೀಗಿವೆ. ರಾಷ್ಟ್ರ ಸೇವೆಗಾಗಿ, ದೇಶದ ಹಿತಕ್ಕಾಗಿ, ಜೀವನವನ್ನು ತೇಯ್ದ ಶ್ರೀನಿವಾಸರಾಯರ ಜೈಲುವಾಸ ಕುಟುಂಬಕ್ಕೆ ಹಿತಕಾರಿಯಾಗಿರಲಿಲ್ಲ. ಶ್ರೀನಿವಾಸರಾಯರು ಜೈಲಿನಲ್ಲಿದ್ದಾಗ ಸಂಸಾರದ ಹೊಣೆಹೊತ್ತ ಹೆಣ್ಣು ಹೆಂಗಸು ತಮ್ಮ ತಾಯಿಗೆ ತಾವೇ ಬೆಂಬಲಿಗರಾಗಿ ನಿಂತು ವಯಸ್ಸಿಗೂ ಮೀರಿದ ವಿವೇಚನೆಯಿಂದ ಕಷ್ಟಗಳನ್ನೆದುರಿಸಿದ್ದರು. ತಮ್ಮ ತಂದೆ ಚಳುವಳಿಯ ಸಂಗಡಿಗರೊಂದಿಗೆ ಅಕಸ್ಮಾತಾಗಿ ಮನೆಗೆ ಬಂದರೆ ಅತಿಥಿ ಸತ್ಕಾರದಲ್ಲಿ ಯಾವ ರೀತಿಯಿಂದಲೂ ಚ್ಯುತಿ ಬರದಂತೆ ನೋಡಿ ಕೊಳ್ಳುತ್ತಿದ್ದರು. ಅಲ್ಪ ಸ್ವಲ್ಪ ತೋಟಗಾರಿಕೆ, ಹೈನುಗಾರಿಕೆಯನ್ನು ನೋಡಿಕೊಳ್ಳುತ್ತಿದ್ದರು. ಸಾಮಾನು ಕಾಳುಕಡಿಗಳನ್ನು ಖರೀದಿಸಿ ತರುವಾಗ ಅತೀವ ಮುಜುಗರದೊಂದಿಗೆ ಖಾತೆಬರೆಸಿತಂದು ಮತ್ತೆ ತಮ್ಮ ತಂದೆಯವರು ಜೈಲಿನಿಂದ ಮರಳಿ ಬರುವುದರಲ್ಲಿ ಚುಕ್ತಗೊಳಿಸಿರುತ್ತಿದ್ದರು. ಶಾಲೆಯ ರಜದ ದಿನಗಳಲ್ಲಿ ತಮ್ಮ ತಾಯಿಯ ತವರೂರಾದ ಅನಗವಾಡಿಗೆ ಹೋಗಿ ಇರುತ್ತಿದ್ದರು. ಇವರು ಸಹ ಸಮಾಜ ಸೇವೆ, ದೇಶ ಸೇವೆಯಲ್ಲಿ ಶ್ರದ್ಧೆ ವಹಿಸಿ ಪ್ರಭಾತ ಫೇರಿ, ಸೇವಾದಳ, ಚರಕಾ ನೂಲುವುದು ಮತ್ತಿರರ ಚಟುವಟಿಕೆಗಳಲ್ಲಿ ನಿರತರಾಗಿರುತ್ತಿದ್ದರು.

ಶ್ರೀನಿವಾಸರಾಯರು ತಮ್ಮ ಚಳುವಳಿ ಕಾಲದಲ್ಲಿನ ಸಾಲದ ಭಾರವನ್ನು ತಮ್ಮ ತಾಯಿಯಿಂದ ಬಳುವಳಿಯಾಗಿ ಬಂದಂತಹ ಬೀಳುಹೊಲದ ನಿವೇಶನಗಳನ್ನು ಮಾರಿ ತೀರಿಸಿದರು. ಉದಾರ ಹೃದಯಿಗಳಾದ ಇವರು ಗುಡಿಗಾಗಿ, ಶಾಲೆಗಾಗಿ, ನಗರ, ವನಕ್ಕಾಗಿ ಸಹ ನಿವೇಶನಗಳನ್ನು ಬಿಟ್ಟು ಕೊಟ್ಟಿದ್ದರು. ತಮ್ಮ ಮೂವರು ಮಕ್ಕಳಿಗೂ ನಿವೇಶನಗಳನ್ನು ಉಳಿಸಿದ್ದರು. ಆದರೂ ತಮ್ಮ ಮಕ್ಕಳಿಗೆ ಯಾವ ರೀತಿಯ ಸುಖ ನೀಡಲಾಗಲಿಲ್ಲವೆಂದು ತಮ್ಮ ಮುಪ್ಪಿನ ದಿನಗಳಲ್ಲಿ ವ್ಯಥಿಸುತ್ತಿದ್ದರು. ಜೀವನದಲ್ಲಿ ಶ್ರೀಮಂತಿಕೆಯನ್ನು ಅನುಭವಿಸಿ ಮರು ಪೀಳಿಗೆಗೂ ಉಳಿಸಬಹುದಾಗಿತ್ತು. ಆದರೆ, ಅಂದಿನ ದಿನದಲ್ಲಿ ದೇಶ ಭಕ್ತಿಯಿಂದ ಅವರಿಟ್ಟ ದಿಟ್ಟ ಹೆಜ್ಜೆಯಿಂದಾಗಿ ತಮ್ಮದೆಲ್ಲವನ್ನೂ ಕಳೆದು ಕೊಂಡಿದ್ದರೂ ಹೃದಯದ ಶ್ರೀಮಂತಿಕೆಗೆ ಮಾತ್ರ ಎಂದೂ ಕೊರತೆ ಇರಲಿಲ್ಲ. ಅವರ ವಿಶಾಲ ಹೃದಯದಲ್ಲಿ ನಾಡೇ ಅವರ ಮನೆ, ಕನ್ನಡ ನುಡಿಯೇ ಅವರ ಕೂಸಾಗಿತ್ತು.

ಶ್ರೀನಿವಾಸರಾಯರು ಚಳುವಳಿ ದಿನಗಳಲ್ಲಿ ಜೈಲುವಾಸದಲ್ಲಿದ್ದಾಗ ತಮ್ಮ ಮಗಳು, ಚಿ. ಮಂದಾಕಿನಿ (ಐದು ವರ್ಷದ ಬಾಲಕಿ) ತಂದೆಗೆ ದಾಳಿಂಬೆ ಹಣ್ಣು ಕೊಟ್ಟು ತಾನು ತಿನ್ನಬೇಕೆಂದು ಹಟಹಿಡಿದು ಸೆರೆವಾಸದಲ್ಲಿದ್ದ ತಂದೆಯ

ಭೇಟಿಗೆ ಬಂದಾಗ ತಂದಿದ್ದಳೆಂದು ಹೇಳುತ್ತಿದ್ದರು. ಈಕೆ ಸಹ ಎಂಟು ವರ್ಷದವಳಿದ್ದಾಗಿನಿಂದಲೇ ಚರಕಾ ನೂಲುವುದು, ಪ್ರಭಾತ ಫೇರಿ, ಸೇವಾದಳ ಮುಂತಾದ ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ದೇಶ ಪ್ರೇಮ ರಕ್ತದಲ್ಲೇ ಮೂಡಿ ಬಂದಿತ್ತು. ಮುಂದೆ ಕ್ರಿ.ಶ. 1947 ರ ಜನೆವರಿಯಲ್ಲಿ ಗಾಂಧಿವಾದಿಗಳೇ ಆಗಿದ್ದ ಶ್ರೀಶಂಕರರಾವ್ ಕುಲಕರ್ಣಿಯವರನ್ನು ಮದುವೆಯಾಗಿ ಈಕೆ ಹೈದ್ರಾಬಾದಿನಲ್ಲಿ ನೆಲೆಸಿದ್ದರು. ಶ್ರೀನಿವಾಸರಾಯರಿಗೆ ಮಗಳು ಮಂದಾಕಿನಿಯ ಮೇಲೆ ಅಪಾರವಾದ ಪ್ರೀತಿಯಿತ್ತು. ಅವರ ಮಗಳಿಗೆ ನಾನು ಸೊಸೆಯಾಗಬೇಕೆಂದು ಅವರು ಆಶಿಸಿದ್ದರು. ಅವರ ಕೋರಿಕೆ ನನ್ನ ಮನದಲ್ಲಿ ಬೇರೂರಿನಿಂತು ಅವರ ಸಮಕ್ಷಮದಲ್ಲೇ ಕ್ರಿ.ಶ. 1979 ರಲ್ಲಿ ನಮ್ಮ ಅತ್ತೆಯ ಮಗನೊಂದಿಗೆ ನನ್ನ ಮದುವೆ ನೆರವೇರಿತು. ನಮಗೆ ಅವರ ಆಶೀರ್ವಾದ ದಕ್ಕಿತು. ಕ್ರಿ.ಶ. 1980 ರಲ್ಲಿ ನನ್ನ ಚೊಚ್ಚಲ ಮಗ ಚಿ. ನಿಖಿಲನು ಮರಿ ಮೊಮ್ಮಗನಾಗಿ ಅವರ ಮಡಿಲು ತುಂಬಿ ಆಶೀರ್ವಾದ ಪಡೆದನು. ಹೆಂಡತಿ, ಮಕ್ಕಳು, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು, ಮರಿಮೊಮ್ಮಗನನ್ನು ಕಂಡು ತುಂಬು ಜೀವನ ನಡೆಸಿದ ಶ್ರೀನಿವಾಸರಾಯರು ಬೆಂಗಳೂರಿನಲ್ಲಿ ದಿನಾಂಕ 4–12–1980 ರಲ್ಲಿ ನಮ್ಮನ್ನಗಲಿದರು. ನಮ್ಮ ನಡುವೆ ಇಂದು ಅವರಿಲ್ಲವಾದರೂ ಭಾರತಾಂಬೆಯ ಸೇವೆ ಸಲ್ಲಿಸಿದ ನಿಜವಾದ ದೇಶಭಕ್ತರಾಗಿ ಇಡೀ ಕನ್ನಡನಾಡೇ ಸ್ಮರಿಸುವಂತೆ ಕನ್ನಡ ನಂದಾ ದೀಪ ಬೆಳಗಿ "ನಖಶಿಖಾಂತ ಕನ್ನಡಿಗ" ಎನಿಸಿದ್ದಾರೆ.

ಈ ರೀತಿ ನಖಶಿಖಾಂತ ಕನ್ನಡವನ್ನು ಹಮ್ಮಿಕೊಂಡಿದ್ದು, 'ನಿಂತರೆ ಕನ್ನಡ – ಕೂತರೆ ಕನ್ನಡ' ಎಂದು ಹಗಲಿರುಳೂ ಕನ್ನಡವನ್ನು ಕನವರಿಸಿದ ಶ್ರೀನಿವಾಸರಾಯರಿಗೆ ನಮ್ಮ ಈ ಪೀಳಿಗೆ ಭಕ್ತಿ, ಗೌರವ ತೋರಬೇಕೆಂದರೆ ನಾವು ಎಲ್ಲಿದ್ದರೂ ಕನ್ನಡವನ್ನು ಬಿಡಬಾರದು. ಅವರ ಮಹದಾಶೆಯ ಸೌಧವಾದ ಕನ್ನಡದ ಪದಗಳ ಉಳಿವಿನಿಂದ ಮಾತ್ರ ಅವರ ಆತ್ಮ ಆನಂದಗೊಳ್ಳುತ್ತದೆಂಬ ವಿಶ್ವಾಸ ಭಾವದಿಂದ ಈ ಪುಸ್ತಕವನ್ನು ಓದಿದ – ಓದುತ್ತಿರುವ ಕನ್ನಡದ ಬಂಧುಗಳಲ್ಲಿ ಯಾಚಿಸುವ ಮನವಿಯೇನೆಂದರೆ – ನಿಮ್ಮ ಮೊಟ್ಟ ಮೊದಲ ಪ್ರಯತ್ನ ನಿಮ್ಮ ಮಕ್ಕಳಿಂದ ಕನ್ನಡದಲ್ಲಿ ಆಪ್ಯಾಯತೆಯಿಂದ 'ಅಮ್ಮ' 'ಅಪ್ಪಾ' ಎಂದು ಕರೆಯಿಸಿಕೊಳ್ಳುವ ಔದಾರ್ಯತೆ ತೋರಿಸಿದರೆ ನಿಮ್ಮ ಮಕ್ಕಳಿಂದ ಎಂದರೆ ನಮ್ಮ ಮುಂದಿನ ಪೀಳಿಗೆಯಿಂದ ಒಂದು ಕನ್ನಡದ ಶಬ್ದವಾದರೂ ಉಳಿಯಿತೆಂದು ಅವರ ಮೊಮ್ಮಗಳಾಗಿ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ.